ರಂಗಭೂಮಿ

ಇಂದು ಜೀಕೆ ಮಾಸ್ತರರ ಪ್ರಣಯ ಪ್ರಸಂಗ




ವಿಶ್ವಪಥ ಕಲಾ ಸಂಗಮವು ಚಂದ್ರಶೇಖರ ಕಂಬಾರ ಅವರ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನವನ್ನು ಜೂನ್ 29ರಂದು ಶನಿವಾರ ಹಮ್ಮಿಕೊಂಡಿದೆ.

ರಚನೆ: ಡಾ: ಚಂದ್ರಶೇಖರ ಕಂಬಾರ, ರಂಗರೂಪ, ನಿರ್ದೇಶನ: ಭಾಸ್ಕರ್ ನೀನಾಸಂ

ಕಾರ್ಯಕ್ರಮ ನಡೆಯುವ ಸ್ಥಳ: ಬಿ.ಪಿ.ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್.ಸಂಜೆ. 7ಕ್ಕೆ. ಮಾಹಿತಿಗೆ: 9945977184

ರಾಜೀವ್ ತಾರಾನಾಥ್‌ಗೆ ನುಡಿ ನಮನ



ಸಾಹಿತಿ ಮತ್ತು ಕಲಾವಿದರ ವೇದಿಕೆಯು ಪ್ರಸಿದ್ಧ ಫೌಂಡೇಷನ್ ಸಹಯೋಗದೊಂದಿಗೆ ಜೂನ್ 30ರಂದು ಪಂಡಿತ್ ರಾಜೀವ್ ತಾರಾನಾಥ್ ಅವರಿಗೆ ನುಡಿ ನಮನ ಹಮ್ಮಿಕೊಂಡಿದೆ.

ನುಡಿನಮನ ಅರ್ಪಿಸುವವರು: ಜಿರಂಜೀವಿ ಸಿಂಗ್, ಐ.ಎಂ.ವಿಠಲ ಮೂರ್ತಿ, ಪ್ರತಿಭಾ ಪ್ರಹ್ಲಾದ್, ಸಿ.ಚಂದ್ರಶೇಖರ್, ಪ್ರೊ.ಕೃಷ್ಣ ಮನವಳ್ಳಿ. 'ರಾಜೀವ್ ತಾರಾನಾಥ್ ಮೆಲುಕು' ಸಾಕ್ಷ್ಯ ಚಿತ್ರ ಅರ್ಪಣೆ.

ಶಿಷ್ಯವೃಂದದಿಂದ ಸರೋದ್-ಸಿತಾರ್ ಜುಗಲ್‌ಬಂದಿ. **ಕಾರ್ಯಕ್ರಮ ನಡೆಯುವ ಸ್ಥಳ:** ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಏಟ್ರಿಯಾ ಹೋಟೆಲ್ ಎದುರು, ಪ್ಯಾಲೇಸ್ ರಸ್ತೆ. ಸಂಜೆ 4.30ರಿಂದ



'ಕನ್ಸ್ ಕಟ್ ಆದ್ರೆ' ನಾಟಕ ಪ್ರದರ್ಶನ

ಸೈಡ್‌ವಿಂಗ್ ಬೆಂಗಳೂರು ತಂಡದಿಂದ ಜೂನ್ 29ರಂದು ಶನಿವಾರ 'ಕನ್ಸ್ ಕಟ್ ಆದ್ರೆ' ನಾಟಕ ಪ್ರದರ್ಶನ ನಡೆಯಲಿದೆ.

ಯುವಕ ಹೇಗೆ ತನ್ನ ಯಶಸ್ಸಿನ ಹಾದಿಯಲ್ಲಿ ಹಗಲುಗನಸುಗಳ ಬೇಲಿಯನ್ನು ತಾನೇ ತಂದಿಟ್ಟುಕೊಂಡು ಅದರೊಳಗೆ ಬಂಧಿಯಾಗುತ್ತಾನೆ ಎನ್ನುವ ಕಥೆಯನ್ನು ಹೊಂದಿರುವ ನಾಟಕ ಇದಾಗಿದೆ. ಶೈಲೇಶ್ ಕುಮಾರ್ ಎಂ.ಎಂ. ಅವರು ರಚಿಸಿ, ನಿರ್ದೇಶಿಸಿರುವ ನಾಟಕವಿದು.

ಸ್ಥಳ: ಡಾ.ಸಿ.ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ. ಸಂಜೆ 7.30ಕ್ಕೆ.

ಯಕ್ಷ ಪಕ್ಷ

ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್ ಹಮ್ಮಿಕೊಂಡಿರುವ 'ಯಕ್ಷ ಪಕ್ಷ' ಪ್ರಯುಕ್ತ ಜೂನ್ 29ರಂದು ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ವಿರಚಿತ **'ಜಾಂಬವತೀ ಕಲ್ಯಾಣ'** ಪ್ರಸಂಗ ನಡೆಯಲಿದೆ. **ಕಾರ್ಯಕ್ರಮ ನಡೆಯುವ ಸ್ಥಳ:** ಮಹಾಗಣಪತಿ ದೇವಸ್ಥಾನ, ಪ್ಯಾರಾಮೌಂಟ್ ಗಾರ್ಡನ್, ತಲಘಟ್ಟಪುರ ಮೆಟ್ರೊ ನಿಲ್ದಾಣದ ಹತ್ತಿರ, ಕನಕಪುರ ರಸ್ತೆ. ಸಂಜೆ 5.30ಕ್ಕೆ

ಜೂನ್ 30ರಂದು ಬವಲಾಡಿ ಹಿರಿಯಣ್ಣ ಹೆಬ್ಬಾರ್ ವಿರಚಿತ **'ವಿಶ್ವಾಮಿತ್ರ ಮೇನಕೆ'** ಪ್ರಸಂಗ ಪ್ರದರ್ಶನ.

ಸ್ಥಳ: ಪದ್ಮಾಲಯ, ನಂ 2, 17ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, ಪದ್ಮನಾಭನಗರ. ಬೆಳಿಗ್ಗೆ 10ಕ್ಕೆ **ಹಿಮ್ಮೇಳದಲ್ಲಿ:** ಅನಂತ ಹೆಗಡೆ ದಂತಳಿಗೆ, ಎ.ಪಿ.ಫಾಟಕ್, ಕಾರ್ಕಳ, ಭಾವನಾ ಹೆಗಡೆ. **ಅರ್ಥಧಾರಿಗಳು:** ರಾಧಾಕೃಷ್ಣ ಕಲ್ಚಾರ್, ಹರೀಶ್ ಬೋಳಂತಿಮೊಗರು, ಸುಬ್ರಹ್ಮಣ್ಯ ಭಟ್ ಗುರ್ತೇಗದ್ದೆ, ಮಾಗೋಡು ಪ್ರಸನ್ನ.



ನಾಳೆ ಯಕ್ಷಗಾನ ತಾಳಮದ್ದಳೆ

ಸಪ್ತಕವು ಪಾರ್ತಿಸುಬ್ಬ ವಿರಚಿತ 'ವಾಲಿವಧೆ' ಯಕ್ಷಗಾನ ತಾಳಮದ್ದಳೆಯನ್ನು ಜೂನ್ 30ರಂದು ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ಭಾಗವತರು: ಗೋಪಾಲಕೃಷ್ಣ ಭಾಗವತ ಜೋಗಿಮನೆ, ಸತೀಶ ಉಪಾಧ್ಯ, ಮೃದಂಗ: ಪಿ.ಕೆ.ಹೆಗಡೆ, ಮಯೂರ ಹೆಗಡೆ. **ಮುಮ್ಮೇಳದಲ್ಲಿ** ಸುಗ್ರೀವ: ಶ್ರೀಧರ ಡಿ.ಎಸ್. ಕಿನ್ನಿಗೋಳಿ. ವಾಲಿ: ನಾರಾಯಣ ಯಾಜಿ ಸಾಲೇಬೈಲು, ರಾಮ: ಮೋಹನ ಹೆಗಡೆ ಹೆರವಟ್ಟಾ, ಹನುಮಂತ: ಡಾ. ಶ್ರೀಪಾದ ಹೆಗಡೆ ಹುಕ್ಲಮಕ್ಕಿ.

ಕಾರ್ಯಕ್ರಮ ನಡೆಯುವ ಸ್ಥಳ: ಸುಭಾಷ ಭವನ, ನೇತಾಜಿ, ಸುಭಾಷಚಂದ್ರ ಬೋಸ್ ಮುಖ್ಯರಸ್ತೆ, ಐಡಿಯಲ್ ಹೋಮ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ. ಸಂಜೆ 5 ಗಂಟೆಗೆ

ಚಿತ್ರಕಲಾ ಪ್ರದರ್ಶನ ಜುಲೈ 3ರಿಂದ

ಹೇಮಾ ವಿನಾಯಕ್ ಪಾಟೀಲ್ ಅವರ ಚಿತ್ರಕಲಾ ಪ್ರದರ್ಶನ 'ಕಲಾದರ್ಪಣ'ವನ್ನು ಜುಲೈ 3ರಿಂದ 7ರವರೆಗೆ ಆಯೋಜಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ನಿವೃತ್ತ ಐಎಎಸ್ ಅಧಿಕಾರಿ ಡಾ. ವಿಶ್ವನಾಥ್, ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಉಮೇಶ್ ಕುಮಾರ್ ಇರಲಿದ್ದಾರೆ.

ಕಾರ್ಯಕ್ರಮ ನಡೆಯವ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ. ಬೆಳಿಗ್ಗೆ 11ಕ್ಕೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

SALE BDA Anjanapura 5th G Block 30x40 south Facing 95 lakh also 40x60 west facing 9th Block. 9620041313, 9945373839

Arkavathi Layout

BDA-SITE FOR Sale Arkavathi Layout 15th Block 40x60. Jakkur Srirampura 5500sqft For Sale Call:7676900174 6363496142

Banashankari

BANASHANKARI 6TH Stage, 4th 'T' Block, 30x40 site for sale. Contact:- 9844006666.

FOR SALE BSK 6th Stage 11th Block 30x40 W/F Site No:804 NKB Reddy: 9739109093/ 9449164392

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stg BDA Sites Buying/ Selling 50x80,40x60,30x40, 20x30, Genuine Buyers/Sellers. Call: 9513332646/ 9902764626

SALE BSK 6th stage 4th B Block 40x60 west Facing 2Cr Also 40x60 Facing 6th Block 1.90Cr Negotiable all owners site 9945373839, 9620041313

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

Basaweshwaranagar

SALE BASAWESHWARNAGAR 40x62 BDA site, South facing, Near Pavithra Paradise, Havanur circle, clear titles, Brokers Excuse. 9900276199.

Chamarajpet

SALE SITE 43x88 West facing Clear Titles behind TR Mills, Chamrajpet 16000/- Sqft Negotiable. 9880167521

Jayanagar

"JAYANAGAR 4TH-BLOCK 45x90 West facing Site with old house, Excellent Location, Brokers Excuse. 9845500019/ 7019314962"

Kengeri

SITE FOR sale Kengeri Kodipalya 30×40 West facing BBMP 'B' Katha Bank loan available Price: 65,00,000 Contact: 9035699974

Kanakapura Road

SALE BDA approved Balaji Layout Kanakapura Road 30x40 East Facing near Metro Station Rate 1.25Cr. 9945373839, 9620041313

SALE NARAYANA Nagar 1st Block 40x60 South Facing 500 metres Metro Station, Kanakapura Road. 9945373839, 9620041313

Kempegowda Layout

***NADAPRABHU* KEMPEGOWDA** Layout1st Block K sector 30x40 W/F 82 lakhs,9th Block D sector 82x65 South East corner commercial site. ₹6500/-.Contact: 9686469799

KEMPEGOWDA LAYOUT, BDA SITE FOR SALE 20x30, 30x40, 40x60, 50x80, Contact Kumar: 9945119449

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

Magadi Road

40*60 PLOT SF BBMP A katha 40 feet road Rs 12100/- negotiable BEL Layout II stage Magadi Road Contact: 7892059756.

Multiple Locations

A-KHATA SITES for Sale in Harulkunta, Kudlu near HSR Layout and Converted Sites for Sale in Devasandra Village, K.R.Puram. Contact: 9845539612.

Nagarabhavi

DC CONVERTED SITE SALE 50X80 EAST FACING BBMP A KATHA NEAR ULLAL RTO: 6366232222/ 6366242222

Yalahanka New Town

40X70 W/F ROSEBAY GATED COMMUNITY RESIDENTIAL Site Sale, Prime Location Bagalur Main Road Srinivasapura Call.9591013777

Nelamangala

JC REAL ESTATE NNT Layout, BGS College, Pillhalli, Baktanapalya, Arasinakunte Commercial Sites, Residential Sites Buy /Sale. Chandu 8546975878 Jagruth 9980457779

NELAMANGALA NEAR BGS Medical Collage Arasinakunte, KALPATARU Layout, NDA 'A' Katha East 3270Sft: 9448735404/ 9353348309

R T Nagar

ANAND NAGAR 40x60, W/F, site 'A' Khata for sale. Behind U.A.S Campus close to New Airport Road. 9972849555.

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

"40X60 BDA Site for sale Vishweshwariah 6th Block near Kodugu Samaja Choultry. Rs.9900/- P.Sft. Contact: 7892224597"

BDA SITE SALE VISHWESHWARAIAH LAYOUT 1ST BLOCK 30X40 SOUTH FACING GOOD LOCATION CONTACT: 8217392686/ 9980433004

DIRECT OWNER 30X40, 20X30 SITE FOR SALE. Vishweswaraiah Layout, Near Vidyanikethan School, Contact: 8971851966, 9880781399

BDA SITE for sale
@ Vishweshwaraiah Layout, 3rd Block 20×30 west
Owner contact
8217686742

"30X40 WEST facing BDA site Sale 40`feet Road Vishveshwaraiah Layout 7th Block. 9845500019/ 7019314962"

"SALE 30X40 East facing BDA Site 40`feet Road 5th Block Vishveshwaraiah Layout. 9845500019/ 7019314962"

Yelahanka

"A-KHATA SITE sale in Nehru Nagar, Shivanahalli village, Yelahanka 20x75 Price ₹10,000/- Per Sqft. 9092028055"

Bidadi

BIDADI KAIDB NEAR COCACOLA 5 BIG CONVERTED SITES 60X150 FOR GODOWN, PG LABOUR QUARTERS, 80FT 50FT APPROACH ROADS 2300/- PSFT NEGOTIABLE: MALLESH 9743865623

Chennapatna

BMICAPA APPROVED Residential DC Converted 3Acre Land for Sale, Chennapatna Town Limits, Price 5Cr per Acre, Call- 9845188137

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDING FOR SALE



30x40 BMRDA approved Site, North facing Houses, 1BHK-3 Houses, 2BHK-1 House.
Build-up area: ground +2 floor, 3300 Sqft. with parking facility.
Location: Upakar Spring Fields Layout, Neraluru, near Chandapura.
Property is only 200 meters from the NH-844. Hosur Highway to Half km. Dharmapuri New Highway (80% completed),15 minutes to Electronic City, 4 kms to Bommasandra Metro Station.
Call: 95913 51111, 93419 06876

REQUIRES TMT MANUFACTURING UNIT

Reputed Industrial Group Based in Bangalore Wish to
Purchase TMT Manufacturing Unit With a Rolling Capacity Of 10000 MT's Per Month
In & Around **Bangalore** Urgently.
Interested Parties May Send Details To
bangaloretmtbars@gmail.com

House

Hanumanthnagar

SALE BDA Old House 30x30 South Face Hanumanth Nagar Near Jain Temple Prime Location 9845969165

Kanakapura Road

SALE INDEPENDENT Duplex 3BHK`Villa Gated`Community @ NANDA PRAKRUTHI off Kanakapura Road 30x50`East Facing With`Wardrobe Kitchentte Fans Geysers-Lights Grill`Work Car-garage 1.35crore Negotiable Roopa: 8546948484.

Mysore

30FTX40FT E/F Site with two Floors Semi Furnished House at VIJAYANAGAR FOURTH STAGE MYSORE FOR SALE GENUINEBUYERS CONTACT 8762059656 BROKERS EXCUSED

Villas/Bunglows

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH-FACE CONTACT OWNER 98440 18823

Commerical

Kengeri

BDA COMMERCIAL PROPERTY for Sale 20,000/- Sqf. Adjacent Kengeri Metro Station for Hotel, Theater. 9945119449

Vidyaranyapura

SITE BBMP A Katha 40x30, 20X30 SEMI COMMERCIAL SF 9200/- THINDLU LAKE SHOW GARDEN: 8296895858

AVAILABLE FOR RENT / SALE
6000 SQ FT RCC BUILDING GROUND & 1ST FLOOR SUITABLE FOR GODOWN / GARMENT FACTORY AT KADIRENAHALLI. 1.5 KMS FROM BSK METRO ON UTTARAHALLI MAIN ROAD WITH BOREWELL & 70 HP POWER
CONTACT : 98455 55505

Magadi Road

50*90 COMMERCIAL Plot EF BBMP A Katha 100 ft road Rs 14500/- Herohalli D Group Magadi Road Contact: 9916826976

Flat

Mysore Road

MYSORE ROAD AVAILABLE 3BHK FLAT LEASE 1800 SQ.FT RS. 31 LACS WITH CARPARKING: 8105273951/ 9738223432

WEEKEND CORNER

Reebok
1ST ANNIVERSARY CELEBRATIONS
30th JUNE, SUNDAY
4 PM ONWARDS
Reebok Store, Opp. Conrad Hotel, Ulsoor 080-40940022

ಬಿಲ್ವ ಗಾಣದ ಮನೆ
ವಿಜಯನಗರ, ನಾಗರಬಾವಿ ಸರ್ಕಲ್, ಬೆಂಗಳೂರು

ಮರದ ಗಾಣದ ಕಡಲೇಕಾಯಿ ಎಣ್ಣೆ -	1 litre 300 Rs.
ಕಬ್ಬಿಣದ ಗಾಣದ ಕಡಲೇಕಾಯಿ ಎಣ್ಣೆ -	1 litre 240 Rs.
ಕೊಬ್ಬರಿ ಎಣ್ಣೆ -	1 litre 250 Rs.
ಸೂರ್ಯಕಾಂತಿ ಎಣ್ಣೆ -	1 litre 240 Rs.
ಹರಳೆಣ್ಣೆ -	1 litre 240 Rs.

FREE HOME DELIVERY
ನಮ್ಮಲ್ಲಿ ಎಲ್ಲಾ ರೀತಿಯ ಎಣ್ಣೆಗಳು ಹಾಗೂ ಎಲ್ಲಾ ರೀತಿಯ ಹಿಂಡಿಗಳು ದೊರೆಯುತ್ತವೆ.
ಬಿ.ರವಿ - 9731564715, ರೋಹಿತ್ - 8971981863

EDUCATION CORNER

RV Institute of Management®
Approved by AICTE, Accredited by NAAC with 'A+' grade | Autonomous Institution Affiliated to Bengaluru City University
Go, change the world®
Autonomous Institution of Excellence

Register for PGCET/KMAT 2024
one week intensive coaching for **MBA** now & get admission in your dream institution..
Mode of coaching **Hybrid** (Offline in the Campus & Online platform - Zoom)
Date 08th July to 13th July 2024 (One Week)
Registration fee **Rs.500/-** (Includes certificate & study material)
Scan QR code below to register online & pay the fee
SCAN ME

Placement Summary 2023	
Total no. of Companies (On/Off Campus) On campus - 38 Off campus - 30	68
Total No. of Students enrolled	178
Total No. of Students not opted for Placements	11
Total No. of Students opted for Placements	167
Total No. of Students Placed	158
Highest package	14.25 L/A
Median package	6.80 L/A

Time 9.00am to 2.00pm (on all days)
PGCET Code B252
Top 15 Rankers who join our institution from PGCET (within 100 Rank) will be given a merit scholarship of Rs 50,000/-.
Scholarship of Rs 50,000/- to Top 15 Academic Performers in MBA 1st year (above 7.0 CGPA)
Please call: 90089 60025 / 080 42540300, for more information
E-mail : rvimpgcet@gmail.com Website : www.rvim.edu.in

ಶನಿವಾರ, ಜೂನ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 180 | ಪುಟ 28
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಫಾಲಿ ದಾಖಲೆ ವೇಗದ ದ್ವಿಶತಕ 11
'ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಸಂಚು' 4A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,032	24,010	₹73,800 (ಬೆಂಗಳೂರು)	₹89,900 (ಬೆಂಗಳೂರು)	83.34

ವಿಮಾನ ನಿಲ್ದಾಣದ ಚಾವಣಿ ಕುಸಿತ

ನವದೆಹಲಿ: ಮಳೆಯ ಅಬ್ಬರಕ್ಕೆ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-1ರ ಚಾವಣಿಯ ಒಂದು ಭಾಗ ಶುಕ್ರವಾರ ಕುಸಿದಿದ್ದು, ಟ್ಯಾಕ್ಸಿ ಚಾಲಕ ರೊಬ್ಬರು ಮೃತಪಟ್ಟಿದ್ದಾರೆ. ಈ ಘಟನೆಯು ವಿಮಾನ ನಿಲ್ದಾಣದಲ್ಲಿನ ಮೂಲ ಸೌಕರ್ಯದ ಗುಣಮಟ್ಟದ ಬಗ್ಗೆ ಪ್ರಶ್ನೆಗಳು ಏಳುವಂತೆ ಮಾಡಿದೆ. ಟರ್ಮಿನಲ್-1ರ ಮೂಲಕ ಕಾರ್ಯಾಚರಣೆ ನಡೆಸುವ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನೀಟ್ ಚರ್ಚೆ: ಬಿಗಿ ಪಟ್ಟು

ಲೋಕಸಭೆ, ರಾಜ್ಯಸಭೆಯಲ್ಲಿ ಸಿಗದ ಅವಕಾಶ, ವಿರೋಧ ಪಕ್ಷಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆಗೂ ಮೊದಲು ನೀಟ್ ಅಕ್ರಮಗಳ ಬಗ್ಗೆ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಶುಕ್ರವಾರ ಬಿಗಿ ಪಟ್ಟು ಹಿಡಿದಿದ್ದರಿಂದ ಉಭಯ ಸದನಗಳಲ್ಲೂ ಕೋಲಾಹಲ ಉಂಟಾಯಿತು.

ಲೋಕಸಭೆಯಲ್ಲಿ ನೀಟ್ ಅಕ್ರಮಗಳ ಬಗ್ಗೆ ಮಾತನಾಡಲು ತಮಗೆ ಅವಕಾಶ ನೀಡದೆ ಮೈಕ್ ಬಂದ್ ಮಾಡಲಾಗಿದೆ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು. ಸಭಾಪತಿಯವರು ತಮಗೂ ಅವಕಾಶ ಕೊಟ್ಟಿಲ್ಲ ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ವಿರೋಧ ಪಕ್ಷಗಳ ಮುಖಂಡರು ಸಭಾಪತಿ ಪೀಠದ ಮುಂಭಾಗಕ್ಕೆ ಬಂದು ಪ್ರತಿಭಟನೆ ನಡೆಸಿ, ಕಲಾಪ ಬಹಿಷ್ಕರಿಸಿದರು. ಹಿಂದಿನ ಅವಧಿಯಲ್ಲಿ ಬಿಜೆಪಿಗೆ ಬೆಂಬಲ ನೀಡುತ್ತಾ ಬಂದಿದ್ದ ಬಿಜೆಡಿ, ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಕಲಾಪ ಬಹಿಷ್ಕರಿಸಿತು.

ನಡೆಯದ ಕಲಾಪ: ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಲೋಕಸಭಾ ಕಲಾಪ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನೀಟ್ ಅಕ್ರಮದ ಬಗ್ಗೆ ಚರ್ಚೆ ನಡೆಸಲು ಅವಕಾಶ ನೀಡುವಂತೆ ಕೇಳಿದರು.

11ನೇ ಪುಟ ನೋಡಿ



ನೀಟ್ ಅಕ್ರಮಗಳ ಬಗ್ಗೆ ಚರ್ಚೆಗೆ ಅವಕಾಶ ನೀಡುವ ವಿಚಾರವಾಗಿ ರಾಜ್ಯಸಭೆಯಲ್ಲಿ ಶುಕ್ರವಾರ ಸಭಾಪತಿ ಜಗದೀಪ್ ಧನಕರ್ ಮತ್ತು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನಡುವೆ ಮಾತಿನ ಸಮರ ನಡೆಯಿತು –ಪಿಟಿಐ ಚಿತ್ರ

ಯಾರಿಗೂ ತೊಂದರೆ ಕೊಡಲು ನಾವು ಬಯಸಿಲ್ಲ. ವಿದ್ಯಾರ್ಥಿಗಳ ವಿಚಾರ ಪ್ರಸ್ತಾಪಿಸಲು ಬಯಸಿದ್ದೆವು. ಸಭಾಪತಿ ಅವಕಾಶ ನೀಡಲಿಲ್ಲ
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

ನೀಟ್ ಚರ್ಚೆಗೆ ಸರ್ಕಾರ ಸಿದ್ಧವಿದೆ. ಎಲ್ಲವೂ ನಿಯಮಾವಳಿಯಂತೆ ನಡೆಯಬೇಕು, ವಿರೋಧ ಪಕ್ಷಗಳು ಸಭ್ಯತೆ ಮೀರಬಾರದು
ಧರ್ಮೇಂದ್ರ ಪ್ರಧಾನ್, ಶಿಕ್ಷಣ ಸಚಿವ

'ಇಂಡಿಯಾ' ಕೂಟವು ನೀಟ್ ಬಗ್ಗೆ ರಚನಾತ್ಮಕ ಚರ್ಚೆ ಬಯಸಿದೆ. ಆದರೆ ನಮಗೆ ಅವಕಾಶ ನೀಡದಿರುವುದು ದುರದೃಷ್ಟಕರ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಖರ್ಗೆ–ಧನಕರ್ ಏಟು ಎದಿರೇಟು

ಕಲಾಪ ಮುಂದೂಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, 'ಮಾತನಾಡಲು ಅವಕಾಶ ನೀಡುವಂತೆ ನಾನು ಮಾಡಿದ ಮನವಿಯನ್ನು ಸಭಾಪತಿಯವರು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರು. ಅವರ ಗಮನ ಸೆಳೆಯುವುದಕ್ಕಾಗಿ ನಾನು ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ಹೋದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಲಕ್ಷಾಂತರ ಮಕ್ಕಳು ಆತಂಕಗೊಂಡಿದ್ದಾರೆ' ಎಂದು ಹೇಳಿದರು. ಸದನದಲ್ಲಿ ಖರ್ಗೆ ಮತ್ತು ವಿರೋಧ ಪಕ್ಷಗಳ ಸದಸ್ಯರ ವರ್ತನೆ ಬಗ್ಗೆ ಸಭಾಪತಿ ಜಗದೀಪ್ ಧನಕರ್ ಖಾರವಾಗಿ ಪ್ರತಿಕ್ರಿಯಿಸಿದರು.

11ನೇ ಪುಟ ನೋಡಿ



ಸಿನಿ ಸಮ್ಮಾನ

ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ, ಬಹುಭಾಷಾ ನಟಿ ಬಿ. ಸರೋಜಾದೇವಿ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ದಿ ಪ್ರಿಂಟರ್ಸ್ ಮೈಸೂರು ಪ್ರೈ. ಲಿಮಿಟೆಡ್‌ನ (ಟಿಪಿಎಂಎಲ್) ನಿರ್ದೇಶಕಿ ಪಾರುಲ್ ಶಾ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ , ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹಾಗೂ ಟಿಪಿಎಂಎಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಇದ್ದರು
–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಭೀಕರ ಅಪಘಾತ: 13 ಸಾವು

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿನ ಗುಂಡೇನಹಳ್ಳಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಟೆಂಪೊ ಟ್ರಾವೆಲರ್ (ಟಿಟಿ) ಶುಕ್ರವಾರ ನಸುಕಿನಲ್ಲಿ ಡಿಕ್ಕಿ ಹೊಡೆದಿದೆ. ಟಿಟಿಯಲ್ಲಿದ್ದ 13 ಮಂದಿ ಮೃತಪಟ್ಟಿದ್ದಾರೆ. ಚಾಲಕ ಸೇರಿ ಮೃತರೆಲ್ಲರೂ ಒಂದೇ ಕುಟುಂಬದವರು ಮತ್ತು ಸಂಬಂಧಿಕರು.

ಹೆದ್ದಾರಿಯಲ್ಲಿ ಲಾರಿ ನಿಲ್ಲಿಸಿ ಅಪಘಾತಕ್ಕೆ ಕಾರಣರಾದ ಆರೋಪದ ಮೇಲೆ ಚಿಕ್ಕಮಗಳೂರಿನ ಲಾರಿ ಚಾಲಕ ರಮೇಶ್ ಎಚ್.ಟಿ. (62) ಮತ್ತು ಕ್ಲೀನರ್ ಪ್ರಜ್ವಲ್ ಸಿ.ಎನ್ (23) ಎಂಬವರನ್ನು ಬ್ಯಾಡಗಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರವು ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ನೀಡಬೇಕು. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಒದಗಿಸಬೇಕು
ಬಸವರಾಜ ಬೊಮ್ಮಾಯಿ, ಸಂಸದ

ಸದ್ಯ ವೈಯಕ್ತಿಕವಾಗಿ ತಲಾ ₹50 ಸಾವಿರ ನೀಡಿದ್ದೇನೆ. ಸರ್ಕಾರದಿಂದ ಹೆಚ್ಚಿನ ಪರಿಹಾರ ಕೊಡಿಸಲು ಪ್ರಯತ್ನಿಸುವೆ
ಶಿವಾನಂದ ಪಾಟೀಲ
ಜಿಲ್ಲಾ ಉಸ್ತುವಾರಿ ಸಚಿವ

4A ಪುಟ ನೋಡಿ

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹೇಳಿಕೆಗೆ ಪರ–ವಿರೋಧ ಪ್ರತಿಕ್ರಿಯೆ

ಸಿ.ಎಂ ಗಾದಿ: ನಿಲ್ಲದ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ಮತ್ತು ಜಾತಿವಾರು ಉಪ ಮುಖ್ಯಮಂತ್ರಿಗಳನ್ನು ಮಾಡಬೇಕೆಂಬ ಚರ್ಚೆ ಕಾಂಗ್ರೆಸ್‌ನಲ್ಲಿ ಮತ್ತಷ್ಟು ಜೋರಾಗಿದೆ. ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಬೇಡಿಕೆಯನ್ನು ಕೆಲವರು ಸಮರ್ಥಿಸಿಕೊಂಡಿದ್ದರೆ, ಹಲವರು ಕಟುವಾಗಿ ಟೀಕಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕೆಂಬ ಸ್ವಾಮೀಜಿಯ ಬೇಡಿಕೆಯನ್ನು ಮಾಗಡಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಸಮರ್ಥಿಸಿಕೊಂಡಿದ್ದಾರೆ. ಆದರೆ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಸೇರಿದಂತೆ ಕೆಲವರು ಸ್ವಾಮೀಜಿ ಹೇಳಿಕೆಯನ್ನು ವಿರೋಧಿಸಿದ್ದಾರೆ.

‘ಹುಳಿ ಹಿಂಡುವುದು ಬೇಡ’



‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಬುದ್ಧರಿದ್ದಾರೆ. ಅವರಿಬ್ಬರ ಮಧ್ಯೆ ಹುಳಿ ಹಿಂಡುವ ಕೆಲಸ ಮಾಡುವುದು ಬೇಡ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

‘ಸ್ವಾಮೀಜಿ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಅದು ಅವರ ಅಭಿಪ್ರಾಯ. ನಮ್ಮಲ್ಲಿ ಶಾಸಕರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುತ್ತಾರೆ’ ಎಂದರು.

‘ಸ್ವಾಮೀಜಿ ಹೇಳಿಕೆಯಲ್ಲಿ ತಪ್ಪಿಲ್ಲ’



‘ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂಬ ಸ್ವಾಮೀಜಿ ಹೇಳಿಕೆಯಲ್ಲಿ ತಪ್ಪಿಲ್ಲ. ಸಮುದಾಯದ ಅಭಿಲಾಷೆಯನ್ನು ಅವರು ವ್ಯಕ್ತಪಡಿಸಿದ್ದಾರೆ’ ಎಂದು ಮಾಗಡಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು. ‘ಸ್ವಾಮೀಜಿ ನನಗೆ ಮಠ ಬಿಟ್ಟುಕೊಡಲಿ’ ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿಕೆ ಬಗ್ಗೆ, ‘ಅವರು ನಮ್ಮ ಸಮುದಾಯದ ಸ್ವಾಮೀಜಿ ಆಗುವುದಾದರೆ ಗೌರವದಿಂದ ಸ್ವೀಕರಿಸುತ್ತೇವೆ’ ಎಂದು ಪ್ರತಿಕ್ರಿಯಿಸಿದರು.

‘ಬಹಿರಂಗವಾಗಿ ಹೇಳುವ ಅಗತ್ಯವಿರಲಿಲ್ಲ’

‘ಮುಖ್ಯಮಂತ್ರಿ ಬದಲಾವಣೆ ಕುರಿತು ಸ್ವಾಮೀಜಿಯವರು ಬಹಿರಂಗವಾಗಿ ಹೇಳಿಕೆ ನೀಡುವ ಅಗತ್ಯವಿರಲಿಲ್ಲ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

‘ಸ್ವಾಮೀಜಿ ಅವರಿಗೆ ಹೀಗೆಯೇ ಮಾತನಾಡಬೇಕು ಎಂದು ನಾವು ಹೇಳಲಾಗದು’ ಎಂದರು.

‘ಲಿಂಗಾಯತರು ಮುಖ್ಯಮಂತ್ರಿ ಆಗಲಿ’ ಎಂಬ ಶಿವಾಚಾರ್ಯ ಸ್ವಾಮೀಜಿಯವರ ಹೇಳಿಕೆ ಬಗ್ಗೆ ಕೇಳಿದಾಗ, ‘ಈ ರೀತಿಯ ಚರ್ಚೆ ಹಿಂದೆ ವಿರೋಧ ಪಕ್ಷದ ಕೈವಾಡವೂ ಇರಬಹುದು’ ಎಂದರು.

‘ಸ್ವಾಮೀಜಿ ಹೇಳಿಕೆ ನೀಡಿದ್ದು ಸರಿಯಲ್ಲ’

‘ಪಕ್ಷದ ವರಿಷ್ಠರು ನಿರ್ಧಾರ ಮಾಡಬೇಕಾದಂತಹ ವಿಚಾರದಲ್ಲಿ ಸ್ವಾಮೀಜಿಯವರು ಬಹಿರಂಗವಾಗಿ ಹೇಳಿಕೆ ನೀಡುವುದು ಸರಿಯಲ್ಲ’ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಹೇಳಿದರು.

‘ಮುಂದೆ ಇನ್ನೊಂದು ಸಮುದಾಯದ ಸ್ವಾಮೀಜಿಗಳು ಮುಖ್ಯಮಂತ್ರಿ ಸ್ಥಾನದ ಕುರಿತು ಮಾತನಾಡಬಹುದು. ಇದರಿಂದ ಪಕ್ಷ ಮತ್ತು ಸರ್ಕಾರದಲ್ಲಿ ಗೊಂದಲ ಸೃಷ್ಟಿಯಾಗಲಿದೆ’ ಎಂದರು.

‘10 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ’

ನವದೆಹಲಿ (ಪಿಟಿಐ): 10 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ, ಕೊಲೆಗೈದಿರುವ ಘಟನೆ ಉತ್ತರ ದೆಹಲಿಯಲ್ಲಿ ನಡೆದಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಯಾರೂ ಇಲ್ಲದ ನಿರ್ಜನ ಪ್ರದೇಶದಲ್ಲಿ ಬಾಲಕಿಯ ಮೃತದೇಹ ಶುಕ್ರವಾರ ಬೆಳಿಗ್ಗೆ ಪತ್ತೆಯಾಗಿದೆ. ಬಾಲಕಿಯ ಮನೆಯ ಅಕ್ಕಪಕ್ಕದವರೇ ಈ ಕೃತ್ಯವೆಸಗಿದ್ದಾರೆ ಎಂಬ ಆರೋಪವಿದ್ದು, ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿ ರವಿಕುಮಾರ್ ಸಿಂಗ್, ‘ಸಂತ್ರಸ್ತೆಯ ತಂದೆ ನೀಡಿದ ದೂರಿನ ಮೇರೆಗೆ ಇಬ್ಬರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

‘ನೀಟ್: ಬೇಕೇ? ಬೇಡವೇ ಚರ್ಚೆಯಾಗಲಿ’

ಬಾಗಲಕೋಟೆ: ‘ನೀಟ್’ ಪರೀಕ್ಷೆಯಲ್ಲಿ ನಡೆದಿರುವ ಅವ್ಯವಹಾರ ನೋಡಿದರೆ ರಾಜ್ಯಕ್ಕೆ ನೀಟ್ ಪರೀಕ್ಷೆ ಬೇಕೇ ಅಥವಾ ಬೇಡವೇ ಎಂಬ ಬಗ್ಗೆ ವ್ಯಾಪಕ ಚರ್ಚೆಯಾಗಬೇಕಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು

ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಡೆಂಗಿ ನಿಯಂತ್ರಣಕ್ಕೆ ಯೋಜನೆ ರೂಪಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಮತ್ತು ಸೂಕ್ಷ್ಮ ಯೋಜನೆ ತಯಾರಿಸಿಕೊಂಡು ಡೆಂಗಿ ಪ್ರಕರಣಗಳನ್ನು ನಿಯಂತ್ರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜೆ.ಎಂ ಪಾಳ್ಯ ಹಾಗೂ ನ್ಯೂ ತಿಪ್ಪಸಂದ್ರ ವ್ಯಾಪ್ತಿಯಲ್ಲಿ ಆಶಾ ಕಾರ್ಯಕರ್ತೆಯರು ಮನೆ-ಮನೆಗೆ ತೆರಳಿ ನಾಗರಿಕರಲ್ಲಿ ಡೆಂಗಿ ಕುರಿತು ಜಾಗೃತಿ ಮೂಡಿಸುತ್ತಿರುವ ಸ್ಥಳಕ್ಕೆ ಭೇಟಿ ಅವರು ಮಾತನಾಡಿದರು.

ಈಡೀಸ್ ಈಜಿಪ್ಟೈ ಎಂಬ ಸೊಳ್ಳೆಗಳಿಂದ ಡೆಂಗಿ ಹರಡುತ್ತದೆ. ಸಂಪ್, ಡ್ರಮ್‌ಗಳ ನೀರನ್ನು ಆಗಾಗ ಬದಲಾಯಿಸಬೇಕು. ಕೊಳಾಯಿ ಬಳಿ, ಹೂವಿನ ಕುಂಡ ಸೇರಿದಂತೆ ಇನ್ನಿತರೆ ಕಡೆ ನೀರು ನಿಲ್ಲದಂತೆ ನೋಡಿ ಕೊಳ್ಳಬೇಕು. ಸಂಗ್ರಹಿಸಿರುವ ನೀರನ್ನು ವಾರಕ್ಕೊಮ್ಮೆ ಹೊರ ಹಾಕಿ ಮತ್ತೆ ಶುದ್ಧ ನೀರು ಸಂಗ್ರಹಿಸಿಕೊಳ್ಳಬೇಕು. ವಾರಕ್ಕಿಂತ ಹೆಚ್ಚು ಕಾಲ ಒಂದೇ ನೀರು ಸಂಗ್ರಹವಾಗಿದ್ದರೆ ಲಾರ್ವಾ ಉತ್ಪತ್ತಿಯಾಗಿ ಸೊಳ್ಳೆಗಳು ಹೆಚ್ಚಾಗುತ್ತವೆ ಎಂದು ನಾಗರಿಕರಿಗೆ ಮಾಹಿತಿ ನೀಡಿದರು.



ಜೆಎಂ ಪಾಳ್ಯ ಹಾಗೂ ನ್ಯೂ ತಿಪ್ಪಸಂದ್ರ ವ್ಯಾಪ್ತಿಯಲ್ಲಿ ಮನೆಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಅಧಿಕಾರಿಗಳು ಭೇಟಿ ನೀಡಿ ಡೆಂಗಿ ಬಗ್ಗೆ ಜಾಗೃತಿ ಮೂಡಿಸಿದರು

ಆಶಾ ಕಾರ್ಯಕರ್ತೆಯರು ಮನೆ-ಮನೆಗೆ ಭೇಟಿ ನೀಡುವ ವೇಳೆ ಭಿತ್ತಿಪತ್ರಗಳನ್ನು ವಿತರಿಸಬೇಕು. ಲಾರ್ವಾ ಉತ್ಪತ್ತಿ ತಾಣಗಳನ್ನು ಗುರುತಿಸಿರುವ ಕಡೆ ಔಷಧ ಸಿಂಪಡಣೆ ಮಾಡಿ ಸೊಳ್ಳೆಗಳ ಉತ್ಪತ್ತಿ ತಾಣವನ್ನು ನಿಯಂತ್ರಿಸಬೇಕು. ನಗರದಲ್ಲಿ ಧ್ವನಿವರ್ಧಕ ಮೂಲಕ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಡೆಂಗಿ ನಿಯಂತ್ರಿಸಲು ವಲಯವಾರು ‘ಡ್ರೈ ಡೇ’ ನಡೆಸಲಾಗುತ್ತಿದೆ. ಮನೆಗಳಿಗೆ ಭೇಟಿ ನೀಡಿ ನಡೆಸುತ್ತಿರುವ ಸಮೀಕ್ಷೆಯ ಸಮಗ್ರ ವರದಿಯನ್ನು ಫ್ರಿಸ್ಮ್-ಎಚ್ ತಂತ್ರಾಂಶದಲ್ಲಿ ಆಯಾ ದಿನವೇ ನಮೂದಿಸಬೇಕು ಎಂದು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯ ಎಂಟು ವಲಯಗಳಲ್ಲಿ ವಲಯ ಆಯುಕ್ತರು, ಜಂಟಿ ಆಯುಕ್ತರು ಹಾಗೂ ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಡ್ರೈ ಡೇ ಕಾರ್ಯಾಚರಣೆಯ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆರೋಗ್ಯ ವಿಭಾಗದ ವಿಶೇಷ ಆಯುಕ್ತರು ಮಹಾಲಕ್ಷ್ಮೀ ಲೇಔಟ್ ವ್ಯಾಪ್ತಿಯಲ್ಲಿ ಡ್ರೈ ಡೇ ಮಾಡುವ ಸ್ಥಳಗಳಿಗೆ ಭೇಟಿ ನೀಡಿದರು.

ಯಲಹಂಕ ವಲಯ ಆಯುಕ್ತರು ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದೀನ್ ಮದನಿ, ವಲಯ ಆರೋಗ್ಯಾಧಿಕಾರಿ ಡಾ. ಭಾಗ್ಯಲಕ್ಷ್ಮೀ, ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಇಬ್ಬರ ಸಾವು: ಡೆಂಗಿ ಶಂಕೆ

ಬೆಂಗಳೂರು: ಬಿಬಿಎಂಪಿ ಪೂರ್ವ ವಲಯದ ವ್ಯಾಪ್ತಿಯಲ್ಲಿ ಇಬ್ಬರು ಮೃತಪಟ್ಟಿದ್ದು, ಡೆಂಗಿ ಶಂಕೆ ವ್ಯಕ್ತವಾಗಿದೆ. 80 ವರ್ಷದ ವೃದ್ಧೆ ಹಾಗೂ 27 ವರ್ಷದ ಯುವಕ ಮೃತಪಟ್ಟಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

‘ಸಾವಿಗೆ ನಿಖರವಾದ ಕಾರಣ ತಿಳಿಯಲು ಶನಿವಾರ ಡೆತ್ ಆಡಿಟ್ ನಡೆಸಲಾಗುವುದು. ಡೆತ್ ಆಡಿಟ್ ವರದಿಯನ್ನು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಲ್ಲಿಸಲಾಗುವುದು’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ತಿಳಿಸಿದ್ದಾರೆ.

ನಗರದಲ್ಲಿ ದಿನದಿಂದ ದಿನಕ್ಕೆ ಡೆಂಗಿ ಪ್ರಕರಣಗಳು ಹೆಚ್ಚುತ್ತಿದ್ದು, ಪಾಲಿಕೆ ವ್ಯಾಪ್ತಿಯಲ್ಲಿ 2,457 ಪ್ರಕರಣಗಳು ವರದಿಯಾಗಿವೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನಿಧನ ವಾರ್ತೆ

ರಂಗಮ್ಮ



ರಂಗಮ್ಮ

ನೆಲಮಂಗಲ: ನಗರಸಭೆ ಸದಸ್ಯ ಎನ್.ಗಣೇಶ್ ಅವರ ತಾಯಿ ರಂಗಮ್ಮ(70) ಅವರು ಅನಾರೋಗ್ಯದಿಂದ ಶುಕ್ರವಾರ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಮೃತರ ಅಂತ್ಯ ಸಂಸ್ಕಾರ ತಾಲ್ಲೂಕಿನ ದೊಡ್ಡಬಳ್ಳಾಪುರ ರಸ್ತೆಯ ಎಲ್ಲದಹಳ್ಳಿಯ ತೋಟದ ಮನೆಯಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೃಷ್ಣಮೂರ್ತಿ



ಬೆಂಗಳೂರು: ರಾಜಾಜಿನಗರದ ನಿವಾಸಿ ಕೃಷ್ಣಮೂರ್ತಿ ಜಿ (72) ಅವರು ಅನಾರೋಗ್ಯದಿಂದಾಗಿ ಗುರುವಾರ ನಿಧನರಾದರು.

ಅವರ ಕಣ್ಣುಗಳನ್ನು ನಾರಾಯಣ ನೇತ್ರಾಲಯ ಮತ್ತು ದೇಹವನ್ನು ಬೆಂಗಳೂರು ವೈದ್ಯಕೀಯ ಕಾಲೇಜಿಗೆ ದಾನ ನೀಡಲಾಯಿತು.

ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

ಕೆಲವೆಡೆ ಉತ್ತಮ ಮಳೆ



ಶುಕ್ರವಾರ ನಗರದಲ್ಲಿ ಉತ್ತಮ ಮಳೆಯಾಗಿದ್ದು, ವಿಧಾನಸೌಧ ಬಳಿ ಜನರು ಮಳೆ ಬೀಳದ ಸ್ಥಳ ಹುಡುಕಿ ನಿಂತುಕೊಂಡರೆ, ದ್ವಿಚಕ್ರವಾಹನ ಸವಾರರೊಬ್ಬರು ಮಳೆ ಲೆಕ್ಕಿಸದೇ ಸಾಗಿದರು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಯಿತು. ಕೆಲವು ಪ್ರದೇಶಗಳಲ್ಲಿ ನೀರು ಹರಿದು ಹೋಗಲು ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ರಸ್ತೆಯಲ್ಲಿ ನೀರು ಹರಿಯಿತು. ಇದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು.

ದೊಡ್ಡನೆಕುಂದಿ ಬ್ರಿಡ್ಜ್, ರೈನ್ಬೋ ಆಸ್ಪತ್ರೆ ಹತ್ತಿರ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಕಸ್ತೂರಿ ನಗರದ ಕಡೆಗೆ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ಎಂ.ಜಿ. ರಸ್ತೆ, ಕಬ್ಬನ್ ಪಾರ್ಕ್, ಆರ್.ಟಿ. ನಗರ, ಕೆಂಗೇರಿ, ರಾಜಾಜಿನಗರ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ ಸಹಿತ ನಗರದ ವಿವಿಧೆಡೆ ಮಳೆ ಸುರಿಯಿತು.

ಜಾನಪದ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು ಪುಸ್ತಕ ಬಹುಮಾನಕ್ಕೆ ಜಾನಪದ ಕೃತಿಗಳನ್ನು ಆಹ್ವಾನಿಸಿದೆ.

2022ರ ಜ.1ರಿಂದ ಡಿ.31 ಹಾಗೂ 2023ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮ ಆವೃತ್ತಿಯಲ್ಲಿ ಪ್ರಕಟಗೊಂಡಿರುವ ಕೃತಿಗಳನ್ನು ಪರಿಗಣಿಸಲಾಗುತ್ತದೆ. ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ-ವಿಮರ್ಶೆ-ಸಂಶೋಧನೆ ಹಾಗೂ ಜನಪದ ಸಂಕೀರ್ಣ ಪ್ರಕಾರದಲ್ಲಿ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡಲಾಗುತ್ತದೆ. ಕೃತಿಯು ಕನಿಷ್ಠ 150 ಪುಟಗಳಿರಬೇಕು.

ಲೇಖಕರು, ಪ್ರಕಾಶಕರು ಹಾಗೂ ಸಂಪಾದಕರು ತಲಾ ನಾಲ್ಕು ಕೃತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ,ಬೆಂಗಳೂರು-560002 ಈ ವಿಳಾಸಕ್ಕೆ ಜುಲೈ 20ರೊಳಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಬಿಐಸಿ: ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ಛಾಯಾಗ್ರಾಹಕ ನವರೋಜ್ ಕಂಟ್ರಾಕ್ಟರ್ ಅವರ ಸ್ಮರಣೆಗಾಗಿ ಜುಲೈ 5 ರಿಂದ 7ರವರೆಗೆ, 'ಫೋಟೋಗ್ರಫಿ ಸ್ಟ್ರಿಕ್ಟ್ಲಿ-ಪ್ರೋಹಿಬಿಟೆಡ್' ಶೀರ್ಷಿಕೆಯಡಿ ಅವರ ಛಾಯಾಚಿತ್ರಗಳ ಪ್ರದರ್ಶನ-ವನ್ನು ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರದಲ್ಲಿ(ಬಿಐಸಿ) ಆಯೋಜಿಸಲಾಗಿದೆ.

ಪ್ರದರ್ಶನದ ಕ್ಯುರೇಟರ್‌ಗಳಾಗಿರುವ ನಿರ್ದೇಶಕ ಸಂಜೀವ್ ಶಾ, ಛಾಯಾಗ್ರಾಹಕರಾದ ಅನುಜ್ ಅಂಬಾಲಾಲ್, ಹಿಮಾಂಶು ಪಾಂಚಾಲ್ ಅವರು ನವರೋಜ್ ಅವರ ಆರು ದಶಕಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ ಪ್ರದರ್ಶಿಸುತ್ತಿದ್ದಾರೆ.

ಜುಲೈ 5ರಂದು ಸಂಜೆ 5.30ಕ್ಕೆ ಛಾಯಾಚಿತ್ರ ಪ್ರದರ್ಶನ ಉದ್ಘಾಟನೆಯಾಗಲಿದೆ. 6.30ಕ್ಕೆ 'ಫೋಟೋಗ್ರಫಿ ಸ್ಟ್ರಿಕ್ಟ್ಲಿ ಪ್ರೋಹಿಬಿಟೆಡ್' ಪುಸ್ತಕದ ಬಿಡುಗಡೆಯಾಗಲಿದೆ. ಸಂಜೆ 7ಕ್ಕೆ 'ಝೂರುಕಥಾ' ಸಾಕ್ಷ್ಯಚಿತ್ರ ಪ್ರದರ್ಶನ ವಿರುತ್ತದೆ.

ಜುಲೈ 7ರಂದು ಬೆಳಿಗ್ಗೆ 11.30ಕ್ಕೆ 'ದುವಿದಾ' ಚಿತ್ರ ಪ್ರದರ್ಶನವಿದೆ. ಪ್ರದರ್ಶನದ ನಂತರ ಸಿನಿಮಾ ಕುರಿತು ಸಂವಾದ ಕಾರ್ಯಕ್ರಮವಿದೆ.

ಪ್ರತಿದಿನ ಬೆಳಿಗ್ಗೆ 11ರಿಂದ ರಾತ್ರಿ 8 ಗಂಟೆಯವರೆಗೆ ಛಾಯಾಚಿತ್ರ ಪ್ರದರ್ಶನ ಇರಲಿದೆ. ಪ್ರದರ್ಶನಕ್ಕೆ ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕರಿಗೆ ತಪ್ಪದ ಗೋಳು ● ರಸ್ತೆಯಲ್ಲೇ ಠಿಕಾಣಿ, ಹೆಚ್ಚಿದ ಸಂಚಾರ ದಟ್ಟಣೆ

ದನಗಳ ಹಾವಳಿ; ಸಂಚಾರಕ್ಕೆ ಕುತ್ತು

● ಖಲೀಲಅಹ್ಮದ ಶೇಖ



ಕನಕಪುರ ಮುಖ್ಯರಸ್ತೆಯಲ್ಲಿ ಬೀಡಾಡಿ ದನಗಳನ್ನು ಸಂಚಾರಿ ಪೊಲೀಸರು ಓಡಿಸಿದರು

ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಗರದಲ್ಲಿ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಇವುಗಳಿಂದ ಬೀದಿಬದಿಯ ವ್ಯಾಪಾರಿಗಳು ಪ್ರತಿನಿತ್ಯ ಕಿರಿಕಿರಿ ಅನುಭವಿಸಿದರೆ, ವಾಹನ ಸವಾರರ ಸಂಚಾರಕ್ಕೆ ಸಂಚಕಾರ ತಂದಿವೆ.

ಕಲಾಸಿಪಾಳ್ಯದಲ್ಲಿರುವ ಜಯಚಾಮ ರಾಜೇಂದ್ರ ಹಣ್ಣು ಮತ್ತು ತರಕಾರಿ ಸಗಟು ಮಾರುಕಟ್ಟೆ, ಕೆ.ಆರ್. ಮಾರುಕಟ್ಟೆ, ಶಿವಾಜಿನಗರದ ರಸೆಲ್ ಮಾರುಕಟ್ಟೆ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ಮೀತಿಮೀರಿದೆ. ಇವುಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾದ ಸ್ಥಳೀಯ ಆಡಳಿತ ಮೌನವಹಿಸಿದೆ. ಇದರಿಂದ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ.

ಬೀಡಾಡಿ ದನಗಳನ್ನು ಹಿಡಿದು ಬೇರೆಡೆ ಸಾಗಿಸುವ ಕೆಲಸವನ್ನು ಬಿಬಿಎಂಪಿ ಮಾಡುತ್ತಿಲ್ಲ. ರಸ್ತೆಯಲ್ಲಿ ಬೀಡು ಬಿಡುವ ಜಾನುವಾರುಗಳನ್ನು ಸಿಬ್ಬಂದಿ ಪತ್ತೆ ಹಚ್ಚಿ ಗೋಶಾಲೆಗೆ ಕಳುಹಿಸಬೇಕು. ಮೂಲ ಮಾಲೀಕರು ಬಂದರೆ ಅವರಿಗೆ ದಂಡ ವಿಧಿಸಿ ಕಠಿಣ ಎಚ್ಚರಿಕೆ ನೀಡಬೇಕು. ಆದರೆ ಈ ಕೆಲಸಗಳು ಆಗುತ್ತಿಲ್ಲ.

'ಮೆಟ್ರೊ ನಿಲ್ದಾಣ, ಬಸ್ ನಿಲ್ದಾಣ, ಮಾರುಕಟ್ಟೆ ಪ್ರದೇಶಗಳಲ್ಲಿ ಅಡ್ಡಾಡುವ ಈ ಜಾನುವಾರುಗಳಿಂದ ವಾಹನ ಸಂಚಾರರಿಗೆ ತೀವ್ರ ತೊಂದರೆ ಆಗುತ್ತಿದೆ. ಕೆಲವು ಸಲ ಅಪಘಾತಕ್ಕೂ ಇವು ಕಾರಣವಾಗಿವೆ' ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಮಾರುಕಟ್ಟೆ ಪ್ರದೇಶಗಳಲ್ಲಿ ಅಡ್ಡಾಡುವ ದನಗಳನ್ನು ಕಟ್ಟಿ ಹಾಕಿದರೆ, ಅವುಗಳನ್ನು ಬಿಡಿಸಿಕೊಂಡು ಹೋಗಲು ಮಾಲೀಕರು ಬರುತ್ತಾರೆ. ಹೀಗಾಗಿ ಎಲ್ಲ ದನಗಳೂ ಬೀಡಾಡಿ ದನಗಳಲ್ಲ. ಆದ್ದರಿಂದ, ಬಿಬಿಎಂಪಿ ಅಸಲಿ ಮಾಲೀಕರನ್ನು ಗುರುತಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದರಿಂದ, ಮುಂದಿನ ದಿನಗಳಲ್ಲಿ ಆಗುವ ಸಮಸ್ಯೆ-ಗಳನ್ನು ತಡೆಯಬಹುದು' ಎಂಬುದು ಜನರ ಒತ್ತಾಯವಾಗಿದೆ.

ವಾಜರಹಳ್ಳಿ, ರಘುವನಹಳ್ಳಿ, ತಲಘಟ್ಟಪುರ, ಬನಶಂಕರಿ ಸೇರಿದಂತೆ ಕನಕಪುರ ಮುಖ್ಯರಸ್ತೆಯ ಉದ್ದಕ್ಕೂ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ತಲಘಟ್ಟಪುರ ಮೆಟ್ರೊ ನಿಲ್ದಾಣದ ಕೆಳಭಾಗದ ರಸ್ತೆಯಲ್ಲಿ ದನಗಳು ನಿತ್ಯವೂ ಮಲಗುತ್ತವೆ. ಇದರಿಂದ, ವಾಹನ ಸಂಚಾರಕ್ಕೆ ತೊಂದರೆಯಾಗಿದ್ದು, ಸಂಚಾರ ದಟ್ಟಣೆಯೂ ಆಗುತ್ತಿದೆ. ಇಲ್ಲಿನ ಸಂಚಾರ ಪೊಲೀಸರಿಗೆ ಈ ದನಗಳನ್ನು ಓಡಿಸುವುದೇ ಪ್ರತಿನಿತ್ಯದ ಕೆಲಸವಾಗಿದೆ.

'ತಲಘಟ್ಟಪುರ ವ್ಯಾಪ್ತಿಯಲ್ಲಿ ಕಳೆದ ಒಂದು ತಿಂಗಳಿಂದ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು, ಇವುಗಳನ್ನು ಹಿಡಿದುಕೊಂಡು ಹೋಗುವಂತೆ ಬಿಬಿಎಂಪಿಗೆ ಪತ್ರ ಬರೆಯಲಾಗಿತ್ತು. ಪತ್ರಕ್ಕೆ ಸ್ಪಂದಿಸಿದ ಬಿಬಿಎಂಪಿ ಸಿಬ್ಬಂದಿ ಶುಕ್ರವಾರ (ಜೂನ್ 28)ದಂದು ಐದು ದನಗಳನ್ನು ಹಿಡಿದುಕೊಂಡು ಹೋಗಿದ್ದಾರೆ' ಎಂದು ಪೊಲೀಸರೊಬ್ಬರು ಹೇಳಿದರು.

'ದನ ಹಿಡಿಯಲು ವಾಹನ ಕೊಡಿ'

'ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀಡಾಡಿ ದನಗಳನ್ನು ಹಿಡಿದುಕೊಂಡು ಬರಲು ಕೇವಲ ಎರಡು ವಾಹನಗಳನ್ನು ಮಾತ್ರ ನೀಡಲಾಗಿದ್ದು, ಅವು ಆಗಾಗ ಕೈಕೊಡುತ್ತಿವೆ. ವಾಹನಗಳ ಸಂಖ್ಯೆ ಹೆಚ್ಚಿಸುವುದರ ಜೊತೆಗೆ ದನ ಹಿಡಿಯಲು ಪರಿಣತ ಸಿಬ್ಬಂದಿ ನಿಯೋಜಿಸಬೇಕು' ಎಂದು ಅಧಿ-ಕಾರಿಯೊಬ್ಬರು ಹೇಳಿದರು.

'ರಸ್ತೆಗಳಲ್ಲಿ ಓಡಾಡುವ ಬೀಡಾಡಿ ದನಗಳ ಮಾಲೀಕರಿಗೆ ದಂಡ ಹಾಕಲಾಗುತ್ತಿದೆ. ದೊಡ್ಡ ಜಾನುವಾರುಗೆ ₹600, ಕರುಗಳಿಗೆ ₹300ರಂತೆ ದಂಡ ವಿಧಿಸ-ಲಾಗುತ್ತಿದೆ' ಎಂದರು.

ಜನ ಏನಂತಾರೆ ?



ಸಂಜಯನಗರ ಮುಖ್ಯರಸ್ತೆಯ ಗೆದ್ದಲಹಳ್ಳಿಯಿಂದ ಅಶ್ವತ್ಥ ನಗರದ ಮುಖ್ಯ ರಸ್ತೆಯಲ್ಲಿ ಬೀಡಾಡಿ ದಿನಗಳ ಹಾವಳಿ ವಿಪರೀತವಾಗಿದೆ. ಪ್ರತಿನಿತ್ಯ ಸಾರ್ವಜನಿಕರು ಸೇರಿದಂತೆ ಶಾಲಾ ಮಕ್ಕಳು ಕಿರಿಕಿರಿ ಅನುಭವಿಸುವಂತಾಗಿದೆ. ಇವುಗಳನ್ನು ನಿಯಂತ್ರಿಸಲು ಬಿಬಿಎಂಪಿ ಕ್ರಮ ಕೈಗೊಳ್ಳಬೇಕು.

ಹನುಮಂತಯ್ಯ ಎಂ., ಗೆದ್ದಲಹಳ್ಳಿ



ಬಳ್ಳಾರಿ ಮುಖ್ಯರಸ್ತೆಯಲ್ಲಿ ರಾಸುಗಳು ಸಂಚಾರಕ್ಕೆ ಅಡ್ಡಿ-ಪಡಿಸುತ್ತಿವೆ. ದನಗಳ ನಿಯಂತ್ರಣಕ್ಕೆ ಮಾಲೀಕರಿಗೆ ದಂಡ ಹಾಕಬೇಕು. ಆಗ ಸಂಚಾರ ಸಮಸ್ಯೆಗೆ ಪರಿಹಾರ ಸಿಗಲಿದೆ.

ಪತ್ತಂಗಿ ಎಸ್ ಮುರಳಿ, ಕುಮಾರಸ್ವಾಮಿ ಬಡಾವಣೆ



ಸಂಜಯನಗರದ ಮುಖ್ಯರಸ್ತೆಯಲ್ಲಿ ನಿಂತಿದ್ದ ಬೀಡಾಡಿ ದನ

ಸುದ್ದಿ 2 ನಿಮಿಷ

ಕಮಲ್ ಪಂತ್ ನಾಳೆ ನಿವೃತ್ತಿ

ಬೆಂಗಳೂರು: ರಾಜ್ಯ ಅಗ್ನಿಶಾಮಕ ಇಲಾಖೆಯ ಡಿಜಿಪಿ ಕಮಲ್ ಪಂತ್ ಅವರು ಜೂನ್ 30ರಂದು (ಭಾನುವಾರ) ಸೇವೆಯಿಂದ ನಿವೃತ್ತರಾಗಲಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ 34 ವರ್ಷ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. 2022ರಿಂದ ಅಗ್ನಿಶಾಮಕ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು.

ಉತ್ತರಾಖಂಡ ರಾಜ್ಯದ ಕಮಲ್ ಪಂತ್ ಅವರು, 1990 ಬ್ಯಾಚ್‌ನ ಐಪಿಎಸ್ ಅಧಿಕಾರಿ. ಕರ್ನಾಟಕ ಕೇಡರ್ ಅಧಿಕಾರಿಯಾಗಿ ನೇಮಕಗೊಂಡಿದ್ದ ಅವರು 1994ರಲ್ಲಿ ಶಿವಮೊಗ್ಗದ ಭದ್ರಾವತಿಯಲ್ಲಿ ಎಎಸ್ಪಿಯಾಗಿ ವೃತ್ತಿ ಜೀವನ ಆರಂಭಿಸಿದ್ದರು. ಎಸ್‌ಪಿ, ಡಿಐಜಿ, ಐಜಿಪಿಯಾಗಿ ವಿವಿಧ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಿ-ದ್ದರು. ಸಿಬಿಐ, ರಾಜ್ಯ ಪೊಲೀಸ್ ಇಲಾಖೆ ಎಡಿಜಿಪಿ ಹಾಗೂ ಕರ್ನಾಟಕದ ಲೋಕಾಯುಕ್ತದಲ್ಲೂ ಕೆಲಸ ಮಾಡಿದ್ದರು.

ಮಾಜಿ ಲೋಕಾಯುಕ್ತ ಭಾಸ್ಕರ್ ರಾವ್ ಹಾಗೂ ಅವರ ಪುತ್ರನ ಮೇಲೆ ಲಂಚ ಪ್ರಕರಣ ಸಂಬಂಧ ತನಿಖೆ ನಡೆಸಲು ರಾಜ್ಯ ಸರ್ಕಾರ ರಚಿಸಿದ್ದ ಎಸ್‌ಐಟಿ ತಂಡದ ಮುಖ್ಯಸ್ಥರಾಗಿ ಕಮಲ್ ಪಂತ್ ಕೆಲಸ ಮಾಡಿದ್ದರು.

ಛಾಪಾ ಕಾಗದ ಹಗರಣದಲ್ಲಿ ಅಬ್ದುಲ್ ಕರೀಂ ಲಾಲ್ ತೆಲಗಿಗೆ ಶಿಕ್ಷೆ ಆಗುವಂತೆ ಪ್ರಕರಣದ ತನಿಖೆ ನಡೆಸಿದ್ದರು. 2020-22ರ ವರೆಗೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿ ಕೆಲಸ ಮಾಡಿದ್ದರು. ರಾಷ್ಟ್ರಪತಿ ಹೆಸರಿನ ಜೀವಮಾನ ಪೊಲೀಸ್ ಪದಕ ಸೇರಿ ಹಲವು ಗೌರವಕ್ಕೆ ಕಮಲ್ ಪಂತ್ ಭಾಜನರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಲ್ಲಿನ ಕೋರಮಂಗಲದ ಕೆಎಸ್‌ಆರ್‌ಪಿ ಪರೇಡ್ ಮೈದಾನದಲ್ಲಿ ಶನಿವಾರ ಬೆಳಿಗ್ಗೆ 8ಕ್ಕೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.



ಪುಷ್ಕರ್‌ಗೆ ಕೊಲೆ ಬೆದರಿಕೆ

ಬೆಂಗಳೂರು: ನಿರ್ಮಾಪಕ ಪುಷ್ಕರ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪದ ಅಡಿ ನಾಲ್ವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಷ್ಕರ್ ಅವರು ನೀಡಿದ ದೂರು ಆಧರಿಸಿ ಸಹಕಾರ ಸಂಘಗಳ ಉಪ ನಿಬಂಧಕ ಕಿಶೋರ್ ಕುಮಾರ್ ಸಿಸಿಬಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಡಿ.ಬಿ.ಆದರ್ಶ, ಸಿ.ಹರ್ಷ, ಶಿವು, ಡಿ.ಬಿ.ಹರ್ಷ ವಿರುದ್ಧ ಕರ್ನಾಟಕ ಲೇವಾದೇವಿದಾರರ ಕಾಯ್ದೆ ಮತ್ತು ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಕಾಯ್ದೆಯ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಕೆಲವು ವರ್ಷಗಳಿಂದ ಆರ್ಥಿಕ ನಷ್ಟದಲ್ಲಿದ್ದೇನೆ. ನಷ್ಟದಿಂದ ಪಾರಾಗಲು ಕೆಲವರ ಬಳಿ ಸಾಲಕ್ಕೆ ಹಣ ಕೇಳಿದ್ದೆ. ಅವರು ಸಾಲ ನೀಡಿದ್ದರು. ಬಡ್ಡಿ ನೀಡುವಂತೆ ಸೂಚಿಸಿದ್ದರು. ಸಾಲಕ್ಕೆ ಭದ್ರತೆಯಾಗಿ 10 ಖಾಲಿ ಚೆಕ್‌ಗಳನ್ನು ನೀಡಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಸಾಲಕ್ಕೆ ಪ್ರತಿ ತಿಂಗಳು ಬಡ್ಡಿ ಪಾವತಿಸಿದ್ದೇನೆ. ನೀವು ನೀಡಿದ್ದ ಹಣ ಬಡ್ಡಿ ಮತ್ತು ಚಕ್ರ ಬಡ್ಡಿಗೆ ಸರಿಯಾಗಿದೆ. ಹೀಗಾಗಿ ಇನ್ನೂ ನಮಗೆ ₹13 ಕೋಟಿ ನೀಡಬೇಕು ಎಂದು ಬೇಡಿಕೆ ಇರಿಸುತ್ತಿದ್ದಾರೆ. ಮನೆ ಮತ್ತು ಕಚೇರಿಗೆ ಕೆಲವರು ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ತಾ.ಪಂ ಇಒ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಭೂ ಪರಿವರ್ತನೆ ಮಾಡಿಕೊಡಲು ₹40 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಬೆಳಗಾವಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ರಾಮರೆಡ್ಡಿ ಪಾಟೀಲ ಮತ್ತು ಗ್ರೇಡ್-2 ಕಾರ್ಯದರ್ಶಿ ವೈಜನಾಥ ಸನದಿ ಎಂಬುವವರನ್ನು ಶುಕ್ರವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ನಗರದ ಕಾಕತಿವೇಸ್ ಪ್ರದೇಶದ ನಿವಾಸಿ ಶಾನವಾಜ್‌ಖಾನ್ ಪಠಾಣ ಅವರು ನಾವಗೆ ಗ್ರಾಮದಲ್ಲಿ ತಮ್ಮ ನಿವೇಶನವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದರು. ಅದಕ್ಕೆ ರಾಮರೆಡ್ಡಿ ₹40 ಸಾವಿರ ಲಂಚ ಕೇಳಿದ್ದರು. ಈ ಕುರಿತ ದೂರು ಆಧರಿಸಿ, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ

₹18 ಲಕ್ಷ ಮೌಲ್ಯದ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ



ಅಭಿಷೇಕ್

ಬೆಂಗಳೂರು: ವಿ.ವಿ ಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ನಿಲುಗಡೆ ಮಾಡಲಾಗಿದ್ದ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ ನಗರದ ನಿವಾಸಿ ಅಭಿಷೇಕ್(27) ಬಂಧಿತ ಆರೋಪಿ. ಚಾಮರಾಜನಗರ ಜಿಲ್ಲೆ ಹನೂರು ಪಟ್ಟಣದ ಆರ್.ಎಸ್.ದೊಡ್ಡಿಯ ಅಭಿಷೇಕ್, ಜೆ.ಪಿ. ನಗರದಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದ ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಯಿಂದ ₹18 ಲಕ್ಷ ಮೌಲ್ಯದ ಒಂದು ಟೆಂಪೊ ಟ್ರಾವೆಲ್ಲರ್, ಮೂರು ಆಟೊಗಳು ಹಾಗೂ ಐದು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಆರೋಪಿಯ ವಿರುದ್ಧ ಜಯನಗರ, ವಿಜಯನಗರ, ಬನಶಂಕರಿ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿವೆ. ವಾಹನ ಕಳ್ಳತನವನ್ನೇ ಆರೋಪಿ ವೃತ್ತಿಯಾಗಿಸಿ-ಕೊಂಡಿದ್ದ' ಎಂದರು.

'ಜೂನ್ 17ರಂದು ಸಜ್ಜನರಾವ್ ವೃತ್ತದ ಬಳಿಯ ಸತ್ಯನಾರಾಯಣ ಸ್ವಾಮಿ ದೇಗುಲದ ಬಳಿ ವ್ಯಕ್ತಿಯೊಬ್ಬರು ಟೆಂಪೊ ಟ್ರಾವೆಲ್ಲರ್ ನಿಲುಗಡೆ ಮಾಡಿ ಮನೆಗೆ ತೆರಳಿದ್ದರು. ಮರು ದಿನ ಬಂದು ನೋಡಿದಾಗ ವಾಹನ ಸ್ಥಳದಲ್ಲಿ ಇರಲಿಲ್ಲ. ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ಸಜ್ಜನರಾವ್ ವೃತ್ತದ ಸುತ್ತಮುತ್ತ ಅಳವಡಿಸಲಾಗಿದ್ದ ಸಿಸಿ ಟಿ.ವಿ ಕ್ಯಾಮೆರಾ-ಗಳನ್ನು ಪರಿಶೀಲಿಸಿ, ಆರೋಪಿಯನ್ನು ಬಂಧಿಸಲಾಗಿದೆ' ಎಂದು ತನಿಖಾಧಿಕಾರಿ-ಯೊಬ್ಬರು ಮಾಹಿತಿ ನೀಡಿದರು.

ಮಾಂಗಲ್ಯ ಸರ ಕಸಿದು ಪರಾರಿ: ಇಬ್ಬರ ಸೆರೆ

ಬೆಂಗಳೂರು: ಪಿಳ್ಳಗಾನಹಳ್ಳಿಯಲ್ಲಿ ಗೃಹಿಣಿಯೊಬ್ಬರ ಮಾಂಗಲ್ಯ ಸರವನ್ನು ಕಸಿದುಕೊಂಡು ಪರಾರಿ ಆಗಿದ್ದ ಇಬ್ಬರು ಆರೋಪಿಗಳನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿದ್ದಾಪುರದ ಸೋಮೇಶ್ವರ ಬಡಾವಣೆಯ ನಿವಾಸಿಗಳಾದ ಅಯೂಬ್ ಹಾಗೂ ಮೋಹಿದ್ ಬಂಧಿತ ಆರೋಪಿಗಳು. 'ಬಂಧಿತರಿಂದ 8 ಗ್ರಾಂ ತೂಕದ ಚಿನ್ನದ ಮಾಂಗಲ್ಯ, ಎರಡು ಚಿನ್ನದ ಕಾಸು ಹಾಗೂ ಎರಡು ಚಿನ್ನದ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಜೂನ್ 22ರಂದು ಗೃಹಿಣಿಯೊಬ್ಬರು ಅಂಜನಾಪುರ ಲಾಲ್ ಬಹದ್ದೂರ್ ಶಾಸ್ತ್ರಿ ನಗರದ 11ನೇ ಬ್ಲಾಕ್‌ನ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಬೈಕ್‌ನಲ್ಲಿ ಬಂದ ಆರೋಪಿಗಳಿಬ್ಬರು ಕುತ್ತಿಗೆಗೆ ಕೈಹಾಕಿ ಮಾಂಗಲ್ಯ ಸರವನ್ನು ಕಸಿದು ಪರಾರಿ ಆಗಿದ್ದರು. ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಸಿಸಿ ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು

'ಜಯನಗರದ ಸೋಮೇಶ್ವರ ದೇವಸ್ಥಾನ ಆರ್ಚ್ ಬಳಿ ಜೂನ್ 26ರಂದು ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದರು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆರೋಪಿಗಳು ಕೃತ್ಯ ನಡೆಸಿದ್ದ ಬಗ್ಗೆ ಬಾಯ್ಬಿಟ್ಟರು. ಕೃತ್ಯಕ್ಕೆ ಬಳಸಿದ ಬೈಕ್ ಅನ್ನೂ ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಗ್ರಾಹಕರು ಬುಕ್ ಮಾಡಿದ್ದ ಸಾಮಗ್ರಿಗೆ ಕನ್ನ

ಬೆಂಗಳೂರು: ಬುಕ್ ಮಾಡಿದ್ದ ಮೊಬೈಲ್ ಸೇರಿ ಬೆಲೆಬಾಳುವ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸದೇ ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ಬಾಧವ್ ಡೆಹೂರಿ ಹಾಗೂ ಭವಾನಿ ಶಂಕರ್ ಡೆಹೂರಿ ಬಂಧಿತರು.

'ಬಂಧಿತರಿಂದ 18 ಮೊಬೈಲ್ ಫೋನ್‌ಗಳು, ಬೆಲೆಬಾಳುವ ವಾಚ್‌ಗಳು, ಇಯರ್ ಫೋನ್, ಇಯರ್ ಬಡ್ಸ್, ಹಾಗೂ ಎರಡು ಹಾರ್ಡ್ ಡಿಸ್ಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಇವುಗಳ ಒಟ್ಟು ಮೌಲ್ಯ ₹10 ಲಕ್ಷವೆಂದು ಅಂದಾಜಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಠಾಣಾ ವ್ಯಾಪ್ತಿಯ ದೊಡ್ಡನೆಕ್ಕುಂದಿಯಲ್ಲಿ ಎನ್‌ಸಿಪಿಆರ್ ಕೈಗಾರಿಕಾ ಪ್ರದೇಶದಲ್ಲಿರುವ ಇನ್‌ಸ್ಟಾಕಾರ್ಟ್ ಕಂಪನಿಯ ವ್ಯವಸ್ಥಾಪಕರು ನೀಡಿದ ದೂರು ಆಧರಿಸಿ, ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ಪೊಲೀಸ್ ತಂಡವು ಒಡಿಶಾಕ್ಕೆ ತೆರಳಿ ಆರೋಪಿಗಳನ್ನು ಬಂಧಿಸಿದೆ' ಎಂದು ಪೊಲೀಸರು ಹೇಳಿದರು.

'ಇನ್‌ಸ್ಟಾಕಾರ್ಟ್‌ನಲ್ಲಿ ಇಬ್ಬರು ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಮೊಬೈಲ್ ಹಾಗೂ ಬೆಲೆಬಾಳುವ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವಂತೆ ಕಂಪನಿಯವರು ಸೂಚಿಸಿ ಕಳುಹಿಸುತ್ತಿ-ದ್ದರು. ಆದರೆ, ಆರೋಪಿಗಳು ಗ್ರಾಹಕರಿಗೆ ತಲುಪಿಸದೇ ವಂಚಿಸುತ್ತಿ-ದ್ದರು' ಎಂದು ಪೊಲೀಸರು ಹೇಳಿದರು.

₹90 ಲಕ್ಷ ಮೌಲ್ಯದ 9 ಕಾರುಗಳ ವಶ

ನಕಲಿ ದಾಖಲೆ ಸೃಷ್ಟಿಸುವ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕಾರುಗಳನ್ನು ಬಾಡಿಗೆಗೆ ಪಡೆದು, ನಕಲಿ ದಾಖಲೆ ಸೃಷ್ಟಿಸಿ, ಮಾರಾಟ ಮತ್ತು ಗಿರವಿ ಇಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ₹ 90 ಲಕ್ಷ ಮೌಲ್ಯದ 9 ಕಾರುಗಳ ವಶಪಡಿಸಿಕೊಂಡಿದ್ದಾರೆ.

ಹುಳಿಮಾವು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕಳವು ಪ್ರಕರಣ ಬೆನ್ನತ್ತಿದ ಪೊಲೀಸರು ಶಿವಮೊಗ್ಗ-ದಲ್ಲಿ ಒಬ್ಬನನ್ನು ವಶಕ್ಕೆ ಪಡೆದಿದ್ದರು. ಅವನನ್ನು ವಿಚಾರಿಸಿದಾಗ ಕಳವು ಮಾಡಿರುವ ಕಾರುಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಅವುಗಳ ಪೈಕಿ ಮೂರು ಕಾರುಗಳನ್ನು ಅಡಮಾನವಿಟ್ಟಿದ್ದು, ಆರು ಕಾರುಗಳನ್ನು ಮಾರಾಟ ಮಾಡಿರುವ ಮಾಹಿತಿಯನ್ನು ನೀಡಿದ್ದ.

ಅಡಮಾನವಿಟ್ಟಿದ್ದ ಮತ್ತು ಮಾರಾಟ ಮಾಡಿದ್ದ ವಿವಿಧ ಕಂಪನಿಗಳ 9 ಕಾರುಗಳನ್ನು ಪೊಲಿಸರು ವಶಪಡಿಸಿ-ಕೊಂಡಿದ್ದಾರೆ.

ಅತ್ಯಾಚಾರಕ್ಕೊಳಗಾಗಿದ್ದ ಬಾಲಕಿ ಸಾವು

ಕಲಬುರಗಿ: ನಗರದ ಸಬರ್ಬನ್ ಪೊಲೀಸ್ ಠಾಣೆಯ ಬಡಾವಣೆಯೊಂದರಲ್ಲಿ ಯುವಕನಿಂದ ಅತ್ಯಾಚಾರಕ್ಕೊಳಗಾಗಿ ಎಂಟು ತಿಂಗಳ ಗರ್ಭಿಣಿಯಾಗಿದ್ದ 13 ವರ್ಷದ ಬಾಲಕಿ ಶುಕ್ರವಾರ ಖಾಸಗಿ ಆಸ್ಪತ್ರೆಯಲ್ಲಿ ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾಳೆ.

ಬಡ ಕುಟುಂಬಕ್ಕೆ ಸೇರಿದ ಬಾಲಕಿ ಮೇಲೆ ಅದೇ ಬಡಾವಣೆಯ ನಿವಾಸಿ ಸರ್ಫರಾಜ್ ಮಿರ್ಜಾ (30) ಎಂಬಾತ ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದ. ಬಾಲಕಿ ಎಂಟು ತಿಂಗಳ ಗರ್ಭಿಣಿಯಾಗಿದ್ದಳು ಎಂದು ಆಕೆಯ ಕುಟುಂಬದ ಸದಸ್ಯರು ದೂರಿದ್ದಾರೆ ಎಂದು ಡಿಸಿಪಿ ಕನಿಕಾ ಸಿಕ್ರಿವಾಲ್ ತಿಳಿಸಿದರು.

ಬಾಲಕಿ ಅಸ್ವಸ್ಥಗೊಂಡ ಕಾರಣ ಗುರುವಾರ ರಾತ್ರಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶುಕ್ರವಾರ ಮಧ್ಯಾಹ್ನ ಕೊನೆಯುಸಿರೆಳೆದಿದ್ದಾಳೆ. .

ಪಾದಚಾರಿ ಸಾವು

ಬೆಂಗಳೂರು: ಹೈಗ್ರೌಂಡ್ಸ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಪಾದಚಾರಿಯೊಬ್ಬರು ಮೃತಪಟ್ಟು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಮೊಹಮ್ಮದ್ ಫಾರೂಕ್ ವಾಲ್ಕಿ (70) ಅವರು ಮೃತಪಟ್ಟಿದ್ದು, ಮೊಹಮ್ಮದ್ ಇಸ್ಮಾಯಿಲ್ (26) ಎಂಬವರು ಗಾಯಗೊಂಡಿದ್ದಾರೆ.

'ಪೌಲ್ ಆಶೀಸ್ ಕಟವಟಿ ಎಂಬವರು ತಮ್ಮ ಸ್ಕೂಟಿಯಲ್ಲಿ ವಸಂತನಗರದಲ್ಲಿರುವ ಮೌಂಟ್ ಕಾರ್ಮೆಲ್ ಕಾಲೇಜು ಕಡೆಯಿಂದ ಮಿಲ್ಲರ್ಸ್ ರಸ್ತೆಯ ಕಡೆಗೆ ತೆರಳು-ತ್ತಿದ್ದರು. ಅವರು ಅತಿವೇಗವಾಗಿ ಸ್ಕೂಟಿ ಓಡಿಸುತ್ತಿದ್ದರು ಎನ್ನಲಾಗಿದೆ. ಅಯ್ಯಪ್ಪ ದೇವಸ್ಥಾನ ಬಳಿ ರಸ್ತೆ ದಾಟುತ್ತಿದ್ದ ಫಾರೂಕ್ ವಾಲ್ಕಿ ಅವರಿಗೆ ಸ್ಕೂಟಿ ಡಿಕ್ಕಿಯಾಗಿದೆ. ಅದಾದ ಮೇಲೆ ಇಸ್ಮಾಯಿಲ್ ಅವರಿಗೆ ಸ್ಕೂಟಿ ಗುದ್ದಿದೆ. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಫಾರೂಕ್ ವಾಲ್ಕಿ ಅವರು ಮೃತಪಟ್ಟಿದ್ದಾರೆ. ಇಸ್ಮಾಯಿಲ್ ಅವರು ಆಸ್ಪತ್ರೆ-ಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.



ಕೊಡೆಗಳ ರಂಗು ಮುಂಗಾರು ಮಳೆ ಆರಂಭದ ಕಾರಣ ಭೋಪಾಲ್‌ನ ರಸ್ತೆ ಬದಿಯಲ್ಲಿ ಮಾರಾಟಕ್ಕೆ ಇಡಲಾಗಿದ್ದ ಬಣ್ಣ ಬಣ್ಣದ ಕೊಡೆಗಳ ಸಾಲು ರಸ್ತೆಯ ಸೊಬಗು ಹೆಚ್ಚಿಸಿತ್ತು –ಪಿಟಿಐ ಚಿತ್ರ

ನೀಟ್ ಹಗರಣ: ದೊಡ್ಡ ಪಿತೂರಿ?

ನಾಲ್ವರು ಆರೋಪಿಗಳ ಕಸ್ಟಡಿಗೆ ಕೋರಿದ ಸಿಬಿಐ ● ಆರೋಪಿಗಳಿಗೆ ಅಂತರರಾಜ್ಯ ಸಂಪರ್ಕ

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್: 'ನೀಟ್– ಯುಜಿ' ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದ ಆರೋಪದ ಮೇರೆಗೆ ಗೋಧ್ರಾದಲ್ಲಿ ಬಂಧಿತರಾಗಿರುವ ನಾಲ್ವರು ಆರೋಪಿಗಳನ್ನು ವಿಚಾರಣೆ ಸಲುವಾಗಿ ತನ್ನ ಕಸ್ಟಡಿಗೆ ನೀಡುವಂತೆ ಕೋರಿರುವ ಸಿಬಿಐ, ಈ ಆರೋಪಿಗಳು ಅಂತರರಾಜ್ಯ ಸಂಪರ್ಕಗಳನ್ನು ಹೊಂದಿದ್ದು, ದೊಡ್ಡ ಮಟ್ಟದ ಪಿತೂರಿಯಲ್ಲಿ ಭಾಗಿಯಾಗಿರುವ ಸಾಧ್ಯತೆಗಳಿವೆ ಎಂದು ತಿಳಿಸಿದೆ.

ಗೋಧ್ರಾದಲ್ಲಿ ನಡೆದಿರುವ ಬಹುಕೋಟಿ ವಂಚನೆ ಪ್ರಕರಣದ ಜತೆಗೆ ಬಿಹಾರ, ರಾಜಸ್ಥಾನ, ದೆಹಲಿ, ಜಾರ್ಖಂಡ್ ರಾಜ್ಯಗಳಲ್ಲಿ ದಾಖಲಾಗಿರುವ ಪರೀಕ್ಷಾ ಅಕ್ರಮಗಳ ಪ್ರಕರಣದ ತನಿಖೆಯನ್ನೂ ಚುರುಕುಗೊಳಿಸಿರುವ ಸಿಬಿಐ, ಗೋಧ್ರಾ ಪ್ರಕರಣದ ಆರೋಪಿಗಳು ವ್ಯಾಪಕವಾದ ಜಾಲವನ್ನು ಹೊಂದಿರುವಂತಿದೆ ಎಂದು ಹೇಳಿದೆ.

ಪರೀಕ್ಷಾ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಧ್ರಾ ಪೊಲೀಸರು ಕಳೆದ ತಿಂಗಳು ಐವರನ್ನು ಬಂಧಿಸಿದ್ದು, ಕೆಲ ಅಭ್ಯರ್ಥಿಗಳ ಪೋಷಕರು ನೀಡಿರುವ ₹2.3 ಕೋಟಿ ಮೊತ್ತದ ನಗದು ಮತ್ತು ಚೆಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಗೋಧ್ರಾದ ಜೈಲಿನಲ್ಲಿರುವ ಆರೋಪಿಗಳಾದ ಭೌತವಿಜ್ಞಾನ ಶಿಕ್ಷಕ ತುಷಾರ್ ಭಟ್ (ಪರೀಕ್ಷಾ ಕೇಂದ್ರದ ಉಪ ಅಧೀಕ್ಷಕ), ಜಯ ಜಲರಾಮ್ ಶಾಲೆಯ ಪ್ರಾಂಶುಪಾಲ ಪುರುಷೋತ್ತಮ್ ಶರ್ಮಾ (ನಗರ ಪರೀಕ್ಷಾ ಸಂಯೋಜಕ), ಮಧ್ಯವರ್ತಿಗಳಾದ ವಿಭೋರ್ ಆನಂದ್ ಮತ್ತು ಆರಿಫ್ ವೋಹ್ರಾ ಅವರನ್ನು ಕಸ್ಟಡಿಗೆ ನೀಡುವಂತೆ ಸಿಬಿಐ ನ್ಯಾಯಾಲಯವನ್ನು ಕೋರಿದೆ.

ನಿರ್ದಿಷ್ಟ ಪರೀಕ್ಷಾ ಕೇಂದ್ರ ಆಯ್ಕೆಗೆ ಸೂಚನೆ: ಸಿಬಿಐನ ಪ್ರಾಥಮಿಕ ತನಿಖೆಯ ಪ್ರಕಾರ, ಆರೋಪಿಗಳು ಗೋಧ್ರಾದಲ್ಲಿನ ಜಯ ಜಲರಾಮ್ ಶಾಲೆಯನ್ನು ಪರೀಕ್ಷಾ ಕೇಂದ್ರವನ್ನಾಗಿ ಆಯ್ಕೆ ಮಾಡಲು ಕೆಲ ಅಭ್ಯರ್ಥಿಗಳಿಗೆ ಸೂಚಿಸಿದ್ದರು. ಅಲ್ಲದೆ ಗುಜರಾತಿಯನ್ನು ಆದ್ಯತೆಯ ಭಾಷೆಯನ್ನಾಗಿ ಆಯ್ಕೆ ಮಾಡಲು ಹೇಳಿದ್ದರು. ಕಳೆದ ವರ್ಷ ಅದೇ ಶಾಲೆಯಲ್ಲಿ 'ನೀಟ್' ಪರೀಕ್ಷೆ ನಡೆದಿದ್ದಾಗ, ಒಎಂಆರ್ ಶೀಟ್‌ಗಳನ್ನು ರವಾನಿಸುವುದಕ್ಕೂ ಮುನ್ನಾ ರಾತ್ರಿಯಿಡೀ ಅಲ್ಲಿಯೇ ಸಂಗ್ರಹಿಸಲಾಗಿತ್ತು ಎಂಬ ಮಾಹಿತಿ ಆರೋಪಿಗಳಾದ ಭಟ್, ಶರ್ಮಾ ಮತ್ತು ಇತರರಿಗೆ ತಿಳಿದಿತ್ತು. ಹೀಗಾಗಿಯೇ ಅವರು ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಕೆಲ ಅಭ್ಯರ್ಥಿಗಳಿಗೆ ಇದೇ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಿದ್ದರು ಎಂದು ಸಿಬಿಐ ಪರ ವಕೀಲ ಧ್ರುವ ಮಲಿಕ್ ನ್ಯಾಯಾಲಯಕ್ಕೆ ವಿವರಿಸಿದರು.

ವಿಳಾಸ ಬದಲಿಸಲು ವ್ಯವಸ್ಥೆ: ಬಿಹಾರ, ಜಾರ್ಖಂಡ್, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಒಡಿಶಾದ ಕೆಲ ಅಭ್ಯರ್ಥಿಗಳ ಹಾಲಿ ಮತ್ತು ಶಾಶ್ವತ ವಿಳಾಸವನ್ನು ಪಂಚಮಹಲ್ ಮತ್ತು ವಡೋದರಾ ಜಿಲ್ಲಾ ವ್ಯಾಪ್ತಿಗೆ ಸೇರಿದವರೆಂದು ಬದಲಿಸಲು ಆರೋಪಿಗಳು ವ್ಯವಸ್ಥೆ ಮಾಡಿದ್ದಾರೆ. ಈ ಆರೋಪಿಗಳು ಇತರ ರಾಜ್ಯಗಳಲ್ಲಿನ ತಮ್ಮ ವಿವಿಧ ಸಂಪರ್ಕಗಳನ್ನು ಬಳಸಿ ಈ ಪಿತೂರಿ ಮಾಡಿದ್ದಾರೆ ಎಂದು ಸಿಬಿಐ ಸಲ್ಲಿಸಿರುವ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ: ಪ್ರಾಂಶುಪಾಲರ ಬಂಧನ

ನವದೆಹಲಿ (ಪಿಟಿಐ): ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್‌ನ ಹಜಾರೀಬಾಗ್‌ನ ಶಾಲೆಯೊಂದರ ಪ್ರಾಂಶುಪಾಲ ಮತ್ತು ಉಪ ಪ್ರಾಂಶುಪಾಲರನ್ನು ಸಿಬಿಐ ಶುಕ್ರವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮೇ 5ರಂದು ನಡೆಸಿದ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಹಜಾರೀಬಾಗ್ ನಗರದ ಸಮನ್ವಯಾಧಿಕಾರಿಯಾಗಿ ಒಯಾಸಿಸ್ ಶಾಲೆಯ ಪಾಂಶುಪಾಲ ಇಹಸಾನುಲ್ ಹಕ್ ಅವರನ್ನು ನೇಮಿಸಲಾಗಿತ್ತು. ಉಪ ಪ್ರಾಂಶುಪಾಲ ಇಮ್ತಿಯಾಜ್ ಆಲಂ ಅವರನ್ನು ವೀಕ್ಷಕರನ್ನಾಗಿ ನೇಮಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಹಕ್ ಮತ್ತು ಆಲಂ ಅವರ ವಿಚಾರಣೆ ನಂತರ ಸಿಬಿಐ ಅವರನ್ನು ಬಂಧಿಸಿದೆ.

ಈ ಜಿಲ್ಲೆಯ ಮತ್ತೈವರನ್ನು ತನಿಖಾ ಸಂಸ್ಥೆ ವಿಚಾರಣೆ ನಡೆಸುತ್ತಿದೆ.

ನೀಟ್ ಗೊಂದಲ: ಗೌರವಯುತ ಮತ್ತು ಉತ್ತಮ ಚರ್ಚೆಗೆ ಪ್ರಧಾನಿಗೆ ಮನವಿ

'ಸರ್ಕಾರ, ವಿಪಕ್ಷ ಒಟ್ಟಾಗಿ ಸಂದೇಶ ನೀಡಬೇಕು'

ನವದೆಹಲಿ (ಪಿಟಿಐ): ನೀಟ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ದೇಶದ ಯುವಜನರ ಭವಿಷ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಿಂದ ಈ ವಿಚಾರದಲ್ಲಿ ಸಂಸತ್ತಿನಲ್ಲಿ 'ಗೌರವಯುತ' ಮತ್ತು ಉತ್ತಮ ಚರ್ಚೆಯಾಗಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿಯವರಿಗೆ ಶುಕ್ರವಾರ ಮನವಿ ಮಾಡಿದರು.



ರಾಹುಲ್ ಗಾಂಧಿ

ಲೋಕಸಭಾ ಕಲಾಪ ಆರಂಭಕ್ಕೂ ಮುನ್ನ ಸಂಸತ್ತಿನ ಸಂಕೀರ್ಣದಲ್ಲಿ ವರದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರಪತಿಯವರ ಭಾಷಣದ ಮೇಲಿನ ಚರ್ಚೆ ಕೈಗೆತ್ತಿಕೊಳ್ಳುವುದಕ್ಕೂ ಮೊದಲು ನೀಟ್ ವಿಚಾರ ಚರ್ಚಿಸಬೇಕು ಎಂದರು.

'ಯುವಜನರು ಆತಂಕಗೊಂಡಿದ್ದಾರೆ. ಮುಂದೆ ಏನಾಗಲಿದೆ ಎಂಬುದು ಅವರಿಗೆ ಗೊತ್ತಿಲ್ಲ. ವಿದ್ಯಾರ್ಥಿಗಳ ಆತಂಕದ ಬಗ್ಗೆ ಚರ್ಚೆ ನಡೆಸುವಾಗ ಸರ್ಕಾರ ಮತ್ತು ವಿರೋಧ ಪಕ್ಷಗಳು ಒಟ್ಟಾಗಿವೆ ಎಂಬ ಸಂದೇಶ ಮತ್ತು ಭರವಸೆ ಸಂಸತ್ತಿನಿಂದ ಅವರಿಗೆ ತಲುಪಬೇಕು' ಎಂದು ಹೇಳಿದರು.

ಪ್ರಸ್ತುತ ಸಂದರ್ಭದಲ್ಲಿ ನೀಟ್ ವಿಚಾರವೇ ಮುಖ್ಯ ಎಂದು 'ಇಂಡಿಯಾ' ಕೂಟ ಯೋಚಿಸುತ್ತದೆ ಎಂದು ರಾಹುಲ್ ಗಾಂಧಿ ಹೇಳಿದರು.

ತಮಿಳುನಾಡಿಗೆ ವಿನಾಯಿತಿ: ನಿರ್ಣಯ ಅಂಗೀಕಾರ

ಚೆನ್ನೈ (ಪಿಟಿಐ): ನೀಟ್‌ನಿಂದ ತಮಿಳುನಾಡಿಗೆ ವಿನಾಯಿತಿ ನೀಡಿ, ದ್ವಿತೀಯ ಪಿಯುಸಿ ಅಂಕಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ವೈದ್ಯಕೀಯ ಕೋರ್ಸ್‌ಗಳಿಗೆ ದಾಖಲು ಮಾಡಲು ಅವಕಾಶ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ತಮಿಳುನಾಡಿನ ವಿಧಾನಸಭೆ ಶುಕ್ರವಾರ ಮತ್ತೊಮ್ಮೆ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ.

ಈ ನಿರ್ಣಯಕ್ಕೆ ಬಿಜೆಪಿ ವಿರೋಧ ವ್ಯಕ್ತಪಡಿಸಿದ್ದು, ಕಲಾಪ ಬಹಿಷ್ಕರಿಸಿತು.

'ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಮತ್ತು ನೀಟ್ ಬಗ್ಗೆ ರಾಜ್ಯಗಳಿಂದ ಹೆಚ್ಚುತ್ತಿರುವ ವಿರೋಧವನ್ನು ಪರಿಗಣಿಸಿ ರಾಷ್ಟ್ರವ್ಯಾಪಿ ನಡೆಸಲಾಗುವ ಈ ಪರೀಕ್ಷೆಯನ್ನು ರದ್ದುಪಡಿಸಬೇಕು ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ನಿರ್ಣಯದಲ್ಲಿ ಹೇಳಲಾಗಿದೆ. ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮಂಡಿಸಿದ ನಿರ್ಣಯವನ್ನು ಬಿಜೆಪಿಯ ಮೈತ್ರಿ ಪಕ್ಷ ಪಿಎಂಕೆ ಬೆಂಬಲಿಸಿತು.

'ಬಿಹಾರದಲ್ಲಿ ಕಠಿಣ ಕಾನೂನು'

ಪಟ್ನಾ (ಪಿಟಿಐ): ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ರಾಜ್ಯ ಸರ್ಕಾರ ಕಠಿಣ ಕಾನೂನು ಜಾರಿಗೆ ತರಲಿದೆ ಎಂದು ಬಿಹಾರ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಶುಕ್ರವಾರ ಹೇಳಿದ್ದಾರೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿರ್ದೇಶನದ ಅನ್ವಯ, ವಿಧಾನಸಭೆಯ ಮುಂಗಾರು ಅಧಿವೇಶನದಲ್ಲಿ ಈ ಸಂಬಂಧ ಹೊಸ ಕಾನೂನನ್ನು ಜಾರಿಗೆ ತರಲಾಗುವುದು ಎಂದು ಅವರು ಹೇಳಿದ್ದಾರೆ.

ಜುಲೈ 22ರಿಂದ 26ರವರೆಗೆ ಬಿಹಾರದ ವಿಧಾನಸಭೆ ಅಧಿವೇಶದ ನಡೆಯಲಿದೆ.

ಚರ್ಚೆಗೆ ಸರ್ಕಾರ ಸಿದ್ಧ– ಪ್ರಧಾನ್


ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ ನಡೆದ 'ನೀಟ್' ಅಕ್ರಮಗಳ ಕುರಿತ ಚರ್ಚೆಗೆ ಸರ್ಕಾರ ಸಿದ್ಧವಿದೆ. ಈ ವಿಷಯ ನಿಯಮಾವಳಿ ಪ್ರಕಾರ ಚರ್ಚೆಗೆ ಬರುತ್ತದೆ. ಆದ್ದರಿಂದ ವಿರೋಧ ಪಕ್ಷಗಳು ಸಭ್ಯತೆಯನ್ನು ಕಾಯ್ದುಕೊಳ್ಳಬೇಕು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶುಕ್ರವಾರ ತಿಳಿಸಿದರು.

'ನೀಟ್' ಅವ್ಯವಹಾರಗಳ ಕುರಿತು ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳು ಲೋಕಸಭೆಯಲ್ಲಿ ಶುಕ್ರವಾರ ಗದ್ದಲ ಎಬ್ಬಿಸಿದ ಪರಿಣಾಮ, ಕಲಾಪವನ್ನು ಮುಂದೂಡಲಾಯಿತು. ಅದಾದ ಬಳಿಕ ಸಚಿವರು ಸುದ್ದಿಗಾರರ ಜತೆ ಮಾತನಾಡಿದರು.

'ನೀಟ್‌ಗೆ ಸಂಬಂಧಿಸಿದ ಚರ್ಚೆಗೆ ಸರ್ಕಾರ ಸಿದ್ಧವಿದೆ. ಆದರೆ, ಎಲ್ಲವೂ ನಿಯಮಾವಳಿಯಂತೆ ನಡೆಯಬೇಕಿದ್ದು, ಪ್ರತಿಪಕ್ಷಗಳು ಸಭ್ಯತೆ ಮೀರಬಾರದು. ರಾಷ್ಟ್ರಪತಿಯವರೂ ತಮ್ಮ ಭಾಷಣದಲ್ಲಿ ನೀಟ್ ಕುರಿತು ಪ್ರಸ್ತಾಪಿಸಿದ್ದಾರೆ. ಇದು, ಈ ವಿಷಯದಲ್ಲಿ ಸರ್ಕಾರದ ಬದ್ಧತೆ ಪ್ರದರ್ಶಿಸುತ್ತದೆ' ಎಂದು ಅವರು ಹೇಳಿದರು.

ಪರೀಕ್ಷಾ ವಿಷಯದಲ್ಲಿ ಸರ್ಕಾರವೇ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸಿದ್ಧವಿರುವಾಗ ಗೊಂದಲವೇಕೆ? ಅಕ್ರಮ ಎಸಗಿದ ಯಾರನ್ನೂ ಸಿಬಿಐ ಬಿಡುವುದಿಲ್ಲ. ದೇಶದ ಯುವಜನ ಮತ್ತು ವಿದ್ಯಾರ್ಥಿಗಳ ಹಿತಕಾಯುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

'ಸರ್ಕಾರದ ನಿರ್ಧಾರ ಸರಿಯಿದೆ'



ದೇವೇಗೌಡ

'ನೀಟ್' ಅಕ್ರಮಗಳ ಕುರಿತು ಕೇಂದ್ರ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿ ಸರಿಯಾದ ನಿರ್ಧಾರ ತೆಗೆದುಕೊಂಡಿದೆ. ತನಿಖೆ ಪೂರ್ಣಗೊಳ್ಳುವವರೆಗೆ ಸರ್ಕಾರ ಯಾರನ್ನೂ ಹೊಣೆಗಾರರನ್ನಾಗಿ ಮಾಡಲು ಆಗುವುದಿಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಿಳಿಸಿದರು.

ನೀಟ್ ಅಕ್ರಮಗಳ ಕುರಿತ ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳು ರಾಜ್ಯಸಭೆಯಲ್ಲಿ ಗದ್ದಲ ಎಬ್ಬಿಸಿದ ವೇಳೆ ಮಾತನಾಡಿದ ಅವರು, ಸದನ ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. 'ನೀಟ್' ಅಕ್ರಮಗಳಿಂದ ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದಾರೆ. ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಹೀಗಾಗಿ ಸರ್ಕಾರ ಜವಾಬ್ದಾರಿ ನಿಗದಿಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ದೆಹಲಿ ಅಬಕಾರಿ ನೀತಿ ಹಗರಣ

9ನೇ ಚಾರ್ಜ್‌ಶೀಟ್ ಸಲ್ಲಿಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಯ ಹಣ ಅಕ್ರಮ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಶುಕ್ರವಾರ 9ನೇ ಚಾರ್ಜ್‌ಶೀಟ್ ಸಲ್ಲಿಸಿದ್ದು, ವಿನೋದ್ ಚೌಹಾನ್ ಎನ್ನುವ ವ್ಯಕ್ತಿಯನ್ನು ಆರೋಪಿ ಎಂದು ಹೆಸರಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆಯ ಭಾಗವಾಗಿ ಚೌಹಾನ್ ಅವರನ್ನು ಮೇ ತಿಂಗಳಲ್ಲಿ ಬಂಧಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್, ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ಸಂಸದ ಸಂಜಯ್ ಸಿಂಗ್, ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ ಕೆ.ಕವಿತಾ, ಉದ್ಯಮಿಗಳು ಸೇರಿದಂತೆ ಹಲವರನ್ನು ಬಂಧಿಸಿದ್ದು, ಚೌಹಾನ್ ಈ ಸಂಬಂಧ ಬಂಧನಕ್ಕೊಳಗಾದ 18ನೇ ಆರೋಪಿಯಾಗಿದ್ದಾರೆ.

ಕವಿತಾ ಅವರ ಬಂಧನಕ್ಕೆ ಸಂಬಂಧಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಯಲ್ಲಿ ಜಾರಿ ನಿರ್ದೇಶನಾಲಯವು ಹಗರಣದಲ್ಲಿ ಚೌಹಾನ್ ಅವರ ಪಾತ್ರವನ್ನು ವಿವರಿಸಿದೆ.

ಅಭಿಷೇಕ್ ಬೋಯಿನಪಲ್ಲಿ ಅವರ ನಿರ್ದೇಶನದಂತೆ, ಹಣ ತುಂಬಿದ ಎರಡು ದೊಡ್ಡ ಬ್ಯಾಗ್‌ಗಳನ್ನು ದಿನೇಶ್ ಅರೋರಾ ಅವರ ಕಚೇರಿಯಿಂದ ಸಂಗ್ರಹಿಸಿ ಅವನ್ನು ವಿನೋದ್ ಚೌಹಾನ್ ಅವರಿಗೆ ನೀಡಿದ್ದಾಗಿ ಕೆ.ಕವಿತಾ ಅವರ ಸಿಬ್ಬಂದಿಯ ಪೈಕಿ ಒಬ್ಬರು ಹೇಳಿಕೆ ನೀಡಿದ್ದರು.

ಮತ್ತೊಂದು ಸಂದರ್ಭದಲ್ಲಿ, ನವದೆಹಲಿಯ ತೋಡಾಪುರದ ಬಳಿಯ ವಿಳಾಸವೊಂದರಿಂದ ಹಣದ ಎರಡು ಬ್ಯಾಗ್‌ಗಳನ್ನು ಸಂಗ್ರಹಿಸಿ, ಮತ್ತೆ ಅವನ್ನು ವಿನೋದ್ ಚೌಹಾನ್ ಅವರಿಗೆ ನೀಡಿದ್ದಾರೆ. ಅವರು ಅದನ್ನು ಹವಾಲಾ ಮಾರ್ಗದ ಮೂಲಕ ಗೋವಾದಲ್ಲಿ ಎಎಪಿಯ ಚುನಾವಣಾ ಪ್ರಚಾರಕ್ಕಾಗಿ ಬಳಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

₹19 ಕೋಟಿ ಮೌಲ್ಯದ ಹೆರಾಯಿನ್ ವಶ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪೊಲೀಸರು ನಡೆಸಿದ ಮೂರು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಬರೋಬ್ಬರಿ ₹19 ಕೋಟಿ ಮೌಲ್ಯದ ಹೆರಾಯಿನ್ ವಶಪಡಿಸಿಕೊಳ್ಳಲಾಗಿದ್ದು, 6 ಜನರನ್ನು ಬಂಧಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

'ಖಚಿತ ಮಾಹಿತಿ ಮೇರೆಗೆ ಪೊಲೀಸರು ಕಛಾರ್ ಜಿಲ್ಲೆಯ ದಿಘಾರ್ಖಲ್ ಟೋಲ್‌ಗೇಟ್ ಬಳಿ ವಿಶೇಷ ಕಾರ್ಯಾಚರಣೆ ಕೈಗೊಂಡು 1.88 ಕೆ.ಜಿ. ತೂಕದ ಹೆರಾಯಿನ್ ಅನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಮೂವರನ್ನು ಬಂಧಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಳ್ಳಲಾದ ಹೆರಾಯಿನ್‌ಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹9.5 ಕೋಟಿ ಮೌಲ್ಯವಿದೆ' ಎಂದು ಶುಕ್ರವಾರ 'ಎಕ್ಸ್‌'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಇದೇ ಕಛಾರ್ ಜಿಲ್ಲೆಯಲ್ಲಿ ನಡೆದ ಮತ್ತೊಂದು ಕಾರ್ಯಾಚರಣೆಯಲ್ಲಿ ಪೊಲೀಸರು ₹3 ಕೋಟಿ ಮೌಲ್ಯದ 561 ಗ್ರಾಂ ಹೆರಾಯಿನ್ ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಿದ್ದಾರೆ. ಇನ್ನು ಕರ್ಬಿ ಅಂಗ್ಲೋಂಗ್ ಜಿಲ್ಲೆಯಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸಿ 1 ಕೆ.ಜಿ. ಹೆರಾಯಿನ್ ಹಾಗೂ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದಿದ್ದಾರೆ. ಈ ಎಲ್ಲ ಕಾರ್ಯಾಚರಣೆಗಳನ್ನು ನಡೆಸಿದ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಅವರು ಬರೆದುಕೊಂಡಿದ್ದಾರೆ.

ಚೆನ್ನೈ: ₹21 ಕೋಟಿ ಮೌಲ್ಯದ ಕೊಕೇನ್ ಜಪ್ತಿ

ಚೆನ್ನೈ (ಪಿಟಿಐ): ಘಾನಾದಿಂದ ಚೆನ್ನೈ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಯಾಣಿಕರೊಬ್ಬರಿಂದ ₹21 ಕೋಟಿ ಮೌಲ್ಯದ 2 ಕೆ.ಜಿ.ಗೂ ಹೆಚ್ಚು ಪ್ರಮಾಣದ ಕೊಕೇನ್ ಜಪ್ತಿ ಮಾಡಲಾಗಿದೆ ಎಂದು ಕಸ್ಟಮ್ಸ್ ಇಲಾಖೆ ಶುಕ್ರವಾರ ತಿಳಿಸಿದೆ

ಪಶ್ಚಿಮ ಆಫ್ರಿಕಾದ ದೇಶದಿಂದ ಜೂನ್ 26ರಂದು ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮಹಿಳೆಯನ್ನು ಗುಪ್ತಚರ ಅಧಿಕಾರಿಗಳು ತಡೆದಿದ್ದರು. ವಿಚಾರಣೆಯ ವೇಳೆ ಆಕೆಯ ಪಾದರಕ್ಷೆ ಮತ್ತು ಬ್ಯಾಗ್‌ನಲ್ಲಿ ಪುಡಿ ರೂಪದಲ್ಲಿರುವ ಮಾದಕ ವಸ್ತು ಪತ್ತೆಯಾಗಿದೆ ಎಂದು ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ ಎಂದು ಕಸ್ಟಮ್ಸ್‌ನ ಆಯುಕ್ತ ಆರ್ ಶ್ರೀನಿವಾಸ್ ನಾಯಕ್ ತಿಳಿಸಿದ್ದಾರೆ. ಬಂಧಿತ ಮಹಿಳೆಯಿಂದ 2095 ಗ್ರಾಂ ಕೊಕೇನ್ ವಶಪಡಿಸಿಕೊಳ್ಳಲಾಗಿದ್ದು, ಸದ್ಯ ಪುಝಲ್ ಕೇಂದ್ರ ಕಾರಾಗೃಹದಲ್ಲಿ ಆಕೆಯನ್ನು ಇರಿಸಲಾಗಿದೆ.

31.50 ಕೆ.ಜಿ ಮಾದಕ ದ್ರವ್ಯ ಜಪ್ತಿ

ಮುಂಬೈ: ಇಲ್ಲಿನ ನಾಗಪಾಡ ಎಂಬ ಪ್ರದೇಶದಲ್ಲಿ ಅಂತರರಾಜ್ಯ ಮಾದಕ ದ್ರವ್ಯ ಕಳ್ಳಸಾಗಣೆ ಜಾಲವನ್ನು ಭೇದಿಸಿರುವ ಮಾದಕ ದ್ರವ್ಯ ನಿಯಂತ್ರಣ ದಳವು (ಎನ್‌ಸಿಬಿ) 31.50 ಕೆ.ಜಿ.ಯಷ್ಟು ಮೆಫೆಡ್ರೋನ್ (ಮಾದಕ ದ್ರವ್ಯ) ಹಾಗೂ ₹69.13 ಲಕ್ಷ ನಗದನ್ನು ವಶಕ್ಕೆ ಪಡೆದಿದೆ.

ಅಲ್ಲದೆ, ಈ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಈ ಮಾದಕ ದ್ರವ್ಯವನ್ನು ಮುಂಬೈನ ವಿವಿಧ ಸ್ಥಳಗಳಲ್ಲಿ ಹಂಚಿಕೆ ಮಾಡುವ ಉದ್ದೇಶವನ್ನು ಆರೋಪಿಗಳು ಹೊಂದಿದ್ದರು ಎಂದು ತಿಳಿದುಬಂದಿದೆ.

ಈ ಕುರಿತು ಗುಪ್ತಚರ ಇಲಾಖೆ ನೀಡಿದ ಖಚಿತ ಮಾಹಿತಿ ಮೇರೆಗೆ ಮಾದಕ ದ್ರವ್ಯ ನಿಯಂತ್ರಣ ದಳದ ಮುಂಬೈ ವಲಯವು ಕಾರ್ಯಾಚರಣೆ ನಡೆಸಿತ್ತು.

ಡಿಎಂಕೆ ಸರ್ಕಾರ: ವಿಜಯ್ ಟೀಕೆ

ಪ್ರಜಾವಾಣಿ ವಾರ್ತೆ



ವಿಜಯ್

ಚೆನ್ನೈ: ಫೆಬ್ರುವರಿಯಲ್ಲಿ ರಾಜಕೀಯ ಪಕ್ಷ ಸ್ಥಾಪನೆ ಮಾಡಿದ ನಂತರ ತಮಿಳು ನಟ ವಿಜಯ್ ಮೊದಲ ಬಾರಿಗೆ ಶುಕ್ರವಾರ ಸಾರ್ವಜನಿಕರೊಂದಿಗೆ ಸಂವಾದ ನಡೆಸಿದರು. ಮಾದಕ ವಸ್ತುಗಳಿಂದ ದೂರ ಉಳಿಯುವಂತೆ ಯುವ ಮತದಾರರಿಂದ ಶಪಥ ಮಾಡಿಸಿದ ವಿಜಯ್, ಡಿಎಂಕೆ ಸರ್ಕಾರವು ರಾಜ್ಯದಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯನ್ನು ತಡೆಯುವಲ್ಲಿ ವಿಫಲವಾಗಿದೆ ಎಂದು ಹೇಳಿದರು.

ಜಿಲ್ಲಾ ಮಟ್ಟದಲ್ಲಿ 10 ಮತ್ತು 12ನೇ ತರಗತಿಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಸಮಾರಂಭದಲ್ಲಿ ಭಾಗವಹಿಸಿದ್ದ ಅವರು, ರಾಜ್ಯದಲ್ಲಿ ರಾಜಕಾರಣ ಅಷ್ಟೇ ಅಲ್ಲದೇ ಪ್ರತಿ ಕ್ಷೇತ್ರದಲ್ಲೂ ಉತ್ತಮ ನಾಯಕರ ಅಗತ್ಯವಿದೆ ಎಂದು ಹೇಳುವ ಮೂಲಕ ಚಾಲ್ತಿಯಲ್ಲಿರುವ ರಾಜಕೀಯ ಪಕ್ಷಗಳನ್ನು ಟೀಕಿಸಿದರು.

'ಎಂದಿಗೂ ಕೆಟ್ಟ ಕೆಲಸಗಳಲ್ಲಿ ತೊಡಗಬೇಡಿ. ನಿಮ್ಮ ಅಸ್ತಿತ್ವವನ್ನು ಎಂದೂ ಕಳೆದುಕೊಳ್ಳಬೇಡಿ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ತಮಿಳುನಾಡಿನ ಯುವ ಜನತೆಯಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚಾಗಿದೆ. ಇದರ ಬಗ್ಗೆ ಮಕ್ಕಳ ತಂದೆಯಾಗಿ ಮತ್ತು ರಾಜಕೀಯ ಪಕ್ಷವೊಂದರ ನಾಯಕನಾಗಿ ನಾನು ಚಿಂತೆಗೊಳಗಾಗಿದ್ದೇನೆ' ಎಂದು ಹೇಳಿದರು.

ವಿಜಯ್ ಅವರು 'ತಮಿಳಗ ವೆಟ್ರಿ ಕಳಗಂ' ಪಕ್ಷ ಸ್ಥಾಪನೆ ಮಾಡಿದ ನಂತರ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸತತ ಎರಡನೇ ಬಾರಿ ಸನ್ಮಾನಿಸಿದರು.

2023ರಲ್ಲಿ ಅವರು, ಮತ ಚಲಾವಣೆಗಾಗಿ ಹಣ ಪಡೆಯದಿರುವಂತೆ, ಮತ ಮಾರಾಟ ಮಾಡದಂತೆ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಕರೆ ನೀಡಿದ್ದರು.

ಚಂದ್ರನಿಂದ 2 ಕೆ.ಜಿ ಮಣ್ಣು ತಂದ ಚೀನಾ

ಬೀಜಿಂಗ್ (ಪಿಟಿಐ): ಚಂದ್ರನ ದಕ್ಷಿಣ ಧ್ರುವದಲ್ಲಿರುವ, ಭೂಮಿಯಿಂದ ನೇರವಾಗಿ ಕಾಣದ ಪ್ರದೇಶದಿಂದ ಚೀನಾದ ಚಾಂಗ್‌'ಇ–6 ನೌಕೆ ಕೆಲವು ದಿನಗಳ ಹಿಂದೆ ಹೊತ್ತು ತಂದಿರುವ ಮಾದರಿಗಳು 1934.3 ಗ್ರಾಂಗಳಷ್ಟು (1.934 ಕೆಜಿ) ತೂಕವಿದೆ.

ಭೂಮಿಯನ್ನು ಸ್ಪರ್ಶಿಸಿದ್ದ ನೌಕೆಯ ಘಟಕವನ್ನು ತೆರೆದು ಮಾದರಿಗಳನ್ನು ಸಂಗ್ರಹಿಸಿರುವ ಚೀನಾದ ಬಾಹ್ಯಾಕಾಶ ಸಂಸ್ಥೆ ಸಿಎನ್‌ಎಸ್‌ಎ ಈ ಬಗ್ಗೆ ಮಾಹಿತಿ ನೀಡಿದೆ.

'ಚಂದ್ರನ ಅಂಗಳನಿಂದ ಭೂಮಿಗೆ ತರಲಾಗಿರುವ ಮಾದರಿಗಳನ್ನು ಮೇಲ್ನೋಟಕ್ಕೆ ನೋಡಿದಾಗ, ಈ ಹಿಂದೆ ಅಲ್ಲಿಂದ ತಂದ ಮಾದರಿಗಳಿಗೆ ಹೋಲಿಸಿದರೆ ಇವು ಮೆದುವಾಗಿದ್ದು(ಅರೆ ದ್ರವಸ್ಥಿತಿ) ಗಂಟು ಗಂಟಾಗಿವೆ' ಎಂದು ಸಿಎನ್‌ಎಸ್‌ಎಯ ಚಂದ್ರನ ಅಧ್ಯಯನ ಮತ್ತು ಬಾಹ್ಯಾಕಾಶ ಎಂಜಿನಿಯರಿಂಗ್ ಕೇಂದ್ರದ ಉಪ ನಿರ್ದೇಶಕ, ಚಾಂಗ್‌'ಇ–6 ಯೋಜನೆ ವಕ್ತಾರ ಗೆ ಪಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ವಿಜ್ಞಾನಿಗಳು ಈ ಮಾದರಿಗಳನ್ನು ದಾಸ್ತಾನು ಮಾಡುವುದರ ಜೊತೆಗೆ ಸಂಸ್ಕರಿಸಲಿದ್ದು, ಬಳಿಕ ನಿಗದಿಯಂತೆ ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಲಿದ್ದಾರೆ.'

ಭೂಮಿಗೆ ನೇರವಾಗಿ ಕಾಣದ ಚಂದ್ರನ ಮೇಲ್ಮೈನಿಂದ ಮಾದರಿಗಳನ್ನು ಮೊದಲ ಬಾರಿಗೆ ಸಂಗ್ರಹಿಸಲಾಗಿದೆ. ಈ ಅಧ್ಯಯನಕ್ಕೆ ವೈಜ್ಞಾನಿಕ ಮಹತ್ವವಿದೆ. ಚಂದ್ರನ ವಿಕಾಸಕ್ಕೆ ಅರ್ಥೈಸಿಕೊಳ್ಳಲು ಇದು ನೆರವಾಗಲಿದೆ. ಅಲ್ಲದೇ, ಚಂದ್ರನ ಸಂಪನ್ಮೂಲಗಳ ಅಧ್ಯಯನ ಮತ್ತು ಬಳಕೆಯ ವೇಗವನ್ನು ಇದು ಹೆಚ್ಚಿಸಲಿದೆ. ಈ ಮಾದರಿಗಳು ಇಡೀ ಮನುಕುಲಕ್ಕೆ ದೊಡ್ಡ ಆಸ್ತಿಯಾಗಲಿದೆ' ಎಂದು ಸಿಎನ್‌ಎಸ್‌ಎ ಹೇಳಿದೆ.

ಕಲ್ಲು ತೂರಾಟ: ಇಬ್ಬರ ಬಂಧನ

ಛತ್ರಪತಿ ಸಂಭಾಜಿನಗರ (ಪಿಟಿಐ): ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಅವರ ಗ್ರಾಮದಲ್ಲಿ ಕಲ್ಲು ತೂರಾಟ ಮತ್ತು ಘೋಷಣೆಗಳನ್ನು ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಅಲ್ಲದೆ, 15–20 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಮಟೋರಿ ಗ್ರಾಮದಲ್ಲಿ ಗುರುವಾರ ರಾತ್ರಿ ಈ ಘಟನೆ ವರದಿಯಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ರಾಜ್ಯ ಮೀಸಲು ಪೊಲೀಸ್ ಪಡೆಯ ತುಕಡಿಯೊಂದನ್ನು ನಿಯೋಜಿಸಲಾಗಿದೆ.

ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಗೆ ಒತ್ತಾಯಿಸಿ ಮೀಸಲಾತಿ ಹೋರಾಟಗಾರರಾದ ಲಕ್ಷ್ಮಣ್ ಹಾಕೆ ಮತ್ತು ನವನಾಥ ವಾಘ್ಮಾರೆ ಅವರ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಸುತ್ತ–ಮುತ್ತಲಿನ ಗ್ರಾಮಸ್ಥರು ಗುರುವಾರ ರಾತ್ರಿ 8 ಗಂಟೆ ಸುಮಾರಿಗೆ ಮಟೋರಿ ಗ್ರಾಮದ ಮುಖಾಂತರ ತೆರಳುತ್ತಿದ್ದರು. ಈ ವೇಳೆ ಕೆಲವರು ಘೋಷಣೆಗಳನ್ನು ಕೂಗಿದ್ದು, ಬಳಿಕ ಗ್ರಾಮದ ಬಸ್ ನಿಲ್ದಾಣದ ಬಳಿ ಕಲ್ಲು ತೂರಾಟ ನಡೆದಿದೆ.

ನೀಟ್ ಚರ್ಚೆ: ಬಿಗಿ ಪಟ್ಟು

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಓಂ ಬಿರ್ಲಾ, ರಾಷ್ಟ್ರಪತಿಯವರ ಭಾಷಣದ ಮೇಲೆ ವಂದನಾ ನಿರ್ಣಯ ಚರ್ಚೆಯ ಬಳಿಕ ಈ ಬಗ್ಗೆ ಪ್ರಸ್ತಾಪಿಸಿ' ಎಂದು ಹೇಳಿದರು. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕೂಡ ಧ್ವನಿ ಗೂಡಿಸಿದರು.

ಇದಕ್ಕೆ ಒಪ್ಪದ ರಾಹುಲ್, ನೀಟ್ ಬಗ್ಗೆ ಮಾತು ಮುಂದುವರಿಸುತ್ತಾ ಮೈಕ್ ಬಂದ್ ಮಾಡಬಾರದು ಎಂದು ಹೇಳಿದರು. 'ನನ್ನ ಬಳಿ ಅದರ ಸ್ವಿಚ್ ಇಲ್ಲ' ಎಂದು ಸ್ಪೀಕರ್ ಹೇಳಿದರು.

ಅದಾಗಿ ಕೆಲ ಹೊತ್ತಿನಲ್ಲಿ ರಾಹುಲ್ ಮಾತನಾಡುವಾಗ ಮೈಕ್ ಬಂದ್ ಆಯಿತು. ಈ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಎಬ್ಬಿಸಿದರು.

ಸದನವನ್ನು ಮಧ್ಯಾಹ್ನ 12ರವರೆಗೆ ಸ್ಪೀಕರ್ ಮುಂದೂಡಿದರು. ಕಲಾಪ ಮತ್ತೆ ಆರಂಭವಾದಾಗ, ವಿದ್ಯಾರ್ಥಿಗಳಿಗೆ ಬೆಂಬಲ ಸೂಚಿಸುವುದಕ್ಕಾಗಿ ನೀಟ್ ವಿಚಾರದ ಬಗ್ಗೆ 'ಗೌರವಯುತ' ಚರ್ಚೆ ನಡೆಯಬೇಕು ಎಂದು ರಾಹುಲ್ ಒತ್ತಾಯಿಸಿದರು.

ಸದನದ ನಿಯಮಗಳನ್ನು ಪಾಲಿಸುವಂತೆ ರಾಹುಲ್ ಅವರಿಗೆ ಸ್ಪೀಕರ್ ಬಿರ್ಲಾ ಸಲಹೆ ನೀಡಿದರು.

ಆದರೆ, ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷಗಳ ಸದಸ್ಯರು ತಮ್ಮ ಬೇಡಿಕೆ ಈಡೇರಿಸುವಂತೆ ಪಟ್ಟು ಹಿಡಿದರು. ಆ ನಂತರ ಬಿರ್ಲಾ ಅವರು ಕಲಾಪವನ್ನು ಸೋಮವಾರದವರೆಗೆ ಮುಂದೂಡಿದರು.

ಮೇಲ್ಮನೆಯಲ್ಲೂ ಕೋಲಾಹಲ: ನೀಟ್ ವಿಚಾರಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಕಲಾಪ ಮುಂದೂಡಿಕೆಗೆ ಸಾಕ್ಷಿಯಾದ ರಾಜ್ಯಸಭೆಯಲ್ಲಿ ಶುಕ್ರವಾರ ಹಲವು ನಾಟಕೀಯ ಬೆಳವಣಿಗೆಗಳು ಮತ್ತು ಇದುವರೆಗೂ ಕಂಡು ಕೇಳರಿಯದ ಘಟನೆಗಳು ನಡೆದವು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಸರ್ಕಾರದ ಪರವಾಗಿ ಮಾತನಾಡಿದರೆ, ಕಾಂಗ್ರೆಸ್ ಸದಸ್ಯೆ ಫೂಲೊ ನೇತಾಂ ದೇವಿ ಅವರು ಸದನದ ಒಳಗಡೆ ತಲೆ ಸುತ್ತು ಬಂದು ಬಿದ್ದರು. ನಂತರ ಅವರಿಗೆ ಚಿಕಿತ್ಸೆ ಕೊಡಿಸಲಾಯಿತು.

ನೋಟಿಸ್ ತಿರಸ್ಕಾರ: ಸದನದ ಎಲ್ಲ ಕಲಾಪಗಳನ್ನೂ ಬದಿಗೊತ್ತಿ ನೀಟ್ ಅಕ್ರಮದ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿ ತೃಣಮೂಲ ಕಾಂಗ್ರೆಸ್‌ನ 11 ಸೇರಿದಂತೆ ವಿರೋಧ ಪಕ್ಷಗಳ 22 ನೋಟಿಸ್‌ಗಳನ್ನು ಸಭಾಪತಿ ಜಗದೀಪ್ ಧನಕರ್ ತಿರಸ್ಕರಿಸಿದರು. ಇದರಿಂದ ಅಸಮಾಧಾನಗೊಂಡ ವಿರೋಧ ಪಕ್ಷಗಳ ಸದಸ್ಯರು ತಮ್ಮ ಆಸನಗಳಿಂದ ಎದ್ದು, ಘೋಷಣೆಗಳನ್ನು ಕೂಗಿದರಲ್ಲದೇ ಸಭಾಪತಿ ಪೀಠದ ಮುಂದೆ ಜಮಾಯಿಸಿದರು. ಹಾಗಾಗಿ, ಮಧ್ಯಾಹ್ನ 12 ಗಂಟೆಯವರೆಗೆ ಸದನವನ್ನು ಮುಂದೂಡಲಾಯಿತು.

ಕಲಾಪ ಮತ್ತೆ ಆರಂಭಗೊಂಡಾಗ ಉಪ ಸಭಾಪತಿ ಹರಿವಂಶ್ ಅವರು ಬಿಜೆಪಿ ಸದಸ್ಯ ಸುಧಾಂಶು ತ್ರಿವೇದಿ ಅವರಿಗೆ ವಂದನಾ ನಿರ್ಣಯ ಮಂಡಿಸುವಂತೆ ಸೂಚಿಸಿದರು. ವಿರೋಧ ಪಕ್ಷಗಳು ಆಗಲೂ ಪ್ರತಿಭಟನೆ ಮುಂದುವರಿಸಿದವು.

ಕಲಾಪ ನಡೆಸಲು ಅವಕಾಶ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಸೊಪ್ಪುಹಾಕದ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ಮುಂದುವರಿಸಿದರು.

ಸಭಾಪತಿ ಧನಕರ್ ಅವರು ಆಸನಕ್ಕೆ ಮರಳಿದ ನಂತರ ಖರ್ಗೆಯವರು ಮಾತನಾಡಲು ಮುಂದಾದರು. ಇದಕ್ಕೆ ಅವರು ಅವಕಾಶ ನೀಡಲಿಲ್ಲ. ಖರ್ಗೆ ಸೇರಿದಂತೆ ಇತರ ಸದಸ್ಯರು ಮತ್ತೆ ಪೀಠದ ಮುಂದೆ ಪ್ರತಿಭಟನೆ ನಡೆಸಿದರು.



ಎಎಪಿ ಸಂಸದ ಸಂಜಯ್ ಸಿಂಗ್ ಅವರು ಪಕ್ಷದ ಇತರ ಸಂಸದರೊಂದಿಗೆ ಸಂಸತ್‌ನ ಹೊರಗಡೆ ಶುಕ್ರವಾರ ನೀಟ್ ಅಕ್ರಮದ ವಿರುದ್ಧ ಪ್ರತಿಭಟಿಸಿದರು –ಪಿಟಿಐ ಚಿತ್ರ

ಖರ್ಗೆ–ಧನಕರ್ ಏಟು ಎದಿರೇಟು

ಒಂದನೇ ಪುಟದಿಂದ..

'ಇದು ಅತ್ಯಂತ ಹೀನ ಮತ್ತು ಅಶಿಸ್ತಿನ ವರ್ತನೆ' ಎಂದರಲ್ಲದೆ, ಭಾರತೀಯ ಸಂಸತ್ತಿನ ಇತಿಹಾಸದಲ್ಲಿ ಇದು 'ಕಳಂಕಿತ' ದಿನ' ಎಂದು ಹೇಳಿದರು.

'ಈ ಸಂಸ್ಥೆಗೆ ಕಳಂಕ ಹಚ್ಚಿರುವುದನ್ನು, ಅಗೌರವ ತೋರಿದ್ದನ್ನು ನಾನು ಕಂಡೆ. ಇದು ಪ್ರಜಾಪ್ರಭುತ್ವದ ದೇವಾಲಯಕ್ಕೆ ಮಾಡಬಹುದಾದ ಅತ್ಯಂತ ಕೆಟ್ಟ ಅಪಚಾರ. ಆದೇಶವನ್ನು ಪಾಲನೆ ಮಾಡಬೇಕಾದವರಿಂದಲೇ ಇದು ನಡೆದಿದೆ ಎಂದರೆ, ಇದಕ್ಕಿಂತ ದೊಡ್ಡ ದುರದೃಷ್ಟ ಬೇರೆ ಇಲ್ಲ' ಎಂದರು.

ದಕ್ಷಿಣ ಆಫ್ರಿಕಾದ ಸಂಶೋಧಕರ ತಂಡದ ಶೋಧ

ಘೇಂಡಾಮೃಗ ಬೇಟೆ ತಡೆಗೆ ವಿಕಿರಣ ತಂತ್ರಜ್ಞಾನ

ಮೂಕೊಪೆನ್ (ದಕ್ಷಿಣ ಆಫ್ರಿಕಾ): ಘೇಂಡಾಮೃಗಗಳ ಬೇಟೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ದಕ್ಷಿಣ ಆಫ್ರಿಕಾದ ಸಂಶೋಧಕರ ತಂಡವೊಂದು ಸಂಶೋಧನೆಯ ಭಾಗವಾಗಿ 20 ಘೇಂಡಾಮೃಗಗಳ ಕೊಂಬುಗಳಿಗೆ ವಿಕಿರಣ ವಸ್ತುಗಳನ್ನು ಚುಚ್ಚಿದ್ದಾರೆ.

ರಾಷ್ಟ್ರೀಯ ಗಡಿಗಳಲ್ಲಿ ವಿಕಿರಣ ಪತ್ತೆಹಚ್ಚುವ ವಿಧಾನ ಈಗಾಗಲೇ ಬಳಕೆಯಲ್ಲಿದ್ದು, ಕಳ್ಳ ಸಾಗಣೆದಾರರು, ಬೇಟೆಗಾರರನ್ನು ಬಂಧಿಸಲು ಇದು ನೆರವಾಗುತ್ತದೆ.

ಪಶುವೈದ್ಯರು, ಪರಮಾಣು ತಜ್ಞರ ತಂಡ ಒಳಗೊಂಡ ಸಂಶೋಧಕರ ಗುಂಪು, ಘೇಂಡಾಮೃಗದ ಕೊಂಬುಗಳನ್ನು ಕೊರೆದು, ಅತ್ಯಂತ ಜಾಗರೂಕತೆಯಿಂದ ವಿಕಿರಣಶೀಲ ವಸ್ತುಗಳನ್ನು ಸೇರಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಜೊಹಾನಸ್‌ಬರ್ಗ್‌ನ ವಿಟ್‌ವಾಟರ್‌ಸ್ರ್ಯಾಂಡ್ ವಿಶ್ವವಿದ್ಯಾಲಯದ ವಿಕಿರಣ ಹಾಗೂ ಆರೋಗ್ಯ ಭೌತವಿಜ್ಞಾನ ಘಟಕದ ಸಂಶೋಧಕರ ತಂಡವು 20 ಜೀವಂತ ಘೇಂಡಾಮೃಗಗಳಿಗೆ ವಿಕಿರಣ ವಸ್ತುಗಳನ್ನು ಚುಚ್ಚಿದ್ದಾರೆ. ಇದೇ ರೀತಿ ಬೇಟೆಗೆ ಗುರಿಯಾಗುವ ಆನೆ, ಪ್ಯಾಂಗೋಲಿನ್‌ನಂತಹ ಪ್ರಾಣಿಗಳನ್ನು ಉಳಿಸಲು ಇದೇ ಮಾದರಿಯನ್ನು ಅನುಸರಿಸಬಹುದು ಎಂದು ತಂಡ ತಿಳಿಸಿದೆ.



ಕಳ್ಳಬೇಟೆ ತಡೆಯುವ ನಿಟ್ಟಿನಲ್ಲಿ ದಕ್ಷಿಣ ಆಫ್ರಿಕಾದ ಮೂಕೊಪೆನ್‌ನಲ್ಲಿ ಜೊಹಾನಸ್‌ಬರ್ಗ್‌ನ ವಿಟ್‌ವಾಟರ್‌ಸ್ರ್ಯಾಂಡ್ ವಿಶ್ವವಿದ್ಯಾಲಯದ ವಿಕಿರಣ ಹಾಗೂ ಆರೋಗ್ಯ ಭೌತವಿಜ್ಞಾನ ಘಟಕದ ಸಂಶೋಧಕರ ತಂಡವು ಘೇಂಡಾಮೃಗಗಳ ಕೊಂಬುಗಳಿಗೆ ವಿಕಿರಣ ವಸ್ತುಗಳನ್ನು ಚುಚ್ಚಿತು – ಎಎಫ್‌ಪಿ ಚಿತ್ರ

'ಪರಮಾಣು ಭಯೋತ್ಪಾದನೆ ತಡೆಯಲು ವಿನ್ಯಾಸಗೊಳಿಸಲಾದ ವಿಕಿರಣ ತಡೆ ವಿಧಾನಗಳ ಮೂಲಕ ಅಂತರರಾಷ್ಟ್ರೀಯ ಗಡಿಯಲ್ಲಿ ಇಂತಹ ಕೊಂಬುಗಳನ್ನು ಅತ್ಯಂತ ಸುಲಭವಾಗಿ ಪತ್ತೆ ಮಾಡಬಹುದು' ಎಂದು ಯೋಜನೆಯ ನೇತೃತ್ವ ವಹಿಸಿರುವ ಪ್ರೊ. ಜೇಮ್ಸ್ ಲಾರ್ಕಿನ್ ತಿಳಿಸಿದರು.

ಪರಿಸರ ಸಂರಕ್ಷಣೆಗೆ ಅಂತರರಾಷ್ಟ್ರೀಯ ಒಕ್ಕೂಟದ ಅಂಕಿಅಂಶದ ಪ್ರಕಾರ, 20ನೇ ಶತಮಾನದ ಆರಂಭದಲ್ಲಿ ಜಾಗತಿಕ ಮಟ್ಟದಲ್ಲಿ ಘೇಂಡಾಮೃಗಗಳ ಸಂಖ್ಯೆ 5 ಲಕ್ಷದಷ್ಟಿತ್ತು. ಕಾಳಸಂತೆಯಲ್ಲಿ ಘೇಂಡಾಮೃಗಗಳ ಕೊಂಬಿಗೆ ಸಾಕಷ್ಟು ಬೇಡಿಕೆ ಕಂಡುಬಂದಿದ್ದರಿಂದ, ದೊಡ್ಡ ಪ್ರಮಾಣದಲ್ಲಿ ಅವುಗಳನ್ನು ಕೊಲ್ಲಲಾಗುತ್ತಿದ್ದು, ಈಗ ಅವುಗಳ ಸಂಖ್ಯೆ 27 ಸಾವಿರಕ್ಕೆ ಇಳಿಕೆಯಾಗಿದೆ.

ದಕ್ಷಿಣ ಆಫ್ರಿಕಾವು ಇವುಗಳ ನೆಚ್ಚಿನ ಆವಾಸಸ್ಥಾನವಾಗಿದ್ದು, 16 ಸಾವಿರಕ್ಕೂ ಹೆಚ್ಚು ಘೇಂಡಾಮೃಗಗಳಿವೆ. ಕೊಂಬಿನ ಕಾರಣಕ್ಕಾಗಿಯೇ ಇಲ್ಲಿ ಪ್ರತಿ ವರ್ಷ 500ಕ್ಕೂ ಹೆಚ್ಚು ಘೇಂಡಾಮೃಗಗಳನ್ನು ಕೊಲ್ಲಲಾಗುತ್ತಿದೆ.

2020ರ ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ನಿರ್ಬಂಧದಿಂದ ಘೇಂಡಾಮೃಗಗಳ ಹತ್ಯೆಯ ಸಂಖ್ಯೆ ತೀವ್ರ ಇಳಿಮುಖ ದಾಖಲಿಸಿತ್ತು. ನಿರ್ಬಂಧ ತೆರವುಗೊಳಿಸಿದ ಬಳಿಕ ಬೇಟೆ ಅವ್ಯಾಹತವಾಗಿ ಮುಂದುವರಿದಿತ್ತು.

'ಬೇಟೆಯನ್ನು ಕಡಿಮೆ ಮಾಡಲು ಅತ್ಯಂತ ವಿನೂತನ ಮಾದರಿ ಆಯ್ಕೆ ಮಾಡಿಕೊಳ್ಳಬೇಕಿದೆ' ಎಂದು ತಿಳಿಸಿದ ಲಾರ್ಕಿನ್, ಕೋವಿಡ್‌ನಲ್ಲಿ ಇಳಿಕೆಯಾಗಿದ್ದ ಹತ್ಯೆ ಪ್ರಕರಣಗಳು ಬಳಿಕ ತೀವ್ರಗತಿಯಲ್ಲಿ ಏರಿಕೆ ದಾಖಲಿಸಿರುವುದನ್ನು ಕಾಣಬಹುದು ಎಂದು ಎಚ್ಚರಿಸಿದರು.

ಹೊಸ ವಿಧಾನಕ್ಕೆ ಉದ್ಯಮದಿಂದ ಕೆಲವರ ಬೆಂಬಲ ಪಡೆದಿದ್ದರೂ ಕೂಡ ಜಾರಿ ವಿಧಾನದ ಕುರಿತು ಅನೇಕ ನೈತಿಕ ಪ್ರಶ್ನೆಗಳನ್ನು ಎದುರಿಸುವಂತಾಯಿತು.

ಖಾಸಗಿ ಘೇಂಡಾಮೃಗಗಳ ಮಾಲೀಕರ ಸಂಘದ ಅಧ್ಯಕ್ಷ ಪೆಲ್ಹಾಮ್ ಜೋನ್ಸ್ ಮಾತನಾಡಿ, 'ಕಳ್ಳಬೇಟೆಗಾರರನ್ನು ಅತ್ಯಂತ ಪರಿಣಾಮಕಾರಿಯಾಗಿ ಪತ್ತೆಹಚ್ಚಲು ಹೊಸ ವಿಧಾನ ಯಶಸ್ವಿಯಾಗುವ ಅನುಮಾನವಿದೆ' ಎಂದು ತಿಳಿಸಿದ್ದಾರೆ.

'ಕೊಂಬುಗಳನ್ನು ದೇಶದಿಂದ ಮತ್ತೊಂದು ದೇಶಕ್ಕೆ ಕೊಂಡೊಯ್ಯಲು ಬೇಟೆಗಾರರು ಅನ್ಯಮಾರ್ಗ ಅನುಸರಿಸುವ ಸಾಧ್ಯತೆಯಿದೆ. ಈಗಿನಂತೆ ಸಾಂಪ್ರದಾಯಿಕ ಗಡಿದಾಟುವ ವಿಧಾನ ಅನುಸರಿಸಲಾರರು. ಈಗಿನಂತೆ ಕೊಂಡೊಯ್ದರೆ, ಹೆಚ್ಚಿನ ಅಪಾಯ ತಂದುಕೊಳ್ಳಬೇಕಾದ ಅರಿವು ಹೊಂದಿರುತ್ತಾರೆ' ಎಂದು ಎಚ್ಚರಿಸಿದ್ದಾರೆ.

'ಕೊಂಬುಗಳಿಗೆ ಹಾಕುವ ವಿಕಿರಣಶೀಲ ಅತ್ಯಂತ ಸಣ್ಣ ಪ್ರಮಾಣದ್ದಾಗಿದ್ದು, ಪ್ರಾಣಿಗಳ ಮೇಲೆ ಸಂಭಾವ್ಯ ಋಣಾತ್ಮಕ ಪರಿಣಾಮವನ್ನು ಸಾಕಷ್ಟು ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಡೀನ್ ನಿತ್ಯಾ ಚೆಟ್ಟಿ ತಿಳಿಸಿದ್ದಾರೆ.



‘ಇನ್ನೂ 4 ದಿನ ಭಾರಿ ಮಳೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇನ್ನು ನಾಲ್ಕು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ‘ರೆಡ್ ಅಲರ್ಟ್’ ಘೋಷಿಸಿದೆ. ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ ಬೆಳಗಾವಿ, ಹಾವೇರಿ, ಧಾರವಾಡ, ಹಾಸನ, ಮೈಸೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಈ ಜಿಲ್ಲೆಗಳಲ್ಲಿ ಗಂಟೆಗೆ 45-50 ಕಿ.ಮೀ ವೇಗದಲ್ಲಿ ನಿರಂತರ ಗಾಳಿ ಬೀಸಲಿದೆ. ರಾಯಚೂರು, ಯಾದಗಿರಿ, ಬೀದರ್, ಗದಗ, ಕಲಬುರಗಿ, ಚಿಕ್ಕಬಳ್ಳಾಪುರ, ಬೆಂಗಳೂರು, ದಾವಣಗೆರೆ, ಕೋಲಾರ, ಮಂಡ್ಯ ಜಿಲ್ಲೆಯಲ್ಲೂ ಮಳೆಯಾಗುವ ಸಾಧ್ಯತೆಗಳಿವೆ- ಎಂದು ಇಲಾಖೆಯೂ ತಿಳಿಸಿದೆ.

ಗೋಡೆ ಕುಸಿತ ವೃದ್ಧೆ ಸಾವು

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಆರವ ಗ್ರಾಮದ ತೋರ್ಲೆಬಾಗದಲ್ಲಿ ಸತತ ಮಳೆ ಪರಿಣಾಮ ಸಂಪೂರ್ಣ ಒದ್ದೆಯಾಗಿದ್ದ ಮಣ್ಣಿನ ಗೋಡೆ ಕುಸಿದು ರುಕ್ಮಾ ಯಾನೆ ಗುಲಾಬಿ ಮಾಂಜ್ರೇಕರ (70) ಎಂಬುವರು ಮೃತಪಟ್ಟಿದ್ದಾರೆ.

‘ಒಬ್ಬಂಟಿ ವಾಸವಿದ್ದ ರುಕ್ಮಾ ಅವರು ತಮ್ಮ ಮನೆಯ ಎದುರಿನ ಅಂಗಡಿಯ ಕಟ್ಟಡದ ಬಳಿ ತೆರಳಿದ್ದ ವೇಳೆ ಗೋಡೆ ಕುಸಿದು, ಮಣ್ಣಿನಡಿ ಸಿಲುಕಿ ಮೃತಪಟ್ಟಿದ್ದಾರೆ. ಗುರುವಾರ ರಾತ್ರಿ ದುರ್ಘಟನೆ ನಡೆದಿದ್ದು, ಶುಕ್ರವಾರ ನಸುಕಿನಲ್ಲಿ ಗೊತ್ತಾಗಿದೆ’ ಎಂದು ಚಿತ್ತಾಕುಲ ಠಾಣೆ ಪೊಲೀಸರು ತಿಳಿಸಿದ್ದಾರೆ.





ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತ ಮಳೆಯಿಂದಾಗಿ ವೈಭವ ಪಡೆದುಕೊಳ್ಳುತ್ತಿದೆ (ಎಡಚಿತ್ರ) ಕೊಡಗಿನಲ್ಲಿ ಬತ್ತುವ ಹಂತ ತಲುಪಿದ್ದ ಲಕ್ಷ್ಮಣತೀರ್ಥ ನದಿ ತುಂಬಿ ಹರಿಯುತ್ತಿರುವ ದೃಶ್ಯ ಗೋಣಿಕೊಪ್ಪಲಿನ ಬಳಿ ಕಂಡು ಬಂದಿದ್ದು ಹೀಗೆ– ಪ್ರಜಾವಾಣಿ ಚಿತ್ರ

ಹಾರಂಗಿ: ಒಳಹರಿವು ಹೆಚ್ಚಳ

ತುಂಬಿ ಹರಿದ ಭದ್ರಾ, ಹೇಮಾವತಿ, ತುಂಗಾ • ಮಡಿಕೇರಿಯಲ್ಲಿ ಕಣ್ಣಾಮುಚ್ಚಾಲೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಚಿಕ್ಕಮಗಳೂರು: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಹೋಬಳಿ ಹೊರತುಪಡಿಸಿ ಉಳಿದೆಲ್ಲ ಕಡೆ ಶುಕ್ರವಾರ ಮಳೆ ನಿಯಂತ್ರಣಕ್ಕೆಬಂದಿದೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಗುರುವಾರ ರಾತ್ರಿ ಧಾರಾಕಾರ ಮಳೆ ಸುರಿದಿದೆ.

ಕುಶಾಲನಗರದಲ್ಲಿ ಬಿಸಿಲಿನ ವಾತಾವರಣವಿದ್ದರೆ, ಮಡಿಕೇರಿಯಲ್ಲಿ ಬಿಸಿಲು, ಮಳೆಯ ಕಣ್ಣಾಮುಚ್ಚಾಲೆ ನಡೆಯಿತು. ಒಂದಷ್ಟು ಹೊತ್ತು ಬಿಸಿಲು, ಒಂದಷ್ಟು ಹೊತ್ತು ಸಾಧಾರಣ ಮಳೆ ದಿನವಿಡೀ ಸುರಿಯಿತು.

ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 2,562 ಕ್ಯುಸೆಕ್‌ಗೆ ಏರಿಕೆಯಾಗಿದೆ. ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಶಾಂತಳ್ಳಿ ಹೋಬಳಿಯಲ್ಲಿ 6 ಸೆಂ.ಮೀ ಹಾಗೂ ಭಾಗಮಂಡಲದಲ್ಲಿ 3 ಸೆಂ.ಮೀ ಮಳೆ ಸುರಿದಿದೆ. ಇನ್ನುಳಿದೆಡೆ ಸಾಧಾರಣ ಮಳೆಯಾಗಿದೆ.

ವರ್ಷಂಪ್ರತಿ ಪ್ರವಾಹ ಉಂಟಾಗುವ ಕುಶಾಲನಗರ ತಾಲ್ಲೂಕು ವ್ಯಾಪ್ತಿಯ ನೆಲ್ಯಹುದಿಕೇರಿಯ ಬೆಟ್ಟದಕಾಡು, ಕುಂಬಾರಗುಂಡಿ ಹಾಗೂ ಬರಡಿ ಭಾಗದಲ್ಲಿ ನದಿ ತೀರದಲ್ಲಿ ವಾಸಿಸುವ ಜನರಿಗೆ ಮುಂಜಾಗ್ರತಾ ಕ್ರಮವಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕಂದಾಯ ಇಲಾಖೆ ನೋಟಿಸ್‌ಗಳನ್ನು ನೀಡುತ್ತಿದೆ.

ಮಡಿಕೇರಿ ಸಮೀಪ ಅಬ್ಬಿಫಾಲ್ಸ್‌ಗೆ ತೆರಳುವ ರಸ್ತೆಯಲ್ಲಿ ಈಚೆಗಷ್ಟೇ ಖಾಸಗಿ ಮಾಲೀಕತ್ವದಲ್ಲಿ ನಿರ್ಮಾಣಗೊಂಡಿದ್ದ ಗಾಜಿನ ಸೇತುವೆಯ ಬುಡದಲ್ಲಿ ಮಣ್ಣು ಕುಸಿತವಾಗಿದೆ. ಕೂಡಲೇ ಪ್ರಾಕೃತಿಕ ವಿಕೋಪ ನಿರ್ವಹಣೆ ಸಂಬಂಧ ಸಭೆ ಕರೆದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲೆಯಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ‘ಗ್ಲಾಸ್ ಬ್ರಿಡ್ಜ್’ಗಳನ್ನು ಸ್ಥಗಿತಗೊಳಿಸುವಂತೆ ತಹಶೀಲ್ದಾರರಿಗೆ ಸೂಚಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಕಳಸ, ಮೂಡಿಗೆರೆ, ಕೊಪ್ಪ, ಶೃಂಗೇರಿ ಸುತ್ತಮುತ್ತ ರಾತ್ರಿ ನಿರಂತರವಾಗಿ ಮಳೆ ಸುರಿಯಿತು. ಶುಕ್ರವಾರ ಬೆಳಿಗ್ಗೆಯಿಂದಲೂ ಆಗೊಮ್ಮೆ ಈಗೊಮ್ಮೆ ಮಳೆಯಾಗಿದ್ದು, ಕೊಟ್ಟಿಗೆಹಾರದಲ್ಲಿ ನಿರಂತರವಾಗಿ ಜಡಿ ಮಳೆ ಸುರಿಯಿತು.

ರಾತ್ರಿ ಮತ್ತು ಬೆಳಗಿನ ಜಾವ ಜಾಸ್ತಿ ಮಳೆ ಇದ್ದುದರಿಂದ ಮೂಡಿಗೆರೆ ಮತ್ತು ಕಳಸ ತಾಲ್ಲೂಕಿನ ಶಾಲೆಗಳಿಗೆ ರಜೆ ನೀಡಲಾಗಿತ್ತು. ಭದ್ರಾ, ಹೇಮಾವತಿ, ತುಂಗಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶುಕ್ರವಾರ ಮಳೆ ಬಿಡುವು ನೀಡಿತ್ತು.

ಮಂಗಳೂರು ತಾಲ್ಲೂಕಿನ ಉಳಾಯಿಬೆಟ್ಟು ಗ್ರಾಮದ ಮೂಡುಜೆಪ್ಪು ಪ್ರದೇಶದಲ್ಲಿ ಗುಡ್ಡ ಕುಸಿದ ಪರಿಣಾಮ ರಸ್ತೆಸಂಪರ್ಕ ಕಡಿತಗೊಂಡಿತ್ತು. ಬೆಳ್ತಂಗಡಿ ತಾಲ್ಲೂಕು ಬಂದಾರು ಗ್ರಾಮದಲ್ಲಿ ಗುಡ್ಡ ಕುಸಿದು ಮನೆಗೆ ಹಾನಿಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	91.00	13,437	478
ಹಾರಂಗಿ	2,859	2,835.35	2,562	200
ಕಬಿನಿ	2284.00	2,272.51	20,133	1,000
ಹೇಮಾವತಿ	2,922	2,886.42	7,695	250
ಲಿಂಗನಮಕ್ಕಿ	1,819	1,748.70;	12,249	2,445.14
ಸೂಪಾ (ಮೀ)	564	525.78	2.905.82	1,847.19
ಮಾಣಿ	594	572.00	1,391	-
ತುಂಗಭದ್ರಾ	1,633	1,581.33	950	297
ಮಲಪ್ರಭಾ	2079.5	2,041.95	00	194
ಘಟಪ್ರಭಾ	2175	2,098.08	2,448	100
ಭದ್ರಾ	186	122.3	8,665	345
ಆಲಮಟ್ಟಿ (ಮೀ)	519.6	510.77	6,633	430
ನಾರಾಯಣಪುರ (ಮೀ)	492.25	487.10	206.37	95.37

* ನೆಲಮಟ್ಟದಿಂದ

ಕೆಆರ್‌ಎಸ್: 91 ಅಡಿ ದಾಟಿದ ನೀರಿನ ಮಟ್ಟ



ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಶುಕ್ರವಾರ 91 ಅಡಿ ನೀರು ಸಂಗ್ರಹವಾಗಿತ್ತು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆ.ಆರ್.ಎಸ್ ಅಣೆಕಟ್ಟೆಗೆ ಹರಿದು ಬರುವ ನೀರಿನ ಪ್ರಮಾಣ ಎರಡು ದಿನದಿಂದ ಹೆಚ್ಚಾಗಿದೆ. ನೀರಿನ ಮಟ್ಟ ಶುಕ್ರವಾರ 91 ಅಡಿ (16.118 ಟಿ.ಎಂ.ಸಿ) ದಾಟಿದೆ. ಜಲಾಶಯದ ಗರಿಷ್ಠ ಮಟ್ಟ 124.80 ಅಡಿ.

ಜಲಾಶಯಕ್ಕೆ 13,437 ಕ್ಯುಸೆಕ್ ನೀರು ಒಳಹರಿವು ಇದ್ದು, ಗುರುವಾರ 3,826 ಕ್ಯುಸೆಕ್ ಇದ್ದ ಒಳ ಹರಿವಿನ ಪ್ರಮಾಣ 24 ಗಂಟೆಗಳಲ್ಲಿ 10 ಸಾವಿರ ಕ್ಯುಸೆಕ್ ಏರಿದೆ. ಕೊಡಗು, ವಯನಾಡು ಕಡೆ ಸತತ ಮಳೆಯಿಂದಾಗಿ ಒಳ ಹರಿವು ಏರುತ್ತಿದೆ. ಹೊರ ಹರಿವಿನ ಪ್ರಮಾಣ 478 ಕ್ಯುಸೆಕ್ ಇದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 77.9 ಅಡಿ ನೀರಿತ್ತು. 760 ಕ್ಯುಸೆಕ್ ಒಳ ಹರಿವು ಮತ್ತು 308 ಕ್ಯುಸೆಕ್ ಹೊರಹರಿವು ದಾಖಲಾಗಿತ್ತು. ಜಲಾಶಯದಲ್ಲಿ ಸದ್ಯ 16 ಟಿ.ಎಂ.ಸಿ ಅಡಿ ನೀರಿದೆ. ಈ ಪೈಕಿ 8 ಟಿ.ಎಂ.ಸಿ ನೀರನ್ನು ‘ಡೆಡ್ ಸ್ಟೋರೇಜ್’ ಎಂದು ಪರಿಗಣಿಸಲಿದ್ದು, ಉಳಿದ 8 ಟಿಎಂಸಿ ನೀರನ್ನು ಕುಡಿಯಲು, ಕೃಷಿಗೆ ಬಳಸಬಹುದು.

ಸೋರಿಕೆ ತಡೆಗೆ ಕ್ರಮ: ‘ಜಲಾಶಯದ 80 ಅಡಿ ಮಟ್ಟದ 16 ಗೇಟ್‌ಗಳಿಗೆ ಗುರುವಾರದಿಂದ ಗ್ರೀಸಿಂಗ್ ಕೆಲಸ ನಡೆದಿದೆ. ಸೋರಿಕೆ ತಡೆಗೆ ಅಣೆಕಟ್ಟೆಯ 136 ಗೇಟ್‌ಗಳನ್ನು₹69.52 ಕೋಟಿ ವೆಚ್ಚದಲ್ಲಿ ಬದಲಿಸಲಾಗಿದೆ’ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹೇಳಿದ್ದಾರೆ.

‘ಜಲಾಶಯದಿಂದ ಮುಂಗಾರು ಹಂಗಾಮಿನ ಕೃಷಿಗೆ ನೀರು ಹರಿಸುವ ಕುರಿತು ಕಾವೇರಿ ನೀರಾವರಿ ಸಲಹಾ ಸಮಿತಿ ಇನ್ನೂ ತೀರ್ಮಾನಿಸಿಲ್ಲ’ ಎಂದು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಜಯಂತ್ ತಿಳಿಸಿದ್ದಾರೆ.

ಕೊಡಗು: ಭಾರಿ ವಾಹನಗಳ ಸಂಚಾರ ನಿಷೇಧ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮುಂಗಾರು ಮಳೆ ಆರಂಭವಾಗಿರುವುದರಿಂದ, ರಸ್ತೆ ಕುಸಿತ ತಡೆಯಲು ಅಧಿಕ ಭಾರ ತುಂಬಿದ ಭಾರಿ ಸರಕು ಸಾಗಣೆ ವಾಹನಗಳ ಸಂಚಾರವನ್ನು ಕೊಡಗು ಜಿಲ್ಲೆಯಲ್ಲಿ ಜುಲೈ 1ರಿಂದ 30ರವರೆಗೆ ನಿಷೇಧಿಸಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಎಲ್ಲ ಬಗೆಯ ಮರಳು ಮತ್ತು ಮರದ ದಿಮ್ಮಿಗಳನ್ನು ಸಾಗಿಸುವ, 18,500 ಕೆ.ಜಿಗಿಂತ ಹೆಚ್ಚಿನ ಸರಕು ಸಾಗಿಸುವ ವಾಹನಗಳು, ಭಾರಿ ವಾಹನಗಳಾದ ಬುಲೆಟ್ ಟ್ಯಾಂಕರ್ಸ್, ಶಿಪ್ ಕಾರ್ಗೋ ಕಂಟೇನರ್, ಆರ್ಟ್‌ಕ್ಯುಲೇಟೆಡ್ ವಾಹನಗಳ ಸಂಚಾರವನ್ನು ಜಿಲ್ಲೆಯಾದ್ಯಂತ ನಿಷೇಧಿಸಲಾಗಿದೆ.

ಅಡುಗೆ ಅನಿಲ, ಇಂಧನ, ಹಾಲು ಪೂರೈಕೆ ವಾಹನಗಳು, ಸರ್ಕಾರಿ ಕೆಲಸದ ವಾಹನಗಳು, ಶಾಲಾ ಕಾಲೇಜು ಮತ್ತು ಸಾರ್ವಜನಿಕ ಪ್ರಯಾಣದ ವಾಹನಗಳಷ್ಟೇ ಸಂಚರಿಸಬಹುದು.

ರಾಜ್ಯ ಚುನಾವಣಾ ಆಯುಕ್ತರಾಗಿ ಜಿ.ಎಸ್. ಸಂಗ್ರೇಶಿ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ನೂತನ ಅಧ್ಯಕ್ಷರನ್ನಾಗಿ ಗದಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ (ಜಿ.ಎಸ್. ಸಂಗ್ರೇಶಿ) ಅವರನ್ನು ನೇಮಿಸಿ ಗುರುವಾರ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹಿಂಪಡೆದಿದ್ದು, ರಾಜ್ಯ ಚುನಾವಣಾ ಆಯುಕ್ತರನ್ನಾಗಿ ಅವರನ್ನು ನೇಮಿಸಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.



ಜಿ.ಎಸ್ ಸಂಗ್ರೇಶಿ

ಮೈಸೂರು ಜಿಲ್ಲಾ ಮತ್ತು ಸೆಷನ್ಸ್ ಪ್ರಧಾನ ನ್ಯಾಯಾಧೀಶರಾಗಿದ್ದ ಜಿ. ಎಸ್ ಸಂಗ್ರೇಶಿ ಅವರು ನಿಯೋಜನೆ ಮೇರೆಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಗುರುವಾರ ಹೊರಡಿಸಲಾಗಿತ್ತು. ಒಂದೇ ದಿನಕ್ಕೆ ಆ ಆದೇಶವನ್ನು ಹಿಂಪಡೆಯಲಾಗಿದೆ.

ರಾಜ್ಯ ಸರ್ಕಾರದ ಶಿಫಾರಸಿನಂತೆ ಚುನಾವಣಾ ಆಯುಕ್ತರನ್ನಾಗಿ ಸಂಗ್ರೇಶಿ ಅವರನ್ನು ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಅವರ ಅಧಿಕಾರದ ಅವಧಿ ಮುಂದಿನ ಐದು ವರ್ಷಗಳವರೆಗೆ ಇರುತ್ತದೆ.

ಎಮ್ಮೆಹಟ್ಟಿಯಲ್ಲಿ ಮಡುಗಟ್ಟಿದ ಮೌನ

ಮನೆ ದೇವರ ದರ್ಶನಕ್ಕೆ ಹೋದವರು ಮರಳುವಾಗ ಜವರಾಯನ ಕರೆಗೆ ಓಗೊಟ್ಟರು

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ಹಾವೇರಿ ಬಳಿ ಸಂಭವಿಸಿದ ಅಪಘಾತದಲ್ಲಿತಮ್ಮೂರಿನ 13 ಜನ ಮೃತಪಟ್ಟ ಸುದ್ದಿ ತಿಳಿದು ಭದ್ರಾವತಿ ತಾಲ್ಲೂಕಿನ ಎಮ್ಮೆಹಟ್ಟಿ ಗ್ರಾಮದಲ್ಲಿ ಮೌನ ಆವರಿಸಿತ್ತು.

ಗ್ರಾಮದ ನಿವಾಸಿ, ನೀರಾವರಿ ಇಲಾಖೆಯಲ್ಲಿ ನೀರಗಂಟಿಯಾಗಿರುವ ನಾಗೇಶರಾವ್ ಅವರ ಪುತ್ರ ಆದರ್ಶ ಟೆಂಪೊ ಟ್ರಾವೆಲರ್ (ಟಿ.ಟಿ) ವಾಹನ ಖರೀದಿಸಿದ್ದು, ಕುಟುಂಬದ ಸದಸ್ಯರು ಹಾಗೂ ಸಂಬಂಧಿಕರು ಸೇರಿ 17 ಜನರನ್ನು ಮನೆ ದೇವರಾದ ಬೆಳಗಾವಿ ಜಿಲ್ಲೆ ಚಿಂಚಲಿಯ ಮಾಯಮ್ಮನ ದರ್ಶನಕ್ಕೆ ಕರೆದೊಯ್ದಿದ್ದರು.

ಶುಕ್ರವಾರ ಮನೆ ದೇವರಿಗೆ ಪಡಲಿಗೆ ತುಂಬಿಸಿ, ಎಡೆ ಮಾಡಿ, ಸಂಬಂಧಿಕರಿಗೆ ಹೋಳಿಗೆ ಊಟ ಹಾಕಿಸಿ ದೇವಿಯನ್ನು ಬೀಳ್ಕೊಡುವ ಧಾವಂತದಲ್ಲಿ ಊರಿಗೆ ಮರಳುತ್ತಿದ್ದವರು ದುರಂತ ಅಂತ್ಯ ಕಂಡಿದ್ದಾರೆ. ನಸುಕಿನಲ್ಲಿ ಬಂದ ಸುದ್ದಿ ಊರನ್ನೇ ದುಃಖದ ಮಡುವಾಗಿಸಿತ್ತು.

ಸೆಕೆಂಡ್ ಹ್ಯಾಂಡ್ ವಾಹನ: ನಾಗೇಶರಾವ್ ಪತ್ನಿ ವಿಶಾಲಾಕ್ಷಿ ಆಶಾ ಕಾರ್ಯಕರ್ತೆ. ಪುತ್ರ ಆದರ್ಶ ಚಾಲಕ. ಪುತ್ರಿ ಅರ್ಪಿತಾ ಅಂಗವಿಕಲೆ. ಊರಿನಲ್ಲಿ 12 ಗುಂಟೆ ಜಾಗ, ಮನೆ ಬಿಟ್ಟರೆ ಕುಟುಂಬಕ್ಕೆ ಬೇರೆ ಆಸ್ತಿ ಇಲ್ಲ. ಪುತ್ರ 20 ದಿನದ ಹಿಂದೆ ಸೆಕೆಂಡ್ ಹ್ಯಾಂಡ್ ಟಿ.ಟಿ ಖರೀದಿಸಿದ್ದ. ಆ ಸಂಭ್ರಮಕ್ಕೆ ಕುಟುಂಬದವರು ದೇವರ ದರ್ಶನಕ್ಕೆ ತೆರಳಿದ್ದರು.

‘ಅಳಿಯ ಅನುಭವಿ ಚಾಲಕ. ಏಕೆ ಅವಘಡ ಸಂಭವಿಸಿತೋ ಗೊತ್ತಾಗುತ್ತಿಲ್ಲ. ನಮ್ಮನ್ನೂ ಕರೆದಿದ್ದರು. ಪತ್ನಿಗೆ ಹುಷಾರಿಲ್ಲದ್ದರಿಂದ ನಾನು ಹೋಗಲಿಲ್ಲ. ಅಮ್ಮನನ್ನು (ಸುಭದ್ರಮ್ಮ) ಕಳಿಸಿದ್ದೆವು. ಆಕೆಯೂ ತೀರಿಕೊಂಡಿದ್ದಾಳೆ’ ಎಂದು ಆದರ್ಶನ ಸೋದರ ಮಾವ ಸುರೇಶ ಅಳುತ್ತಾ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಮನೆಯಲ್ಲಿ ಅಕ್ಕ, ಮಾವ (ವಿಶಾಲಾಕ್ಷಿ, ನಾಗೇಶರಾವ್) ಯಾರೂ ಇಲ್ಲ. ಒಳಗೆ ಹೋಗಲು ಮನಸ್ಸು ಬರುತ್ತಿಲ್ಲ. ಸೊಸೆ ಅರ್ಪಿತಾ ಅಂಗವಿಕಲೆ. ಆಕೆಗೆ ಯಾರು ದಿಕ್ಕು?’ ಎಂದು ಸುರೇಶ ಬಿಕ್ಕಳಿಸಿದರು. ‘ಊರಲ್ಲಿ ಯಾರೇ ಸತ್ತರೂ, ಕಾಯಿಲೆ-ಕಸಾಲೆಗೆ, ಹೆರಿಗೆ-ಬಾಣಂತನಕ್ಕೆ ಅತ್ತೆ (ವಿಶಾಲಮ್ಮ) ನೆರವಿಗೆ ಬರುತ್ತಿದ್ದರು. ಅವರೇ ಇಲ್ಲ ಅನ್ನೋದನ್ನು ನಂಬಿಲಾಗುತ್ತಿಲ್ಲ’ ಎಂದು ಅವರ ಅಣ್ಣನ ಮಗ ಶಂಕರ ನೊಂದು ನುಡಿದರು.

‘ಮನೆ ದೇವರಿಗೆ ಹೋಗಿಬಂದವರು ದೇವಿಯನ್ನು ವಾಪಸು ಕಳುಹಿಸುವ ಸಂಪ್ರದಾಯ ಊರಲ್ಲಿದೆ. ಶುಕ್ರವಾರ ದೇವಿಯ ದಿನ. ಬಹುಶಃ ಅದೇ ಕಾರಣಕ್ಕೆ ರಾತ್ರಿಯೇ ವಾಪಸು ಹೊರಟಿದ್ದಾರೆ’ ಎಂದು ಎಮ್ಮೆಹಟ್ಟಿಯ ದೇವಸ್ಥಾನದ ಪೂಜಾರಿ ನಾಗರಾಜ ಹೇಳಿದರು.

ಸಮೀಪದ ಡಿ.ಬಿ.ಹಳ್ಳಿ ಕಾಲೊನಿ ನಿವಾಸಿ ರಂಗಸ್ವಾಮಿ ಅವರ ಪತ್ನಿ ಮಂಜುಳಾಬಾಯಿ, ಪುತ್ರ ಅರುಣ್ ಕುಮಾರ್, ಮಗಳು ಅಂಜಲಿ ಆಕೆಯ ಮಕ್ಕಳಾದ ಆರ್ಯ, ನಂದನ, ನಾಗೇಶ ರಾವ್ ಅವರ ತಮ್ಮ, ಪರಶುರಾಮ್–ರೂಪಾಬಾಯಿ ದಂಪತಿ ಮೃತಪಟ್ಟಿದ್ದಾರೆ. ಅರುಣ್ ಪತ್ನಿ 3 ತಿಂಗಳ ಹಿಂದಷ್ಟೇ ಗಂಡು ಶಿಶುವಿಗೆ ಜನ್ಮನೀಡಿದ್ದಾರೆ.

ಶಾಲೆಗೆ ರಜೆ ಘೋಷಣೆ: ದುರಂತ ಸುದ್ದಿ ಹಿನ್ನೆಲೆಯಲ್ಲಿ ಗ್ರಾಮದ ಸರ್ಕಾರಿ ಶಾಲೆಗೆ ರಜೆ ಘೋಷಿಸಲಾಗಿತ್ತು. ಸಂಜೆ ಶಾಲೆ ಮೈದಾನದಲ್ಲಿ ಶವಗಳನ್ನು ಇಡಲಾಗಿತ್ತು. ಅಲ್ಲಿಂದಲೇ ಸ್ಮಶಾನಕ್ಕೆ ಕೊಂಡೊಯ್ದು ಸಾಮೂಹಿಕವಾಗಿ ಅಂತ್ಯಕ್ರಿಯೆ ನಡೆಸಲಾಯಿತು.





ಎಮ್ಮೆಹಟ್ಟಿಯ ನಾಗೇಶ್‌ರಾವ್ ಮನೆ ಎದುರು ಅಳಿಯ ಸುರೇಶ್ ಅಳುತ್ತಾ ಕುಳಿತಿದ್ದರು (ಎಡಚಿತ್ರ) ಮೃತ ಮಾನಸಾ

ಮೃತ ಮಾನಸಾ ಅಂಧ ಕ್ರೀಡಾಪಟು

ಅಪಘಾತದಲ್ಲಿ ಮೃತಪಟ್ಟಿರುವ ಎಮ್ಮೆಹಟ್ಟಿಯ ನಿವಾಸಿ ಎಸ್. ಮಾನಸಾ ರಾಜ್ಯ ಅಂಧರ ಫುಟ್ಬಾಲ್ ತಂಡದ ಆಟಗಾರ್ತಿ. ಗ್ರಾಮದ ಶರಣಪ್ಪ ಹಾಗೂ ಭಾಗ್ಯ ದಂಪತಿ ಪುತ್ರಿ. ಅಪಘಾತದಲ್ಲಿ ಭಾಗ್ಯ ಕೂಡಾ ಮೃತಪಟ್ಟಿದ್ದಾರೆ.

ಮಾನಸಾ ಹುಟ್ಟಿದಾಗಲೇ ದೃಷ್ಟಿ ಕಳೆದುಕೊಂಡಿದ್ದರು. ಬೆಂಗಳೂರಿನಲ್ಲಿ ಇದ್ದು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುತ್ತಿದ್ದರು.

‘ಆಕೆಗೆ ಐಎಎಸ್ ಅಧಿಕಾರಿ ಆಗುವ ಕನಸಿತ್ತು. ಅಂಧರ ಫುಟ್ಬಾಲ್ ತಂಡದ ನಾಯಕಿ ಆಗಿದ್ದಳು. 2022ರಲ್ಲಿ ಕೊಚ್ಚಿಯಲ್ಲಿ ಜಪಾನ್ ವಿರುದ್ಧ ನಡೆದಿದ್ದ ಪಂದ್ಯಲ್ಲಿ ಭಾರತ ತಂಡದಲ್ಲಿ ಆಡಿದ್ದಳು. ರಜೆಗೆ ಊರಿಗೆ ಬಂದಿದ್ದಳು. ಅಮ್ಮನ ಜೊತೆ ದೇವರ ದರ್ಶನಕ್ಕೆ ಹೋಗಿದ್ದಳು. ವಾಪಸು ಬರಲಿಲ್ಲ’ ಎಂದು ಅಕ್ಕ ಮಹಾಲಕ್ಷ್ಮಿ ನೋವು ಹಂಚಿಕೊಂಡರು.

ಭೀಕರ ಅಪಘಾತ: 13 ಮಂದಿ ಸಾವು

ಒಂದನೇ ಪುಟದಿಂದ...

‘ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಎಮ್ಮೆಹಟ್ಟಿ ಗ್ರಾಮದ ಚಾಲಕ ಆದರ್ಶ, 20 ದಿನದ ಹಿಂದೆ ಹಳೆಯ ಟಿಟಿ ಖರೀದಿಸಿದ್ದರು. ವಾಹನದ ದಾಖಲೆಯೂ ಬದಲಾಗಿರಲಿಲ್ಲ. ಮಹಾರಾಷ್ಟ್ರ, ಉತ್ತರ ಕರ್ನಾಟಕದ ದೇವಸ್ಥಾನಗಳಿಗೆ ಹೋಗಲು ತಂದೆ, ತಾಯಿ, ತಂಗಿ, ಸಂಬಂಧಿಕರನ್ನು ಜೂನ್ 24ರಂದು ಕರೆ ತಂದಿದ್ದರು’ ಎಂದು ಪೊಲೀಸರು ಹೇಳಿದರು.

‘ಮಹಾರಾಷ್ಟ್ರದ ದೇವಾಲಯ, ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಚಿಂಚಲಿ ಮಾಯಕ್ಕ ದೇವಸ್ಥಾನ, ಸವದತ್ತಿ ಯಲ್ಲಮ್ಮದೇವಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದೇವರ ದರ್ಶನ ಮುಗಿಸಿ ಶುಕ್ರವಾರ ತಡರಾತ್ರಿ ಹಾವೇರಿ ಮಾರ್ಗವಾಗಿ ಎಮ್ಮೆಹಟ್ಟಿಗೆ ಮರಳುತ್ತಿದ್ದರು. ಟಿಟಿ ವಾಹನದಲ್ಲಿ 17 ಜನರಿದ್ದರು’ ಎಂದು ವಿವರಿಸಿದರು.

‘ನಿಪ್ಪಾಣಿ ಕಾರ್ಖಾನೆಯಿಂದ ಸಕ್ಕರೆ ಚೀಲಗಳನ್ನು ಲಾರಿಯಲ್ಲಿ ಚಾಲಕ ರಮೇಶ್, ಚಿಕ್ಕಮಗಳೂರಿನತ್ತ ಸಾಗಿಸುತ್ತಿದ್ದರು. ನಸುಕಿನ 2.28 ಗಂಟೆ ಸುಮಾರಿಗೆ ಬಂಕಾಪುರ ಟೋಲ್‌ಗೇಟ್ ದಾಟಿದ್ದರು. ಹಿಂದೆಯೇ ಟಿಟಿ ವಾಹನ ನಸುಕಿನ 3.14 ಗಂಟೆಗೆ ದಾಟಿತ್ತು’.

‘ಗುಂಡೇನಹಳ್ಳಿ ಕ್ರಾಸ್ ಬಳಿ ಚಾಲಕ ರಮೇಶ್, ಮೂತ್ರ ವಿಸರ್ಜನೆಗೆಂದು ಹೆದ್ದಾರಿಯ ಒಂದು ಬದಿ ಲಾರಿ ನಿಲ್ಲಿಸಿದ್ದರು. ಲಾರಿಯಿಂದ ಇಳಿದು ರಸ್ತೆ ಪಕ್ಕಕ್ಕೆ ಹೋಗಿದ್ದರು. ಕ್ಲೀನರ್ ಪ್ರಜ್ವಲ್ ಲಾರಿಯಲ್ಲೇ ಮಲಗಿದ್ದರು’ ಎಂದರು.

‘ಹಿಂದೆಯೇ ಗಂಟೆಗೆ 80–100 ಕಿ.ಮೀ ವೇಗದಲ್ಲಿ ಟಿ.ಟಿ ಚಾಲನೆ ಮಾಡುತ್ತ ಬರುತ್ತಿದ್ದ ಆದರ್ಶ ನಿಂತಿದ್ದ ಲಾರಿಯನ್ನು ಗಮನಿಸಲಿಲ್ಲ. ಲಾರಿಯ ಹಿಂಬದಿಗೆ ರಭಸದಲ್ಲಿ ಡಿಕ್ಕಿ ಹೊಡೆಯಿತು. ಟಿಟಿಯಲ್ಲಿದ್ದ 11 ಮಂದಿ ಸ್ಥಳದಲ್ಲೇ ಮೃತಪಟ್ಟರು. ತೀವ್ರ ಗಾಯಗೊಂಡ 6 ಜನರನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಲಾಯಿತು. ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ಟಿಟಿ ಚಾಲಕನೂ ಮೃತಪಟ್ಟಿದ್ದು ಆತನ ವಿರುದ್ಧವೂ ನಿರ್ಲಕ್ಷ್ಯದಿಂದ ಚಾಲನೆ ಕುರಿತು ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹ ಹಸ್ತಾಂತರ: ಹಾವೇರಿ ಜಿಲ್ಲಾಸ್ಪತ್ರೆಯಲ್ಲೇ 13 ಜನರ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್, ಜಿಲ್ಲಾಧಿಕಾರಿ ರಘುನಂದನಮೂರ್ತಿ ಸ್ಥಳಕ್ಕೆ ಹಾಗೂ ಆಸ್ಪತ್ರೆಗೆ ಭೇಟಿ ನೀಡಿದರು. ಕುಟುಂಬದವರಿಗೆ ಸಾಂತ್ವನ ಹೇಳಿದರು.



ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಲಾರಿಯ ಹಿಂಬದಿಗೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದಿದೆ –ಪ್ರಜಾವಾಣಿ ಚಿತ್ರ

ಹೆಚ್ಚಿನ ಪರಿಹಾರಕ್ಕೆ ಒತ್ತಾಯ

ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರ ಆಪ್ತರು ಮತ್ತು ಕಾಂಗ್ರೆಸ್ ಮುಖಂಡರು, ಸಚಿವರ ಪರವಾಗಿ ಮೃತರ ಕುಟುಂಬದವರಿಗೆ ತಲಾ ₹50 ಸಾವಿರ ಪರಿಹಾರ ನೀಡಿದರು.

‘ಲಾರಿ ಚಾಲಕನ ನಿರ್ಲಕ್ಷ್ಯದಿಂದ ಕುಟುಂಬವೇ ಇಲ್ಲದಂತಾಗಿದೆ. 13 ಜನರ ಪ್ರಾಣ ಹೋಗಿದೆ. ತಲಾ ₹10 ಲಕ್ಷ ಪರಿಹಾರ ನೀಡಬೇಕು. ಅವಲಂಬಿತರಿಗೆ ಸರ್ಕಾರಿ ಕೆಲಸ ಕೊಡಿಸಬೇಕು’ ಎಂದು ಸಂಬಂಧಿಕರು ಒತ್ತಾಯಿಸಿದರು. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು ಎಂದು ಮುಖಂಡರು ಭರವಸೆ ನೀಡಿದರು.

ಆರ್‌ಟಿಒ ಸೇರಿ ಮೂವರ ಬಂಧನ



ರಾಮನಗರ: ಹಳೆಯ ಟ್ರ್ಯಾಕ್ಟರ್ ಗಳಿಗೆ ಅಕ್ರಮವಾಗಿ ನಕಲಿ ದಾಖಲೆ ಸೃಷ್ಟಿಸಿ ಹೊಸ ನೋಂದಣಿ ಸಂಖ್ಯೆ ನೀಡಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ) ಸೇರಿಮೂವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

2 ದಿನದಲ್ಲಿ ನಿವೃತ್ತರಾಗಬೇಕಿದ್ದ ರಾಮನಗರ ಆರ್‌ಟಿಒ ಶಿವಕುಮಾರ್, ಆರ್‌ಟಿಒ ಕಚೇರಿಯ ಪ್ರಥಮ ದರ್ಜೆ ಸಹಾಯಕ ರಚಿತ್ ರಾಜ್ ಮತ್ತು ಏಜೆಂಟ್ ಸತೀಶ್ ಅಲಿಯಾಸ್ ಟ್ರ್ಯಾಕ್ಟರ್ ಸತೀಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಸಂಚು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದೇವದಾರಿ ಗಣಿ ಯೋಜನೆ ಬಗ್ಗೆ ಜನರಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಕೆಟ್ಟ ಅಭಿಪ್ರಾಯ ಉಂಟು ಮಾಡಲು ಸಂಚು ಮಾಡಲಾಗುತ್ತಿದೆ’ ಎಂದು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ನವದೆಹಲಿಯಲ್ಲಿ ನಡೆದಿದ್ದ ರಾಜ್ಯದ ಸಂಸದರ ಸಭೆ ಕುರಿತು ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯಕ್ಕೆ ₹2,800 ಕೋಟಿಗೂ ಹೆಚ್ಚು ಆದಾಯ ತರುವ, ಸಾಕಷ್ಟು ಉದ್ಯೋಗ ಸೃಷ್ಟಿಸುವ ಈ ಯೋಜನೆ ಬಗ್ಗೆ ತಪ್ಪು ಮಾಹಿತಿ ಹರಡಲಾಗುತ್ತಿದೆ’ ಎಂದರು.

‘ದೇವದಾರಿ ಗಣಿಗಾರಿಕೆಗೆ ನಾನು ಹೊಸದಾಗಿ ಒಪ್ಪಿಗೆ ನೀಡಿಲ್ಲ. ರಾಜ್ಯ ಸರ್ಕಾರವೇ ಅನುಮತಿ ಕೊಟ್ಟಿದೆ. ಹಣಕಾಸು ನೆರವು ಪಡೆಯಲು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಬೇಕಿತ್ತು. ಅದನ್ನು ಮಾಡಿದ್ದೇನೆ. ಕುದುರೆಮುಖ ಪ್ರದೇಶದಲ್ಲಿ ಕೆಐಒಸಿಎಲ್ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ ಕ್ರಮ ಜರುಗಿಸಬಹುದು ದಂಡವನ್ನು ಹಾಕಬಹುದು. ಅದನ್ನು ಬಿಟ್ಟು ಸರ್ಕಾರಿ ಸ್ವಾಮ್ಯದ ಕಂಪನಿಯೊಂದರ ಯೋಜನೆಗೆ ಅಡ್ಡಗಾಲು ಹಾಕಿದರೆ ಅದು ಮತ್ತಷ್ಟು ನಷ್ಟಕ್ಕೆ ತುತ್ತಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ದೆಹಲಿಯಲ್ಲಿ ಸಂಸದರ ಸಭೆ ಕರೆಯಲಾಗಿತ್ತು. ಕೇಂದ್ರದಿಂದ ಬಾಕಿ ಇರುವ 26 ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರ ನಮಗೆ ಕೊಟ್ಟಿದೆ. ನೀರಾವರಿ, ತೆರಿಗೆ ಪಾಲು, ಅನುದಾನ ಕುರಿತು ಮುಖ್ಯಮಂತ್ರಿ ಪ್ರಸ್ತಾಪ ಮಾಡಿದ್ದಾರೆ. ಏಮ್ಸ್, ಐಐಟಿಗಳ ಪ್ರಸ್ತಾವನೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದಲ್ಲಿರುವ ಮಾಹಿತಿ ಕೊರತೆ ಬಗ್ಗೆ ಚರ್ಚಿಸಿದ್ದೇವೆ. ಸೂಕ್ತ ಮಾಹಿತಿಯೊಂದಿಗೆ ಬಂದರೆ ನೆರವು ಕೊಡುತ್ತೇವೆ. ಅದರಲ್ಲಿ ಗೊಂದಲಗಳಿಲ್ಲ’ ಎಂದು ಮಾಹಿತಿ ನೀಡಿದರು.

ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಸಿದ್ದರಾಮಯ್ಯ ಕೋರಿಕೆ

39 ಹೆದ್ದಾರಿಗಳು ಮೇಲ್ದರ್ಜೆಗೆ ಮನವಿ


ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಶುಕ್ರವಾರ ಇಲ್ಲಿ ಭೇಟಿಯಾಗಿ ರಾಜ್ಯದ ವಿವಿಧ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಮತ್ತು ಇತರ ಪ್ರಮುಖ ವಿಚಾರಗಳ ಕುರಿತು ಚರ್ಚಿಸಿದರು. ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವಿವಿಧ ಪ್ರಸ್ತಾವನೆಗಳಿಗೆ ಶೀಘ್ರವೇ ಅನುಮೋದನೆ ನೀಡುವಂತೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ 5,225 ಕಿ.ಮೀ. ಉದ್ದದ 39 ತಾತ್ವಿಕ ಅನುಮೋದನೆ ದೊರಕಿದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿದರು.

ಮನವಿಯಲ್ಲಿ ಏನಿತ್ತು?

- ದಿನಕ್ಕೆ 10000 ಪಿಸಿಯು ವಾಹನ ದಟ್ಟಣೆ ಹೊಂದಿರುವ ರಾಜ್ಯ ಹೆದ್ದಾರಿಗಳ ಉನ್ನತೀಕರಣ.
- ಶಿರಾಡಿ ಘಾಟಿಯಲ್ಲಿ ಮಾರನಹಳ್ಳಿಯಿಂದ ಅಡ್ಡಹೊಳೆ ನಡುವೆ ಸುರಂಗ ನಿರ್ಮಾಣದ ಮೂಲಕ ಮಂಗಳೂರು ಬಂದರು ಸಂಪರ್ಕ ಇನ್ನಷ್ಟು ಸುಗಮಗೊಳಿಸುವುದು.
- ಮೈಸೂರು ನಗರದ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಅನುಮೋದನೆ.
- ಮೈಸೂರು ರಿಂಗ್ ರಸ್ತೆಯಲ್ಲಿ 9 ಗ್ರೇಡ್ ಸೆಪರೇಟರುಗಳ ನಿರ್ಮಾಣಕ್ಕೆ ಅನುಮೋದನೆ
- ಬೆಳಗಾವಿ ನಗರದಲ್ಲಿ ಮೇಲುಸೇತುವೆ ನಿರ್ಮಾಣಕ್ಕೆ ಅನುಮೋದನೆ
- ಬೆಳಗಾವಿ ಜಿಲ್ಲೆಯ ಗೋಕಾಕ ಜಲಪಾತದಲ್ಲಿ ಕೇಬಲ್ ಕಾರ್ ಸೌಲಭ್ಯ ಕಲ್ಪಿಸುವ ಯೋಜನೆ
- ಕಿತ್ತೂರು ಪಟ್ಟಣದಿಂದ ಬೈಲಹೊಂಗಲವನ್ನು ಸಂಪರ್ಕಿಸುವ ರಸ್ತೆಯ ಸುಧಾರಣೆ.
- ಕಲಬುರಗಿ ಮತ್ತು ರಾಯಚೂರಿನಲ್ಲಿ ಬೈಪಾಸ್ ನಿರ್ಮಾಣ
- ಬೇಲೂರು– ಚಿಕ್ಕಮಗಳೂರು ನಡುವೆ ಚತುಷ್ಪಥ ನಿರ್ಮಾಣ.
- ರಾಷ್ಟ್ರೀಯ ಹೆದ್ದಾರಿ–766 ರ 106 ಕಿ.ಮೀ. ರಸ್ತೆಯನ್ನು ಚತುಷ್ಪಥ, ಆರು ಪಥದ ಹೆದ್ದಾರಿಯಾಗಿ ಅಭಿವೃದ್ಧಿಪಡಿಸುವುದು.
- ಈಗಾಗಲೇ ತಾತ್ವಿಕ ಅನುಮೋದನೆ ದೊರೆತಿರುವ ಕೇರಳದ ಕಲ್ಪೆಟ್ಟದಿಂದ ಮಾನಂದವಾಡಿ, ಎಚ್.ಡಿ.ಕೋಟೆ, ಜಯಪುರ ಮೂಲಕ ಮೈಸೂರನ್ನು ಸಂಪರ್ಕಿಸುವ 90 ಕಿ.ಮೀ. ಹೆದ್ದಾರಿ, ಮೈಸೂರಿನಿಂದ ಬನ್ನೂರು ಮೂಲಕ ಮಳವಳ್ಳಿಯನ್ನು ಸಂಪರ್ಕಿಸುವ 45 ಕಿ.ಮೀ. ಹೆದ್ದಾರಿ ಹಾಗೂ ಬೆಳಗಾವಿ ಜಿಲ್ಲೆಯ ಸಂಕೇಶ್ವರದಿಂದ ಗೋಕಾಕ-ಯರಗಟ್ಟಿ-ಮನ್ವಳ್ಳಿ ಮೂಲಕ ನರಗುಂದವನ್ನು ಸಂಪರ್ಕಿಸುವ 127 ಕಿ.ಮೀ. ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಣ.



ನಿತಿನ್ ಗಡ್ಕರಿ ಅವರಿಗೆ ಸಿದ್ದರಾಮಯ್ಯ ಮನವಿ ಸಲ್ಲಿಸಿದರು. ಗೃಹ ಸಚಿವ ಜಿ.ಪರಮೇಶ್ವರ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಚಿತ್ರದಲ್ಲಿದ್ದಾರೆ

ಪ್ರೀತಂ ಗೌಡ ವಿರುದ್ಧದ ತನಿಖೆಗೆ ತಡೆ ನೀಡಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಹಗರಣಕ್ಕೆ ಸಂಬಂಧಿಸಿದ ಪೆನ್‌ಡ್ರೈವ್ ಹಂಚಿಕೆ ಮಾಡಿದ ಆರೋಪ ಎದುರಿಸುತ್ತಿರುವ ಮಾಜಿ ಶಾಸಕ ಹಾಗೂ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ವಿರುದ್ಧದ ತನಿಖೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಪ್ರೀತಂ ಗೌಡ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿ, ‘ತನಿಖಾಧಿಕಾರಿಗಳು ತಮ್ಮ ವಿವೇಚನೆಗೆ ಅನುಗುಣವಾಗಿ ಪ್ರಕರಣದ ತನಿಖೆ ನಡೆಸಬಹುದು. ಆದರೆ, ಆರೋಪಿ ಪ್ರೀತಂ ಗೌಡ ಅವರನ್ನು ಬಂಧಿಸುವಂತಿಲ್ಲ’ ಎಂದು ಆದೇಶಿಸಿತು.

‘ಪೊಲೀಸರು ಆರೋಪಿಯನ್ನು ಬೆಳಿಗ್ಗೆ 7ರಿಂದ ರಾತ್ರಿ 9 ಗಂಟೆ ತನಕ ವಿಚಾರಣೆ ನಡೆಸಬಹುದು. ವಿಚಾರಣಾಧಿಕಾರಿ ಕರೆದಾಗಲೆಲ್ಲ ಅವರು ವಿಚಾರಣೆಗೆ ಹಾಜರಾಗಬೇಕು. ಈ ವೇಳೆ ಅವರನ್ನು ಬಂಧಿಸುವಂತಿಲ್ಲ, ವಶಕ್ಕೆ ಪಡೆದುಕೊಳ್ಳುವಂತಿಲ್ಲ. ಆದರೆ, ತನಿಖೆಗೆ ಅಗತ್ಯ ಎನಿಸಿದರೆ ಆರೋಪಿಯ ಮೊಬೈಲ್ ಫೋನ್ ಸೇರಿದಂತೆ ಇತರ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಬಹುದು’ ಎಂದು ನಿರ್ದೇಶಿಸಿತು.

ಸರ್ಕಾರದಲ್ಲಿದ್ದವರೇ ಹಂಚಿದ್ದಾರೆ?: ವಿಚಾರಣೆ ವೇಳೆ ಪ್ರೀತಂಗೌಡ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ‘ರಾಜ್ಯ ಸರ್ಕಾರದಲ್ಲಿ ಇರುವವರೇ 3 ಲಕ್ಷ ಪೆನ್ ಡ್ರೈವ್‌ಗಳನ್ನು ಖರೀದಿಸಿ ಅವುಗಳನ್ನು ಹಾಸನ ಮತ್ತು ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕವಾಗಿ ಹಂಚಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಹಾಗೆಂದು, ಸರ್ಕಾರದಲ್ಲಿ ಇದ್ದವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳುವ ಛಾತಿ ಇದೆಯಾ’ ಎಂದು ರವಿವರ್ಮ ಕುಮಾರ್ ಅವರನ್ನು ಪ್ರಶ್ನಿಸಿದರು. ಪ್ರಕರಣದ ದೂರುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.





ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿ ಕೊಪ್ಪಳದಲ್ಲಿ ಶುಕ್ರವಾರ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ವೇಳೆ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಬ್ಯಾರಿಕೇಡ್‌ನಿಂದ ಹೊರಬರಲು ಪ್ರಯತ್ನಿಸಿದ ಪರಿ (ಎಡ ಚಿತ್ರ). ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಮಾಜಿ ಸಚಿವ ಬಿ.ಶ್ರೀರಾಮುಲು ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಬಳ್ಳಾರಿಯ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಅಹೋರಾತ್ರಿ ಧರಣಿ ಆರಂಭಿಸಿದರು –ಪ್ರಜಾವಾಣಿ ಚಿತ್ರಗಳು

ಸಿ.ಎಂ ರಾಜೀನಾಮೆಗೆ ಆಗ್ರಹ; ವಿಜಯೇಂದ್ರ ಅವರನ್ನು ವಶಕ್ಕೆ ಪಡೆದು ಬಿಟ್ಟ ಪೊಲೀಸರು

ಬಿಜೆಪಿಯಿಂದ ಡಿ.ಸಿ ಕಚೇರಿ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರಾಜ್ಯ ಸರ್ಕಾರ ವಾಲ್ಮೀಕಿ ನಿಗಮದ ₹187 ಕೋಟಿ ಹಣ ಲೂಟಿ ಹೊಡೆದಿದೆ ಎಂದು ಆರೋಪಿಸಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ನೂರಾರು ಕಾರ್ಯಕರ್ತರನ್ನು ಶುಕ್ರವಾರ ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಮದಕರಿ ನಾಯಕ ವೃತ್ತದಲ್ಲಿ ಸೇರಿದ ಪ್ರತಿಭಟನಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ವಿಜಯೇಂದ್ರ ಸೇರಿದಂತೆ ಕಾರ್ಯಕರ್ತರು ಒನಕೆ ಓಬವ್ವ ವೃತ್ತದ ವರೆಗೂ ಮೆರವಣಿಗೆಯಲ್ಲಿ ಬಂದರು.

ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ತಡೆದರು. ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಬ್ಯಾರಿಕೇಡ್ ಮೇಲೆ ಹತ್ತಿ ಮುನ್ನುಗ್ಗಲು ಯತ್ನಿಸಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ವಾಗ್ವಾದ ನಡೆಯಿತು. ತಳ್ಳಾಟ ತೀವ್ರಗೊಂಡಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಪೊಲೀಸರು ಬಿ.ವೈ. ವಿಜಯೇಂದ್ರ ಹಾಗೂ ಮುಖಂಡರನ್ನು ವಶಕ್ಕೆ ಪಡೆದರು. ಗ್ರಾಮಾಂತರ ಠಾಣೆಗೆ ಕರೆದೊಯ್ದು ನಂತರ ಬಿಡುಗಡೆ ಮಾಡಲಾಯಿತು.

ಸಿ.ಎಂ ರಾಜೀನಾಮೆಗೆ ಒತ್ತಾಯ: ಪ್ರತಿಭಟನೆ ವೇಳೆ ಮಾತನಾಡಿದ ಬಿ.ವೈ. ವಿಜಯೇಂದ್ರ 'ಹಣಕಾಸು ಖಾತೆ ಜವಾಬ್ದಾರಿ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಬಾರದೇ ನಿಗಮದ ಹಣ ದುರುಪಯೋಗ ಆಗಿಲ್ಲ. ಹೀಗಾಗಿ ಪ್ರಕರಣದ ಜವಾಬ್ದಾರಿ ಹೊತ್ತು ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು. ಜೊತೆಗೆ ಸಚಿವ ಶರಣಪ್ರಕಾಶ ಪಾಟೀಲ, ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಕೂಡ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

'ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಅವರನ್ನು ಕರೆದು ವಿಚಾರಣೆ ನಡೆಸಿಲ್ಲ. ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಲಾಗುತ್ತಿದೆ. ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಹಗರಣ ನಡೆದಿಲ್ಲ' ಎಂದರು.

'ವಾಲ್ಮೀಕಿ ನಿಗಮದ ಹಣವನ್ನು ಬೇನಾಮಿ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಬಾರ್‌ಗಳಲ್ಲಿ ಕುಡಿತಕ್ಕೂ ಇದೇ ಹಣ ಬಳಸಲಾಗಿದೆ. ನಿಗಮಕ್ಕೆ ಕೇಂದ್ರ ಸರ್ಕಾರವೂ ಹಣ ನೀಡಿದ್ದು ರಾಜ್ಯ ಸರ್ಕಾರ ಅದಕ್ಕೆ ಲೆಕ್ಕ ನೀಡುತ್ತಿಲ್ಲ. ಎಸ್‌ಸಿಪಿ, ಟಿಎಸ್‌ಪಿ ಹಣವನ್ನೂ ದುರುಪಯೋಗ ಮಾಡಿಕೊಂಡಿರುವ ರಾಜ್ಯ ಸರ್ಕಾರಕ್ಕೆ ತಕ್ಕ ಶಾಸ್ತಿಯಾಗಬೇಕು' ಎಂದರು.

ವಿವಿಧೆಡೆ ಪ್ರತಿಭಟನೆ: ಹಗರಣ ಖಂಡಿಸಿ ಹಲವು ಜಿಲ್ಲಾ ಕೇಂದ್ರಗಳಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿತು.

ಬಿಜೆಪಿಯಿಂದ ಅಹೋರಾತ್ರಿ ಧರಣಿ

ಬಳ್ಳಾರಿ: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಮಾಜಿ ಸಚಿವ ಬಿ.ಶ್ರೀರಾಮುಲು ನೇತೃತ್ವದಲ್ಲಿ ಬಿಜೆಪಿ ನಾಯಕರು ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

'ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು, ಚಂದ್ರಶೇಖರನ್ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಹಗರಣಕ್ಕೆ ಸಂಬಂಧಿಸಿದ ಶಾಸಕ ಬಿ. ನಾಗೇಂದ್ರ ಸೇರಿ ಎಲ್ಲರನ್ನೂ ಬಂಧಿಸಬೇಕು' ಎಂದು ಅವರು ಆಗ್ರಹಿಸಿರು.

'ಇನ್ನೂ ಮೂರ್ನಾಲ್ಕು ವಿಕೆಟ್ ಬೀಳುವುದಿದೆ'

ಕೋಲಾರ: 'ವಾಲ್ಮೀಕಿ ನಿಗಮ ಹಗರಣದಲ್ಲಿ ಬಿ.ನಾಗೇಂದ್ರ ಪಾಲು ಶೇ 20 ಮಾತ್ರ; ಇನ್ನುಳಿದ ಶೇ 80 ಲೂಟಿ ಹೊಡೆದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗ್ಯಾಂಗ್. ಮುಖ್ಯಮಂತ್ರಿ ರಾಜೀನಾಮೆ ನೀಡುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ. ವಿಧಾನಸಭೆ ಅಧಿವೇಶನದಲ್ಲೂ ಪಟ್ಟು ಹಿಡಿದು ಹೋರಾಟ ನಡೆಸುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಇಲ್ಲಿ ಪ್ರತಿಭಟನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗ ವರ್ಗಾವಣೆ ದಂಧೆ ಶುರುವಾಗುತ್ತಿದೆ. ಮತ್ತೆ ಲೂಟಿ ಆರಂಭವಾಗಲಿದೆ ಎಂದು ಆರೋಪಿಸಿದರು.

'ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತರ ₹187 ಕೋಟಿ ಲೂಟಿ ಹೊಡೆದು ಬಾರ್, ವೈನ್ ಸ್ಟೋರ್‌ಗಳಿಗೆ ನೀಡಿದೆ. ಈ ಹಗರಣದಲ್ಲಿ ಈಗಾಗಲೇ ಒಂದು ವಿಕೆಟ್ ಬಿದ್ದಿದೆ. ಇನ್ನೂ ಮೂರ್ನಾಲ್ಕು ವಿಕೆಟ್ ಬೀಳುವುದಿದೆ. ಹಾಗೆಯೇ ಇನ್ನೂ ಎರಡು ಮೂರು ಇಲಾಖೆಯಲ್ಲಿ ಅವ್ಯವಹಾರ ನಡೆದಿದ್ದು, ಅದನ್ನೂ ಹೊರತರುತ್ತೇವೆ' ಎಂದರು.

200ಕ್ಕೂ ಹೆಚ್ಚು ಸಂದೇಶ ಕಳುಹಿಸಿದ್ದ ರೇಣುಕಸ್ವಾಮಿ

ಪ್ರತಿ ಸಂದೇಶ ಓದಿ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದರ್ಶನ್ ಅವರ ಆಪ್ತೆ ಪವಿತ್ರಾಗೌಡ ಅವರಿಗೆ ರೇಣುಕಸ್ವಾಮಿ ಕಳೆದ ಐದು ತಿಂಗಳಿಂದ ಸಂದೇಶ ಕಳುಹಿಸುತ್ತಿದ್ದರು' ಎಂಬುದು ತನಿಖೆಯಿಂದ ದೃಢಪಟ್ಟಿದೆ. ಪವಿತ್ರಾಗೌಡ ಅವರನ್ನು ಫೆಬ್ರುವರಿಯಿಂದಲೂ ಇನ್‌ಸ್ಟಾಗ್ರಾಮ್ ಮೂಲಕವೇ ಫಾಲೊ ಮಾಡುತ್ತಿದ್ದರು ಎಂಬುದೂ ಗೊತ್ತಾಗಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾಗೌಡ, ವಿನಯ್, ಪ್ರದೋಷ್ ಸೇರಿದಂತೆ 17 ಮಂದಿ ನ್ಯಾಯಾಂಗ ಬಂಧನದಲ್ಲಿದ್ದು ಪೊಲೀಸರು ಪ್ರಕರಣದ ತನಿಖೆ ಮುಂದುವರಿಸಿದ್ದಾರೆ.

ಸಾಕ್ಷ್ಯನಾಶಪಡಿಸುವ ಉದ್ದೇಶದಿಂದ ಆರೋಪಿಗಳು, ರೇಣುಕಸ್ವಾಮಿಗೆ ಸೇರಿದ ಮೊಬೈಲ್ ಅನ್ನು ಸುಮನಹಳ್ಳಿಯ ಸತ್ವ ಅನುಗ್ರಹ ಅಪಾರ್ಟ್‌ಮೆಂಟ್ ಬಳಿಯ ರಾಜಕಾಲುವೆಗೆ ಎಸೆದಿದ್ದರು. ಆರೋಪಿಗಳು ಪೊಲೀಸ್ ಕಸ್ಟಡಿಯಲ್ಲಿದ್ದ ವೇಳೆ ಪೌರಕಾರ್ಮಿಕರನ್ನು ಬಳಸಿ ಮೊಬೈಲ್‌ಗಾಗಿ ಶೋಧ ನಡೆಸಲಾಗಿತ್ತು. ಅಲ್ಲದೇ ಅಗ್ನಿಶಾಮಕ ದಳದ ಸಿಬ್ಬಂದಿ ಶೋಧ ನಡೆಸಿದ್ದರು. ಆದರೂ ಮೊಬೈಲ್ ಇನ್ನೂ ಪತ್ತೆಯಾಗಿಲ್ಲ.

'ನ್ಯಾಯಾಲಯದ ಅನುಮತಿ ಪಡೆದು ರೇಣುಕಸ್ವಾಮಿ ಬಳಸುತ್ತಿದ್ದ ನಂಬರ್‌ನಲ್ಲಿ ಮತ್ತೊಂದು ಸಿಮ್ ಖರೀದಿಸಿ ತನಿಖೆ ನಡೆಸಲಾಗುತ್ತಿದೆ. ದತ್ತಾಂಶ ಪಡೆದುಕೊಳ್ಳಲಾಗುತ್ತಿದೆ. ಕೊಲೆಯಾದ ವ್ಯಕ್ತಿ ಯಾವ್ಯಾವ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದರು ಎಂಬುದನ್ನೂ ಪತ್ತೆ ಹಚ್ಚಲಾಗುತ್ತಿದೆ. ಇದು ಸೂಕ್ಷ್ಮ ಪ್ರಕರಣವಾಗಿದ್ದು, ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಆರಂಭದಲ್ಲಿ ರೇಣುಕಸ್ವಾಮಿ ಸಾಮಾನ್ಯ ಚಾಟಿಂಗ್ ನಡೆಸಿದ್ದಾರೆ. ನಂತರ, ಕೆಲವು ಅಶ್ಲೀಲ ಸಂದೇಶ ಕಳುಹಿಸಿದ್ದಾರೆ. ಇದಕ್ಕೆ ಪವಿತ್ರಾಗೌಡ ಪ್ರತಿಕ್ರಿಯಿಸಿರಲಿಲ್ಲ. ನಂತರ, 200ಕ್ಕೂ ಹೆಚ್ಚು ಸಂದೇಶ ಕಳುಹಿಸಿದ್ದರು. ಜತೆಗೆ ಅಶ್ಲೀಲ ಚಿತ್ರಗಳನ್ನೂ ಕಳುಹಿಸಿದ್ದರು. ಆಗ ಪವಿತ್ರಾಗೌಡ ಅವರು ಆ ಅಕೌಂಟ್ ಬ್ಲಾಕ್ ಮಾಡಿ, ತಮ್ಮ ವ್ಯವಸ್ಥಾಪಕ ಪವನ್‌ಗೆ ತಿಳಿಸಿದ್ದರು. ಪವನ್ ಅವರು ದರ್ಶನ್‌ಗೆ ಹೇಳಿದ್ದರು' ಎಂದು ತನಿಖಾಧಿಕಾರಿ ಒಬ್ಬರು ಮಾಹಿತಿ ನೀಡಿದ್ದಾರೆ.

'ಪವಿತ್ರಾಗೌಡ ಅವರು ಖಾತೆಯನ್ನು ಬ್ಲಾಕ್ ಮಾಡಿದ ಬಳಿಕ, ರೇಣುಕಸ್ವಾಮಿ ನಕಲಿ ಖಾತೆ ತೆರೆದು ಸಂದೇಶ ಕಳುಹಿಸುತ್ತಿದ್ದರು ಎಂಬುದು ಪತ್ತೆಯಾಗಿದೆ. ಪವಿತ್ರಾ ಅವರ ಮೊಬೈಲ್ ಅನ್ನು ಜಪ್ತಿ ಮಾಡಿಕೊಂಡು ತನಿಖೆ ನಡೆಸಲಾಗುತ್ತಿದ್ದು, ಪ್ರಕರಣ ಸಂಬಂಧ ಕೆಲವು ಮಹತ್ವದ ಮಾಹಿತಿ ಸಂಗ್ರಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಜೂನ್ 8ರಂದು ಪಟ್ಟಣಗೆರೆಯ ಶೆಡ್‌ಗೆ ರೇಣುಕಸ್ವಾಮಿ ಅವರನ್ನು ಕರೆತರಲಾಗಿತ್ತು. ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದೆ ಎಂಬ ಆರೋಪವಿದೆ.

'ಹಲ್ಲೆ ವೇಳೆ ರೇಣುಕಸ್ವಾಮಿ ಮೊಬೈಲ್ ಅನ್ನು ಆರೋಪಿ ಪವನ್‌ಗೆ ನೀಡಿ ಪವಿತ್ರಾಗೌಡಗೆ ಕಳುಹಿಸಿದ್ದ ಸಂದೇಶಗಳನ್ನು ಓದುವಂತೆ ಹೇಳಿದ್ದರು. ಪ್ರತಿ ಸಂದೇಶ ಓದಿದಾಗಲೂ ಆರೋಪಿಗಳು ಹಲ್ಲೆ ನಡೆಸಿದ್ದಾರೆ' ಎಂದು ಗೊತ್ತಾಗಿದೆ.

'ಇನ್‌ಸ್ಟಾಗ್ರಾಮ್ ನಕಲಿ ಖಾತೆ ಮಾಹಿತಿಗಾಗಿ ಕಂಪನಿಗೆ ಪತ್ರ ಬರೆದು ಮಾಹಿತಿ ಕೇಳಲಾಗಿತ್ತು. ಕಂಪನಿಯಿಂದ ಇದುವರೆಗೂ ಯಾವುದೇ ಮಾಹಿತಿ ಬಂದಿಲ್ಲ' ಎಂದು ತನಿಖಾಧಿಕಾರಿ ಒಬ್ಬರು ಮಾಹಿತಿ ನೀಡಿದ್ದಾರೆ.

'ಜೈಲು ಬಳಿಗೆ ಬರುವುದು ಬೇಡ': ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಜೈಲಿಗೆ ಭೇಟಿ ನೀಡಿ ಅವರನ್ನು ಮಾತನಾಡಿಸಬೇಕು ಎಂದು ಹಲವು ಅಭಿಮಾನಿಗಳು ಜೈಲಿನತ್ತ ಬರುತ್ತಿದ್ದಾರೆ.

'ಯಾರೂ ಜೈಲಿನತ್ತ ಬರುವುದು ಬೇಡ. ನಿಯಮಗಳ ಪ್ರಕಾರ ಭೇಟಿ ಸಾಧ್ಯವಿಲ್ಲ. ಹೀಗಾಗಿ, ಯಾರು ಕೂಡ ಜೈಲಿನ ಬಳಿ ಬರಬೇಡಿ' ಎಂದು ಜೈಲು ಸಿಬ್ಬಂದಿ ಮೂಲಕ ದರ್ಶನ್ ಮನವಿ ಮಾಡಿಕೊಂಡಿದ್ದಾರೆ.

ದರ್ಶನ್ ಮನವಿಯನ್ನು ಜೈಲು ಸಿಬ್ಬಂದಿ, ಪರಪ್ಪನ ಅಗ್ರಹಾರದ ಚೆಕ್‌ಪೋಸ್ಟ್‌ನಲ್ಲಿರುವ ಸಿಬ್ಬಂದಿಗೆ ತಿಳಿಸಿದ್ದು ಅಲ್ಲಿಗೆ ಬರುವ ಅಭಿಮಾನಿಗಳಿಗೆ ಬುದ್ಧಿಹೇಳಿ ಅಲ್ಲಿಂದಲೇ ಕಳುಹಿಸುತ್ತಿದ್ದಾರೆ ಎಂದು ಗೊತ್ತಾಗಿದೆ.

ದರ್ಶನ್‌ಗೆ ತೆಲುಗು ನಟ ನಾಗಶೌರ್ಯ ಬೆಂಬಲ

ಹೈದರಾಬಾದ್: ಕೊಲೆ ಪ್ರಕರಣದಲ್ಲಿ ಆರೋಪಿತನಾಗಿ ಜೈಲು ಸೇರಿರುವ ನಟ ದರ್ಶನ್ ಅವರ ಬೆಂಬಲಕ್ಕೆ ತೆಲುಗಿನ ಯುವ ನಟ ನಾಗಶೌರ್ಯ ಅವರು ನಿಂತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿನ ಭಾವನಾತ್ಮಕ ಪೋಸ್ಟ್‌ನಲ್ಲಿ ದರ್ಶನ್ ಅವರನ್ನು 'ಅಣ್ಣಾ' ಎಂದು ಸಂಬೋಧಿಸಿದ್ದಾರೆ. 'ದರ್ಶನ್ ಪ್ರಾಮಾಣಿಕತೆ ಮತ್ತು ಸಹಾನುಭೂತಿಗೆ ಹೆಸರಾಗಿದ್ದಾರೆ. ಅವರು ನಿರಪರಾಧಿ ಎಂದು ರುಜುವಾತಾಗಲಿದೆ ಮತ್ತು ನಿಜವಾದ ಅಪರಾಧಿಯನ್ನು ನ್ಯಾಯಾಲಯ ಗುರುತಿಸಲಿದೆ ಎಂಬ ನಂಬಿಕೆ ಇದೆ' ಎಂದು ಹೇಳಿಕೊಂಡಿದ್ದಾರೆ.

'ದರ್ಶನ್ ಅಣ್ಣಾ ಕನಸಿನಲ್ಲಿಯೂ ಬೇರೆಯವರಿಗೆ ಹಾನಿ ಮಾಡುವವರಲ್ಲ. ಅವರನ್ನು ಚೆನ್ನಾಗಿ ಬಲ್ಲವರು ಅವರ ಹೃದಯ ವೈಶಾಲ್ಯ ಹಾಗೂ ಇತರರಿಗೆ ಸಹಾಯ ಮಾಡುವ ಬದ್ಧತೆಯನ್ನು ಗುರುತಿಸಬಹುದು. ಎಷ್ಟೋ ಜನರಿಗೆ ಆಧಾರಸ್ತಂಭವಾಗಿದ್ದಾರೆ' ಎಂದು ಶೌರ್ಯ ಅವರು ದರ್ಶನ್ ಭಾವಚಿತ್ರದೊಂದಿಗೆ ಬರೆದುಕೊಂಡಿದ್ದಾರೆ.

ಕೋವಿಡ್: ಖಾಲಿ ಬಿಲ್‌ಗೆ ₹1.81 ಕೋಟಿ ಬಿಡುಗಡೆ; ಪರೀಕ್ಷೆಗೆ ₹10 ಕೋಟಿ ಹೆಚ್ಚುವರಿ ಪಾವತಿ

₹30 ಕೋಟಿಗೂ ಹೆಚ್ಚು ಅಕ್ರಮ ಪತ್ತೆ

• ಆರ್. ಮಂಜುನಾಥ್



ಬೆಂಗಳೂರು: ನಗರದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ನಿಯಂತ್ರಣ, ರೋಗ ಪತ್ತೆಯ ಪರೀಕ್ಷೆ (ಆರ್‌ಟಿಪಿಸಿಆರ್), ಆಕ್ಸಿಜನ್ ಸಿಲಿಂಡರ್, ಸೊಳ್ಳೆ ನಿಯಂತ್ರಣಕ್ಕೆ ಔಷಧ ಸಿಂಪಡಿಸುವ ವೆಚ್ಚಗಳಲ್ಲಿ ಅಕ್ರಮವಾಗಿದ್ದು, ಕೋಟ್ಯಂತರ ರೂಪಾಯಿಯನ್ನು ಹೆಚ್ಚುವರಿಯಾಗಿ ಪಾವತಿ ಮಾಡಲಾಗಿದೆ.

ಕೋವಿಡ್ ನಿಯಂತ್ರಣದ ವೆಚ್ಚಗಳ ಪಾವತಿ ಬಿಲ್‌ಗಳಲ್ಲಿ ದರ ವ್ಯತ್ಯಾಸ ಹಾಗೂ ಇತರೆ ನ್ಯೂನತೆಗಳು ಕಂಡುಬಂದಿವೆ. ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚು ಹಣವನ್ನು ಪಾವತಿಸಲಾಗಿದೆ. ಆರ್‌ಟಿಪಿಸಿಆರ್‌ನಲ್ಲಿಯೇ ಅತಿಹೆಚ್ಚು ಅಕ್ರಮಗಳು ನಡೆದಿರುವುದು ಬಿಬಿಎಂಪಿಯ ಮುಖ್ಯ ಲೆಕ್ಕಪರಿಶೋಧಕರ 2021–22ನೇ ಸಾಲಿನ ವರದಿಯಲ್ಲಿ ಬಹಿರಂಗವಾಗಿದೆ.

ಕೇಂದ್ರ ವಲಯದ ಸಾರ್ವಜನಿಕ ಆರೋಗ್ಯದ ಮುಖ್ಯ ಆರೋಗ್ಯಾಧಿಕಾರಿ ಆರ್‌ಟಿಪಿಸಿಆರ್ ಪರೀಕ್ಷೆಗಳಿಗೆ ಸರ್ಕಾರದ ನಿಗದಿತ ವೆಚ್ಚಕ್ಕಿಂತ 15 ಡಿಸಿ ಬಿಲ್‌ಗಳಲ್ಲಿ ₹57.23 ಲಕ್ಷ ಪಾವತಿಸಿದ್ದಾರೆ. ಕೋವಿಡ್ ಕೇರ್ ಸೆಂಟರ್‌ಗಳಲ್ಲಿನ ವೈದ್ಯಕೀಯ ಸಿಬ್ಬಂದಿಗೆ ಗರಿಷ್ಠ ದಿನಕ್ಕಿಂತ ಹೆಚ್ಚು ವೆಚ್ಚ ಭರಿಸಲಾಗಿದೆ. ಜೊತೆಗೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಮಾನವ ಸಂಪನ್ಮೂಲ ಒದಗಿಸಿರುವುದಕ್ಕೆ ₹8.59 ಕೋಟಿ ಕಿದ್ವಾಯಿ ಸಂಸ್ಥೆಯಿಂದ ಪಾಲಿಕೆಗೆ ಪಾವತಿಯಾಗಿಲ್ಲ. ಮಾಲಿಕ್ಯುಲಾರ್ ಸಲ್ಯೂಷನ್ ಸಂಸ್ಥೆಗೂ ₹2.71 ಕೋಟಿ ಹೆಚ್ಚಾಗಿ ನೀಡಲಾಗಿದೆ.

141 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗಂಟಲಿನ ದ್ರವ ಪರೀಕ್ಷೆಗಳನ್ನು ಯುರೋಫಿನ್ ಮತ್ತು ಹೈಬ್ರಿನೊಮಿಕ್ಸ್ ಸಂಸ್ಥೆಗಳು ನಡೆಸಿದ್ದು, ಅವರಿಗೆ ಪಾವತಿ ಮಾಡಬೇಕಿದ್ದಕ್ಕಿಂತ ಹೆಚ್ಚಾಗಿ ₹3.68 ಲಕ್ಷವನ್ನು ಕೇಂದ್ರ ವಲಯದ ಸಾರ್ವಜನಿಕ ಆರೋಗ್ಯದ ಮುಖ್ಯ ಆರೋಗ್ಯಾಧಿಕಾರಿ ವತಿಯಿಂದ ಪಾವತಿಸಲಾಗಿದೆ. ಆಂಬುಲೆನ್ಸ್‌ಗಳನ್ನು ಖಾಸಗಿ ಸಂಸ್ಥೆಗಳಿಂದ ನಿಯೋಜಿಸಿಕೊಳ್ಳಲಾಗಿದ್ದು, ಅವುಗಳ ಸಂಖ್ಯೆ ಹಾಗೂ ಪಾವತಿಯಲ್ಲಿ ₹24.70 ಲಕ್ಷದಷ್ಟು ಆಕ್ಷೇಪಣೆ ವ್ಯಕ್ತವಾಗಿದ್ದು, ವಸೂಲಿಗೆ ಸೂಚಿಸಲಾಗಿದೆ.

ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲು ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಕಾರ್ಯಕ್ಕೆ ನ್ಯೂಬರ್ಗ್ ಆನಂದ್ ರೆಫೆರಲ್ ಆಸ್ಪತ್ರೆಗೆ ಹೆಚ್ಚುವರಿಯಾಗಿ ₹10.23 ಕೋಟಿಯನ್ನು ಮುಖ್ಯ ಆರೋಗ್ಯಾಧಿಕಾರಿಯಿಂದ ಪಾವತಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ, ಆಯುಕ್ತರ ಸುತ್ತೋಲೆಯನ್ನು ಉಲ್ಲಂಘಿಸಿ ಮೆಡಿಕಲ್ ಡಯಾಗ್ನಸಿಸ್ ಸೆಂಟರ್‌ನಲ್ಲಿ ನಿತ್ಯ 5500ಕ್ಕಿಂತ ಹೆಚ್ಚುವರಿ ಪರೀಕ್ಷೆಗಳನ್ನು ನಡೆಸಿ, ₹63.65 ಲಕ್ಷವನ್ನು ಅಧಿಕವಾಗಿ ಪಾವತಿಸಲಾಗಿದೆ.

ಕೋವಿಡ್–19ರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳ ಸಂಖ್ಯೆಗಳನ್ನು ನಮೂದಿಸದೇ ₹3.97 ಕೋಟಿಯನ್ನು ನ್ಯೂಬರ್ಗ್ ಆನಂದ್ ರೆಫೆರಲ್ ಆಸ್ಪತ್ರೆಗೆ ಪಾವತಿಸಲಾಗಿದೆ. ಬಿಬಿಎಂಪಿ ರೆಫೆರಲ್ ಆಸ್ಪತ್ರೆ ಮತ್ತು ಮೆಟರ್ನಿಟಿ ಹೋಮ್‌ಗಳಿಗೆ ಗ್ಯಾಸ್ ಪೈಪ್ ಲೈನ್ ಸಿಸ್ಟಮ್ ಅಳವಡಿಕೆ ನಂತರ ವಾರ್ಷಿಕ ನಿರ್ವಹಣೆಯಲ್ಲಿ ₹2.53 ಕೋಟಿಯಷ್ಟು ಅಕ್ರಮವಾಗಿದೆ. 14 ಹೆರಿಗೆ ಆಸ್ಪತ್ರೆಗಳಿಗೆ ಬೆನಕ ಮೆಡಿಟೆಕ್ ಗ್ಯಾಸ್ ಪೈಪ್‌ಲೈನ್ ಅಳವಡಿಸಿರುವುದಕ್ಕೆ ಪೂರಕ ದಾಖಲೆಗಳಿಲ್ಲ.

ಯಲಹಂಕ ವಿಭಾಗದ ಆರೋಗ್ಯ ವೈದ್ಯಾಧಿಕಾರಿಯವರು ಸೊಳ್ಳೆ ನಿಯಂತ್ರಣ ಔಷಧ ಸಿಂಪಡಣೆ ಕಾರ್ಯದಲ್ಲಿ ಗುತ್ತಿಗೆದಾರರು ಖಾಲಿ ಬಿಲ್ಲಿನ ಮೇಲೆ ಸಹಿ ಮಾಡಿ ನೀಡಿದ್ದಾರೆ. ಈ ಬಿಲ್ಲುಗಳನ್ನು ಆರೋಗ್ಯ ಅಧಿಕಾರಿಗಳು ಪರಿಶೀಲಿಸದೆ ₹.181 ಕೋಟಿ ಬಿಡುಗಡೆ ಮಾಡಿದ್ದಾರೆ.

ಆರೋಗ್ಯ ವಿಭಾಗದ ಆಕ್ಷೇಪಣೆಗಳು

- ಗೋವಿಂದರಾಜನಗರ ಚಂದ್ರಾಲೇಔಟ್ ವಿಭಾಗದ ಆರೋಗ್ಯ ವೈದ್ಯಾಧಿಕಾರಿ ಕಚೇರಿಯಲ್ಲಿ, ಪೆಟ್ರೋಲ್ ಚಾಲಿತ ಹ್ಯಾಂಡ್ ಪಂಪ್ ಮೂಲಕ ಔಷಧ ಸಿಂಪಡಿಸಿರುವ ಬಿಲ್‌ಗಳು ತಾಳೆಯಾಗುತ್ತಿಲ್ಲ
- ಮಹಾಲಕ್ಷ್ಮಿಪುರಂ ಆರೋಗ್ಯ ವೈದ್ಯಾಧಿಕಾರಿ ಕಚೇರಿಯಲ್ಲಿ, ಏಕರೂಪ ದರ ನಿಗದಿ ಆದೇಶ ಉಲ್ಲಂಘಿಸಿ ಔಷಧ ಮತ್ತು ಸಾಮಗ್ರಿಗಳನ್ನು ಖರೀದಿಸಲಾಗಿದೆ. ಸೋಂಕಿತರು ಮತ್ತು ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳಿಗೆ ಆಹಾರ ಸರಬರಾಜು ಮಾಡಲು ₹16.89 ಲಕ್ಷ ಪಾವತಿಸಿದ್ದು, ಪೂರೈಸಿದ ದಾಖಲೆಗಳಿಲ್ಲ.
- ಪುಲಕೇಶಿನಗರ ಮತ್ತು ಸರ್ವಜ್ಞನಗರ ವಿಭಾಗದ ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿಯಲ್ಲಿ, ಸೊಳ್ಳೆ ನಿಯಂತ್ರಣದ ಕೆಲಸ ನಿರ್ವಹಿಸದ ದಿನಗಳಿಗೂ ಆಟೊಗಳ ಮೈಕಿಂಗ್ ಬಾಡಿಗೆ, ಪೆಟ್ರೋಲ್‌ಗೆ ₹4.99 ಲಕ್ಷ ಭರಿಸಲಾಗಿದೆ.
- ಶಾಂತಿನಗರ ವಿಭಾಗದ ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿಯಲ್ಲಿ, ಮಾನವ ಸಂಪನ್ಮೂಲ ಸೇವೆ ಒದಗಿಸಿದ ಫ್ಯೂಚರ್ ಪ್ಲಾನೆಟ್ (ಒಪಿಸಿ) ಸಂಸ್ಥೆಯಿಂದ ಅಧಿಕೃತ ಬಿಲ್ ಪಡೆಯದೇ ₹47.23 ಲಕ್ಷ ಪಾವತಿಸಲಾಗಿದೆ.
- ಕೇಂದ್ರ ವಲಯ ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್)ಯವರು, ಆಸ್ಪತ್ರೆಗಳಿಗೆ ಭದ್ರತೆ ಸೇವೆ ಒದಗಿಸಿರುವ ಗುತ್ತಿಗೆದಾರರಾದ ಶ್ರೀನಿವಾಸ ಸೆಕ್ಯೂರಿಟಿ ಸರ್ವೀಸಸ್‌ಗೆ ₹1 ಕೋಟಿ ಪಾವತಿಸಿದ್ದು, ಸೇವೆ ನೀಡಿರುವ ಬಗ್ಗೆ ದಾಖಲೆಗಳಿಲ್ಲ.

ಕೋವಿಡ್ ಲೆಕ್ಕದಲ್ಲಿ ಅಕ್ರಮಗಳು

- ₹22.57 ಕೋಟಿ; ಆರ್‌ಟಿಪಿಸಿಆರ್ ನಿಗದಿತ ದರಕ್ಕಿಂತ ಹೆಚ್ಚು ಪಾವತಿ
- ₹3.97 ಕೋಟಿ; ಕೋವಿಡ್ ಪರೀಕ್ಷೆ ಸಂಖ್ಯೆ ನಮೂದಿಸದೆ ಹಣ ಪಾವತಿ
- ₹2.53 ಕೋಟಿ; ಆಕ್ಸಿಜನ್ ಸಿಲಿಂಡರ್ ಪೂರೈಕೆಯಲ್ಲಿ ಅಕ್ರಮ
- ₹1.81 ಕೋಟಿ; ಸೊಳ್ಳೆ ನಿವಾರಕ ಔಷಧ ಸಿಂಪಡಣೆ
- ₹63.65 ಲಕ್ಷ; ಆಯುಕ್ತರ ಆದೇಶಕ್ಕೆ ವಿರುದ್ಧವಾಗಿ ಹೆಚ್ಚುವರಿ ಪರೀಕ್ಷೆಗೆ ಪಾವತಿ
- ₹24.70 ಲಕ್ಷ; ಆಂಬುಲೆನ್ಸ್ ನಿಯೋಜನೆಗೆ ಲೆಕ್ಕವಿಲ್ಲ

ಸುದ್ದಿ 2 ನಿಮಿಷ

ಬಿಜೆಪಿ ಸರ್ಕಾರದ ವೈಫಲ್ಯ ಸಚಿವ ಎಂ.ಬಿ.ಪಾಟೀಲ

ಬೆಂಗಳೂರು: ವಿದ್ಯುತ್ ಚಾಲಿತ ವಾಹನ ತಯಾರಿಕೆ ಕ್ಷೇತ್ರದಲ್ಲಿ ಹೆಸರು ಮಾಡಿರುವ ಏಥರ್ ಕಂಪನಿ ಕರ್ನಾಟಕ ತೊರೆದು ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಳ್ಳಲು ಹಿಂದಿನ ಬಿಜೆಪಿ ಸರ್ಕಾರದ ವೈಫಲ್ಯ ಕಾರಣ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ದೂರಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಬೇಜವಾಬ್ದಾರಿ ಪರಿಣಾಮ ಏಥರ್ ಕಂಪನಿ ರಾಜ್ಯದಿಂದ ಹೊರಹೋಗುತ್ತಿದೆ ಎಂಬ ಶಾಸಕ ಅರವಿಂದ ಬೆಲ್ಲದ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಏಥರ್ ಕಂಪನಿ ತನ್ನ ಘಟಕ ಸ್ಥಾಪಿಸಲು 50 ಎಕರೆ ಜಮೀನು ಕೇಳಿತ್ತು. ಆದರೆ, ಕೇವಲ 35 ಎಕರೆ ಮಂಜೂರು ಮಾಡಲಾಗಿತ್ತು. ಇದರಲ್ಲೂ ಐದು ಎಕರೆ ವಿವಾದಕ್ಕೆ ಒಳಗಾಗಿತ್ತು. ಇದರಿಂದ ರೋಸಿ ಹೋದ ಕಂಪನಿ ಜಮೀನು ವಾಪಸ್ ನೀಡಿತ್ತು ಎಂದು ಆರೋಪಿಸಿದ್ದಾರೆ.



ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಏಕಗವಾಕ್ಷಿ ಯೋಜನೆಯಡಿ ಹರಳೂರು-ಮುದ್ದೇನಹಳ್ಳಿ ನಡುವೆ 50 ಎಕರೆ ಜಮೀನು ನೀಡಲು ಸಿದ್ಧವಿತ್ತು. ಆದರೆ, ಕಂಪನಿ ನಿರ್ಧಾರ ಬದಲಿಸಿತ್ತು. ಅವರ ಕಾಲದಲ್ಲೇ ಓಲಾ ಕಂಪನಿಯೂ ರಾಜ್ಯದಿಂದ ತಮಿಳುನಾಡಿಗೆ ಹೋಯಿತು ಎನ್ನುವುದನ್ನು ಅರವಿಂದ್ ಬೆಲ್ಲದ್ ನೆನಪು ಮಾಡಿಕೊಳ್ಳಬೇಕು ಎಂದಿದ್ದಾರೆ.

ಸಾರಿಗೆ ನಿವೃತ್ತ ನೌಕರರ ವೇತನ ಹೆಚ್ಚಳಕ್ಕೆ ಅನುಮೋದನೆ

ಬೆಂಗಳೂರು: ಸಾರಿಗೆ ನಿವೃತ್ತ ನೌಕರರಿಗೆ ಮೂಲವೇತನವನ್ನು ಶೇ. 15ರಷ್ಟು ಹೆಚ್ಚಿಸಲು ಕ್ರಮ ವಹಿಸಲಾಗಿದ್ದು, ಮುಂದಿನ ಹಣಕಾಸು ವರ್ಷದಲ್ಲಿ ವ್ಯತ್ಯಾಸದ ಮೊತ್ತವನ್ನು ನೀಡಲು ಲೆಕ್ಕಪತ್ರ ಇಲಾಖೆ ಅನುಮೋದನೆ ನೀಡಿದೆ.

ಸಾರಿಗೆ ನೌಕರರು 2019ರ ಡಿಸೆಂಬರ್ ಅಂತ್ಯದಲ್ಲಿ ಪಡೆಯುತ್ತಿದ್ದ ಮೂಲ ವೇತನವನ್ನು ಪರಿಷ್ಕರಿಸಿ ಶೇ 15 ರಷ್ಟು ಹೆಚ್ಚಿಸಲಾಗುವುದು. 2020ರಿಂದ 2023ರ ಫೆಬ್ರುವರಿ ಒಳಗೆ ನಿವೃತ್ತರಾದವರಿಗೆ ಉಪದಾನ, ನಿವೃತ್ತಿ ಗಳಿಕೆ ರಜೆ ನಗದೀಕರಣಕ್ಕೆ ಮಾತ್ರ ಇದು ಅನ್ವಯವಾಗಲಿದೆ ಎಂದು ಲೆಕ್ಕಪತ್ರ ಇಲಾಖೆಯು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

2020ರ ಜನವರಿಯಿಂದ 2023ರ ಫೆಬ್ರುವರಿ ನಡುವೆ ನಿವೃತ್ತರಾದ ಅಧಿಕಾರಿಗಳು ಮತ್ತು ನೌಕರರ ಪಟ್ಟಿಗಳನ್ನು ಆಗಸ್ಟ್ 31ರ ಒಳಗೆ ತಯಾರಿಸಬೇಕು. ಉಪದಾನ ಮತ್ತು ನಿವೃತ್ತಿ ಗಳಿಕೆ ರಜೆ ನಗದೀಕರಣಗಳ ವ್ಯತ್ಯಾಸದ ಕ್ಲೇಮ್‌ಗಳ ಪಾವತಿಯ ಕುರಿತು ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿ ಸಂಸ್ಥೆಗಳು ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧರಿಸಿ 2024–25ನೇ ಸಾಲಿನಲ್ಲಿ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ ತಾತ್ಕಾಲಿಕ ವಸತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಾಹಿ: ಎ ಜರ್ನಿ ಟುವರ್ಡ್ಸ್ ಡಿಗ್ನಿಟಿ ಸಂಸ್ಥೆಯು ಲಿಂಗತ್ವ ಅಲ್ಪಸಂಖ್ಯಾತರಿಗೆ ತಾತ್ಕಾಲಿಕ ಆಶ್ರಯಕ್ಕೆ ಮನೆಯನ್ನು ನಿರ್ಮಿಸಿದ್ದು, ಇದೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಹೊಯ್ಸಳ ನಗರದ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ನಾಟ್ಯಪ್ರಿಯ ನೃತ್ಯ ಕ್ಷೇತ್ರದಲ್ಲಿ ಉದ್ಘಾಟನೆ ಸಮಾರಂಭ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಸುಚಿತ್ರಾ ಕೆ.ಕೆ., ‘ಕ್ವೀರ್, ಟ್ರಾನ್ಸ್‌ಮಾಸ್ಕುಲಿನ್ ಮತ್ತು ಅಂತರ್ ಲಿಂಗಿ (ಇಂಟರ್ ಸೆಕ್ಸ್) ವ್ಯತ್ಯಾಸಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಈ ಮನೆ ಸಹಕಾರಿ ಆಗಲಿದೆ. ಬಿಕ್ಕಟ್ಟಿನ ತೀವ್ರತೆಗೆ ಅನುಗುಣವಾಗಿ ಈ ಆಶ್ರಯ ಮನೆಯಲ್ಲಿ ಗರಿಷ್ಠ 8 ರಿಂದ 10 ಮಂದಿಗೆ 60 ದಿನಗಳವರೆಗೆ ಅಲ್ಪಾವಧಿಯ ವಸತಿ ಸೌಕರ್ಯ ಒದಗಿಸಲಾಗುತ್ತದೆ. ಆಶ್ರಯ ಮನೆಯು ಸುರಕ್ಷಿತ ಮತ್ತು ಸುಭದ್ರ ವಾತಾವರಣ ಒದಗಿಸುವ ಗುರಿಯನ್ನು ಹೊಂದಿದೆ. ಸಮುದಾಯದವರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು’ ಎಂದರು.

‘ಆಶ್ರಯ ಮನೆಯಲ್ಲಿ ಅಗತ್ಯ ಸಹಾಯ, ಕಾಳಜಿ, ಬೆಂಬಲ ಮತ್ತು ಸಂಪನ್ಮೂಲವನ್ನು ಪಡೆಯಬಹುದು. ಈ ಮನೆಯಲ್ಲಿ ಸೌಲಭ್ಯ ಒದಗಿಸಲು ತರಬೇತಿ ಹೊಂದಿದ ಸಿಬ್ಬಂದಿ ಇರುತ್ತಾರೆ. ಅವರು ಮಾನಸಿಕ ಆರೋಗ್ಯ ಸೇವೆ ಸೇರಿ ವಿವಿಧ ನೆರವನ್ನು ಒದಗಿಸುತ್ತಾರೆ’ ಎಂದು ತಿಳಿಸಿದರು.

‘ಚಾವುಂಡರಾಯ ದತ್ತಿ ಪ್ರಶಸ್ತಿ ಪ್ರದಾನ’ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ

ಪರಿಷತ್ತಿನ ಆವರಣದಲ್ಲಿ ಪಂಪನ ಪುತ್ಥಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಕನ್ನಡದ ಆದಿಕವಿ ಪಂಪನ ಪುತ್ಥಳಿಯನ್ನು ಸ್ಥಾಪಿಸಲಾಗುತ್ತಿದ್ದು, ಅದಕ್ಕೆ ಬೇಕಾದ ಸಿದ್ಧತೆಗಳು ನಡೆಯುತ್ತಿವೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಶುಕ್ರವಾರ ನಡೆದ ‘ಚಾವುಂಡರಾಯ ದತ್ತಿ ಪ್ರಶಸ್ತಿ ಪ್ರದಾನ’ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕನ್ನಡ ಸಾಹಿತ್ಯಕ್ಕೆ ಜೈನರು ಹಾಕಿಕೊಟ್ಟ ಭದ್ರ ಬುನಾದಿಯ ಮೇಲೆ ನಮ್ಮ ಭವ್ಯ ಸಾಹಿತ್ಯ ಸೌಧ ನಿರ್ಮಾಣಗೊಂಡಿದೆ’ ಎಂದು ಶ್ಲಾಘಿಸಿದರು.

‘ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಜೈನರ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇರಬಹುದು. ಆದರೆ, ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಸಂಖ್ಯೆಯಲ್ಲಿ ಮಾತ್ರವಲ್ಲದೇ, ಗುಣಮಟ್ಟದಲ್ಲೂ ಬಹಳ ದೊಡ್ಡದು. ಆ ಕೊಡುಗೆ ಕನ್ನಡ ಸಾಹಿತ್ಯದ ಅರ್ಧ ಭಾಗವನ್ನು ಆವರಿಸಿಕೊಳ್ಳುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.



ಚಾವುಂಡರಾಯ ದತ್ತಿ ಪ್ರಶಸ್ತಿಯನ್ನು ಲೇಖಕಿ ಪ್ರೀತಿ ಶುಭಚಂದ್ರ ಅವರಿಗೆ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಪ್ರದಾನ ಮಾಡಿದರು. ಸಾಹಿತಿ ಹಂ.ಪ.ನಾಗರಾಜಯ್ಯ,ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನ್ ಸೊಸೈಟಿ ಉಪಾಧ್ಯಕ್ಷ ಸುರೇಂದ್ರ ಕುಮಾರ್, ಗೌರವ ಕಾರ್ಯದರ್ಶಿ ನೇ ಭ ರಾಮಲಿಂಗಶೆಟ್ಟಿ ಅಮೆರಿಕದ ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ಸಂಸ್ಥಾಪಕ ಅಧ್ಯಕ್ಷ ಪ್ರಸನ್ನಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಸಾಹಿತಿ ಹಂ.ಪ. ನಾಗರಾಜಯ್ಯ, ‘ಜೈನರಿಗೆ ಅಂತರಿಕ ಶೋಧದಷ್ಟೇ ಸಾಮಾಜಿಕ ಮುಖಗಳೂ ಮುಖ್ಯ. ಈ ಪುರಸ್ಕಾರ ಅದರ ಭಾಗ’ ಎಂದರು.

‘ಚಾವುಂಡರಾಯ ದತ್ತಿ ಪ್ರಶಸ್ತಿ’ ಸ್ವೀಕರಿಸಿದ ಲೇಖಕಿ ಪ್ರೀತಿ ಶುಭಚಂದ್ರ ಮಾತನಾಡಿ, ‘ಪಂಪ, ರತ್ನಾಕರ ವರ್ಣಿ ಕಾವ್ಯದಲ್ಲಿ ಚಿತ್ರಿಸಿದ ಬಾಹುಬಲಿಯನ್ನು ಚಾವುಂಡರಾಯರು ಮೂರ್ತಿರೂಪಕ್ಕೆ ತಂದರು. ಅವರ ಹೆಸರಿನಲ್ಲಿನ ಈ ಪ್ರಶಸ್ತಿ ಧನ್ಯತೆಯನ್ನು ತಂದಿದೆ’ ಎಂದು ಹೇಳಿದರು.

‘ಇತ್ತೀಚೆಗೆ ನಮ್ಮನ್ನು ಅಗಲಿದ ಸಾಹಿತಿ ಕಮಲಾ ಹಂಪನಾ ಅವರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ’ ಎಂದು ತಿಳಿಸಿದರು.

ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಸೊಸೈಟಿಯ ಉಪಾಧ್ಯಕ್ಷ ಸುರೇಂದ್ರ ಕುಮಾರ್, ನ್ಯೂಜರ್ಸಿಯ ಬೃಂದಾವನ ಕನ್ನಡ ಕೂಟದ ಸ್ಥಾಪಕ ಅಧ್ಯಕ್ಷ ಪ್ರಸನ್ನ ಕುಮಾರ್ ಮಾತನಾಡಿದರು.

ಕನಕಗಿರಿ ಕ್ಷೇತ್ರದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜ್, ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಉಪಸ್ಥಿತರಿದ್ದರು.



ಕೆಂಪೇಗೌಡ ಜಯಂತಿ ಪ್ರಯುಕ್ತ ನೆಲಮಂಗಲ ಪಟ್ಟಣದ ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿವರೆಗೆ ಅವರ ಪುತ್ಥಳಿಯನ್ನು ಪೂರ್ಣಕುಂಭ ಕಳಶ, ಜನಪದ ಕಲಾ ಪ್ರಕಾರಗಳೊಂದಿಗೆ ತಾಲ್ಲೂಕು ಕಚೇರಿವರೆಗೆ ಮೆರವಣಿಗೆ ಮಾಡಲಾಯಿತು

‘ಕಾಂಗ್ರೆಸ್ ಟೀಕಿಸುವ ನೈತಿಕತೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಕಾಂಗ್ರೆಸ್ ಪಕ್ಷವನ್ನು ಟೀಕಿಸುವ ನೈತಿಕತೆ ಉಳಿಸಿಕೊಂಡಿಲ್ಲ. ಅವರೊಬ್ಬ ಕಳಂಕಿತ, ಆರೋಪಗಳನ್ನು ಹೊತ್ತಿರುವ ನಾಯಕ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಅಶೋಕ ಅವರು ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿದ್ದಾಗ ಕೆಂಗೇರಿ ಹೋಬಳಿಯ ಬಿ.ಎಂ. ಕಾವಲಿಗೆ ಸಂಬಂಧಪಟ್ಟಂತೆ 2,500 ಎಕರೆ ಭೂಮಿ ಹಂಚಿಕೆಯಲ್ಲಿ ಸಾಕಷ್ಟು ಅಕ್ರಮಗಳು ನಡೆದಿವೆ. ಅಶೋಕ ಅವರ ಮೇಲೆ ಬಿಎಂಟಿಎಫ್‌ನಲ್ಲಿ ಪ್ರಕರಣ ದಾಖಲಾಗಿದೆ. ಈ ಪ್ರಕರಣದ ಸುದ್ದಿ ಮಾಧ್ಯಮಗಳಲ್ಲಿ ವರದಿ ಬರಬಾರದೆಂದು ಅವರು ತಡೆಯಾಜ್ಞೆ ತಂದಿದ್ದರು. ತಮ್ಮ ಮೇಲೆ ಬಂದಿರುವ ಆರೋಪಗಳಿಗೆ ಉತ್ತರಿಸುವ ಶಕ್ತಿ ಅವರಿಗೆ ಇಲ್ಲ’ ಎಂದರು.



ರಮೇಶ್ ಬಾಬು

‘ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುವವರು ಆರೋಪಗಳಿಂದ ಮುಕ್ತರಾಗಿರಬೇಕು. ಆದರೆ, ಅಶೋಕ ಆರೋಪ ಮುಕ್ತರಾಗಿ ಇದ್ದಾರೆಯೇ? ಸರ್ಕಾರವನ್ನು ಪ್ರಶ್ನಿಸುವ ನೈತಿಕತೆ ಉಳಿಸಿಕೊಂಡಿದ್ದಾರೆಯೇ’ ಎಂದು ಪ್ರಶ್ನಿಸಿದ ರಮೇಶ್ ಬಾಬು, ‘ಬಗರ್ ಹುಕುಂ ಜಮೀನು ಹಂಚಿಕೆ ಹಗರಣದ ಕುರಿತು ಕಾಂಗ್ರೆಸ್ ಸರ್ಕಾರ ಸಮಗ್ರ ತನಿಖೆ ನಡೆಸಬೇಕು’ ಎಂದೂ ಆಗ್ರಹಿಸಿದರು.

‘ವಿರೋಧ ಪಕ್ಷದ ನಾಯಕರಾಗಿ ಯಾವ ಸಂದರ್ಭದಲ್ಲಿ ಏನು ಮಾತನಾಡಬೇಕು ಎನ್ನುವುದು ಅಶೋಕಗೆ ಗೊತ್ತಿಲ್ಲ. ಪ್ರಬುದ್ಧತೆ, ಪಕ್ವತೆ ಇಲ್ಲದಂತೆ ವರ್ತಿಸುತ್ತಿದ್ದಾರೆ. ಯಾವುದೇ ವಿಚಾರದ ಬಗ್ಗೆ ಇವರಿಗೆ ಸ್ಪಷ್ಟತೆ ಇಲ್ಲವಾಗಿದೆ. ಅಸಮರ್ಥ ನಾಯಕನನ್ನು ಬಿಜೆಪಿ ವಿರೋಧ ಪಕ್ಷದ ನಾಯಕನನ್ನಾಗಿ ನೇಮಿಸಿದೆ’ ಎಂದು ದೂರಿದರು.

ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಹಾಗೂ ಸಂವಹನ ಕಾರ್ಯದರ್ಶಿ ದೀಪಕ್ ತಿಮಯ್ಯ, ಮಾಜಿ ಮೇಯರ್ ರಾಮಚಂದ್ರಪ್ಪ ಇದ್ದರು.



ಬ್ಯಾಟರಾಯನಪುರ ಕ್ಷೇತ್ರದ ಜಾಲ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಯಿತು. ಜಾಲ ಬ್ಲಾಕ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಎನ್.ಕೆ.ಮಹೇಶ್‌ಕುಮಾರ್, ಕೆಡಿಪಿ ಸದಸ್ಯ ಬಿ.ಕೆ.ನಾರಾಯಣಸ್ವಾಮಿ, ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಉದಯಶಂಕರ್, ಎಚ್.ಪಿ.ನಾರಾಯಣಸ್ವಾಮಿ, ಬಿ.ಎಂ.ನಾಗೇಶ್, ಬೈರೇಗೌಡ, ಎಚ್.ಎನ್.ವಸಂತಕುಮಾರ್, ನಂಜೇಗೌಡ, ರಾಜಕುಮಾರ್, ಶಾಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು

ನಗರದಲ್ಲಿ ಇಂದು

ರಾಷ್ಟ್ರೀಯ ಮಹಿಳಾ ಗ್ರಾಹಕ ಜಾಗರಣ ಸಮಾವೇಶ: ಉದ್ಘಾಟನೆ: ಅನುಪಮಾ ಹೊಸಕೆರೆ, ಅತಿಥಿಗಳು: ಸಿ. ಸೋಮಶೇಖರ್, ಆಶಾ ಸಿಂಗ್, ಅರುಣ ರಾವ್ ದೇಶಪಾಂಡೆ, ತಿಪ್ಪೇಸ್ವಾಮಿ, ಆಯೋಜನೆ: ಅಖಿಲ ಭಾರತೀಯ ಪಂಚಾಯತ್, ಸ್ಥಳ: ರಿಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಪದ್ಮನಾಭನಗರ, ಬೆಳಿಗ್ಗೆ 8.30

ಕನ್ನಡ ಸಾಹಿತ್ಯ, ಸಂಸ್ಕೃತಿ, ಜಾಗೃತಿ ಕಮ್ಮಟ–2024: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಡಿ.ಕೆ. ಕೋದಂಡರಾಮ, ಅತಿಥಿ: ಶಾಂತಿ ವಾಸು, ಉಪಸ್ಥಿತಿ: ಎಸ್. ರಾಮಲಿಂಗೇಶ್ವರ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ವಿನಾಯಕ ವಿದ್ಯಾಸಂಸ್ಥೆ ಆವರಣ, ಶ್ರೀನಿವಾಸನಗರ, ಬೆಳಿಗ್ಗೆ 10

ಜಾರ್ಜ್ ಫರ್ನಾಂಡಿಸ್ ಅವರ ಜನ್ಮದಿನಾಚರಣೆ: ಸನ್ಮಾನಿತರು: ಎಸ್.ಕೆ. ಕಾಂತಾ, ಮೈಕಲ್ ಫರ್ನಾಂಡಿಸ್, ಅತಿಥಿಗಳು: ಸಿದ್ದರಾಮಯ್ಯ, ಶಿವಾನಂದ ಪಾಟೀಲ, ಜೆ.ಸಿ. ಮಾಧುಸ್ವಾಮಿ, ಬಿ. ಸೋಮಶೇಖರ್, ಮಲ್ಲನಗೌಡ ಸಿ. ನಾಡಗೌಡ, ಆಯೋಜನೆ: ಜಾರ್ಜ್ ಫರ್ನಾಂಡಿಸ್ ಸೋಷಿಯಲ್ ಎಜುಕೇಷನ್ ಟ್ರಸ್ಟ್, ಸ್ಥಳ: ಬಸವ ಭವನದ ಸಭಾಂಗಣ, ಬಸವೇಶ್ವರ ವೃತ್ತ, ಅರಮನೆ ರಸ್ತೆ, ಬೆಳಿಗ್ಗೆ 10.30

ಬುದ್ಧ, ಬಸವ, ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ: ಉದ್ಘಾಟನೆ: ವಿ. ಅನ್ಬುಕುಮಾರ್, ಅತಿಥಿಗಳು: ವೈ.ಎಸ್. ಪಾಟೀಲ, ಗಿರೀಶ್ ಎಚ್.ಸಿ., ಜಿ.ಟಿ. ಪುತ್ರ, ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಸಂಗಮ ಸಭಾಂಗಣ, ಕೃಷಿ ಆಯುಕ್ತ ಕಚೇರಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 11

ಲಿಂಗತ್ವ ಅಲ್ಪಸಂಖ್ಯಾತರಿಗೆ ತಾತ್ಕಾಲಿಕವಾಗಿ ನಿರ್ಮಿಸಿರುವ ಆಶ್ರಯ ಮನೆ ಉದ್ಘಾಟನೆ: ಆಯೋಜನೆ: ರಾಹಿ: ಎ ಜರ್ನಿ ಟುವರ್ಡ್ಸ್ ಡಿಗ್ನಿಟಿ ಸಂಸ್ಥೆ, ಸ್ಥಳ: ನಾಟ್ಯಪ್ರಿಯ ನೃತ್ಯಕ್ಷೇತ್ರ, ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಹೊಯ್ಸಳನಗರ, ರಾಮಮೂರ್ತಿನಗರ, ಬೆಳಿಗ್ಗೆ 11

ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವ: ಅತಿಥಿಗಳು: ಥಾವರಚಂದ್ ಗೆಹಲೋತ್, ಟಿ.ಜಿ. ಸೀತಾರಾಮ್, ಡಾ.ಎಂ.ಸಿ. ಸುಧಾಕರ್, ಲಿಂಗರಾಜ ಗಾಂಧಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11.30

‘ಬ್ರಿಡ್ಜಿಂಗ್ ದಿ ಗ್ಯಾಪ್’: ಅತಿಥಿಗಳು: ಡಾ. ಶ್ರೀನಿವಾಸ್ ಎಸ್., ಬೆಜೊನ್ ಕುಮಾರ್ ಮಿಶ್ರಾ, ಡಾ.ಆರ್.ವಿ. ಅಶೋಕನ್, ವಜಹತ್ ಹಬೀಬ್ ಉಲ್ಲಾಹ್, ಡಾ. ಯೋಗಾನಂದ ರೆಡ್ಡಿ, ಆಯೋಜನೆ: ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಸ್ಥಳ: ಹೋಟೆಲ್ ಅಟ್ಟಿದೆ ಬೋಟಿಕ್ ಯಲಹಂಕ, ಮಧ್ಯಾಹ್ನ 12

‘ರಾಷ್ಟ್ರೀಯ ಪೀಡಿಯಾಟ್ರಿಕ್ ಸ್ಟ್ರೋಕ್’ ಸಮಾವೇಶ: ಭಾಷಣಕಾರರು: ಡಾ.ಹಿದರ್ ಫುಲ್ಲರ್‌ಟನ್, ಡಾ.ಮಜ ಸ್ಟೆನ್‌ಲಿನ್, ಆಯೋಜನೆ: ಇಂಡಿಯನ್ ಸ್ಟ್ರೋಕ್ ಅಸೋಸಿಯೇಷನ್, ಸ್ಥಳ: ಜೆ.ಡಬ್ಲ್ಯೂ ಮ್ಯಾರಿಯಟ್ ಹೋಟೆಲ್, ವಿಠ್ಠಲ್ ಮಲ್ಯ ರಸ್ತೆ, ಮಧ್ಯಾಹ್ನ 2.15




ಚಂದ್ರಶೇಖರ ಕಂಬಾರ

ಸಂಗೀತೋತ್ಸವ, ಗೌರವ ಸನ್ಮಾನ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಚಂದ್ರಶೇಖರ ಕಂಬಾರ, ಕೃಷ್ಣ ಎಸ್. ದೀಕ್ಷಿತ್, ಚಿರಂಜೀವಿ ಸಿಂಘ್, ಬಲವಂತರಾವ್ ಪಾಟೀಲ್, ಸನ್ಮಾನಿತರು: ಭಾರತಿದೇವಿ ರಾಜಗುರು, ವಿನಾಯಕ ತೊರವಿ, ವೆಂಕಟೇಶ್ ಕುಮಾರ್, ಆಯೋಜನೆ: ಸ್ವರ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಅಬ್ದುಲ್ ಅಜೀಜ್ ಅವರೊಂದಿಗೆ ‘ಮಾತುಕತೆ’: **ಆಯೋಜನೆ:** ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಸಂಜೆ 4.30

ರಾಘವೇಶ್ವರಭಾರತೀ ಸ್ವಾಮೀಜಿ ಅವರ ‘ಭಾವರಾಮಾಯಣ ರಾಮಾವತರಣ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಸುಬುಧೇಂದ್ರತೀರ್ಥ ಶ್ರೀಪಾದ ಸ್ವಾಮೀಜಿ, ಉಪಸ್ಥಿತಿ: ಶಿವರಾಜ ವಿ. ಪಾಟೀಲ, ಎಂ.ಆರ್. ದೊರೆಸ್ವಾಮಿ, ಆಯೋಜನೆ: ಶ್ರೀರಾಮಚಂದ್ರಾಪುರ ಮಠ, ಸ್ಥಳ: ಜಿ.ಜೆ. ಬಿ.ಸಿ. ಸಭಾಂಗಣ, ಪಿಇಎಸ್ ವಿಶ್ವವಿದ್ಯಾಲಯ, ಹೊಸಕೆರೆಹಳ್ಳಿ, ಸಂಜೆ 5

ವಿಕ್ರಮ ಬಿ.ಕೆ. ಅವರು ಸಂಪಾದಿಸಿರುವ ‘ಕಾಣುವಂತೆ ಕಾಣದಂತೆ’ ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿ: ಬಿ. ಮಂಜಮ್ಮ ಜೋಗತಿ, ಆಯೋಜನೆ: ತ್ರಿಲೋಕ ಬರಹ, ಸ್ಥಳ: ನಾಣಿ ಅಂಗಳ, ಸುಚಿತ್ರ ಸಿನಿಮಾ ಅಕಾಡೆಮಿ, ಬನಶಂಕರಿ, ಸಂಜೆ 5



ಬರಗೂರು ರಾಮಚಂದ್ರಪ್ಪ

ಚಂದ್ರಶೇಖರಯ್ಯ ಅವರಿಗೆ ಜೀವಮಾನ ಸಾಧನೆ ಅಭಿನಂದನಾ ಸಮಾರಂಭ, ‘ಮಣ್ಣಿನ ಮಕ್ಕಳ ಹೆಮ್ಮೆಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಟಿ.ಜಿ. ಶಿವಶಂಕರೇಗೌಡ, ಅಧ್ಯಕ್ಷತೆ: ಡಿ.ವಿ. ಸದಾನಂದಗೌಡ, ಅತಿಥಿಗಳು: ಕೃಷ್ಣಬೈರೇಗೌಡ, ಸಿ.ಟಿ. ರವಿ, ರಾಘವೇಂದ್ರ ಸುಹಾಸ್, ಸಜೀತ್ ವಿ.ಜೆ., ಎನ್.ಎಸ್. ನಾಗೇಶ್, ಆಯೋಜನೆ: ಒಕ್ಕಲಿಗ ಯುವ ಬ್ರಿಗೇಡ್, ಸ್ಥಳ: ಕೊಡಜ್ಜಿ ಬಸಪ್ಪ ಸಭಾಂಗಣ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಸಂಜೆ 5.30



ನಿರ್ಮಲಾನಂದನಾಥ ಸ್ವಾಮೀಜಿ

ಕರ್ನಾಟಕ ಸಂಗೀತ ರಂಗಪ್ರವೇಶ: ಪ್ರಸ್ತುತಿ: ಅಕುಲ್ ಗೊಂಚಿಗರ್, ಮೃದಂಗ: ಅನೂರು ಶ್ಯಾಮ್, ಪಿಟೀಲು: ಕೇಶವ್ ಮೋಹನ್‌ಕುಮಾರ್, ಘಟ: ರಘುನಂದನ್ ಬಿ.ಎಸ್., ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ 4ನೇ ಟಿ ಬ್ಲಾಕ್, ಸಂಜೆ 5.30

25ನೇ ವಾರ್ಷಿಕೋತ್ಸವ ‘ಮಾನವ್ ರತ್ನ ಪ್ರಶಸ್ತಿ’ ಪ್ರದಾನ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಅತಿಥಿ: ಎನ್. ಕುಮಾರ್, ಆಯೋಜನೆ: ಮಾನವ್ ಚಾರಿಟೀಸ್, ಸ್ಥಳ: ಬಸವೇಶ್ವರ ಸುಗಣನ್ ಮಂಟಪ, ಗೋವಿಂದರಾಜನಗರ, ಸಂಜೆ 5.30

‘ಅಮೃತ ಮಂಥನಂ’ ನೃತ್ಯ ಪ್ರದರ್ಶನ: ನಿರ್ದೇಶನ: ಶತವಧಾನಿ ಆರ್. ಗಣೇಶ್, ಸಂಗೀತ: ಪ್ರವೀಣ್ ಡಿ. ರಾವ್, ನೃತ್ಯ ಸಂಯೋಜನೆ: ಶಮಾ ಕೃಷ್ಣನ್, ಉಪಸ್ಥಿತಿ: ಕರುಣಾ ವಿಜಯೇಂದ್ರ, ಶೇಷಾದ್ರಿ ಅಯ್ಯಂಗಾರ್, ನವ್ಯ ನಟರಾಜನ್, ಆಯೋಜನೆ: ಶ್ರದ್ಧಾ ಡಾನ್ಸ್ ಸೆಂಟರ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6

‘ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರ’ ಸಂಗೀತ ಕಾರ್ಯಕ್ರಮ: ಸಂಗೀತೋತ್ಸವದ ವಿಶೇಷ ಗೌರವ: ಐ.ಎಂ. ವಿಠ್ಠಲಮೂರ್ತಿ, ಆರ್. ಎನ್. ಸ್ವಾಮಿ, ಗಾಯನ: ಹರಿಣಿ ಶ್ರೀಧರ್, ಪಿಟೀಲು: ಆದಿತ್ಯ ಮಣಿಕರ್ಣಿಕೆ, ಮೃದಂಗ: ಎಸ್.ಪಿ. ನಾಗೇಂದ್ರ ಪ್ರಸಾದ್, ಪಿಟೀಲು ಸೋಲೋ: ಜೆ.ಕೆ. ಶ್ರೀಧರ್, ಮೃದಂಗ: ರವಿಶಂಕರ್ ಶರ್ಮಾ, ಆಯೋಜನೆ: ಸಂಗೀತ ಸಂಭ್ರಮ–ಕಪ್ಪಣ್ಣ ಅಂಗಳ, ಸ್ಥಳ: ಜಿ.ವಿ. ಸಭಾಂಗಣ, ಜಯರಾಮ ಸೇವಾ ಮಂಡಳಿ, ಜಯನಗರ 6ನೇ ಬ್ಲಾಕ್, ಸಂಜೆ 6

‘ಜೀಕೆ ಮಾಸ್ತರರ ಪ್ರಣಯ ಪ್ರಸಂಗ’ ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಭಾಸ್ಕರ್ ನೀನಾಸಂ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 7

‘ಕಾಯುವ ಕಾಯಕ’ ನಾಟಕ ಪ್ರದರ್ಶನ: ಆಯೋಜನೆ: ಅಂತರಂಗ ತಂಡ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಬಿಬಿಎಂಪಿ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಎಚ್ಚರಿಕೆ

‘ಕಪ್ಪು ಪಟ್ಟಿಗೆ ಗುತ್ತಿಗೆದಾರರು’

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ‘ಸಮಯಕ್ಕೆ ಸರಿಯಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಎಚ್ಚರಿಕೆ ನೀಡಿದ್ದಾರೆ.

ನೆಲಗದರನಹಳ್ಳಿ ಮತ್ತು ಹೆಸರಘಟ್ಟ ಹಾಗೂ ವೈಮ್ಯಾಕ್ ಸರ್ಕಲ್ ಮುಖ್ಯರಸ್ತೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿದ್ದು, ಕಳಪೆಯಾಗಿವೆ ಎಂದು ದೂರು ಬಂದ ಹಿನ್ನೆಲೆಯಲ್ಲಿ ಶಾಸಕ ಎಸ್. ಮುನಿರಾಜು ಅವರೊಂದಿಗೆ ಸ್ಥಳ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ‘ಕಳಪೆ ಕಾಮಗಾರಿ ನಡೆಯುತ್ತಿರುವುದು ಕಂಡುಬಂದಿದೆ. ಈಗಾಗಲೇ ಸಂಬಂಧಿಸಿದ ಗುತ್ತಿಗೆದಾರರಿಗೆ ನಾಲ್ಕು ನೋಟಿಸ್ ನೀಡಲಾಗಿದೆ. ಅವರು ಯಾವುದಕ್ಕೂ ಪ್ರತಿಕ್ರಿಯೆ ನೀಡಿಲ್ಲ. ಹಾಗಾಗಿ ಬೇರೊಂದು ಕಂಪನಿಯಿಂದ ಗುಣಮಟ್ಟದ ಕಾಮಗಾರಿ ಮಾಡಿಸಿ, ಆಗಸ್ಟ್ ಅಂತ್ಯದೊಳಗೆ ನೆಲಗದರನಹಳ್ಳಿ ಮುಖ್ಯರಸ್ತೆ, ಡಿಸೆಂಬರ್ ಅಂತ್ಯದೊಳಗೆ ಹೆಸರಘಟ್ಟ ಮುಖ್ಯರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.



ಬಿಬಿಎಂಪಿ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಮತ್ತು ಶಾಸಕ ಎಸ್. ಮುನಿರಾಜು ಅಧಿಕಾರಿಗಳೊಂದಿಗೆ ನೆಲಗದರನಹಳ್ಳಿ ಮುಖ್ಯರಸ್ತೆಯನ್ನು ಪರಿಶೀಲಿಸಿದರು

ಶಾಸಕ ಎಸ್. ಮುನಿರಾಜು ಮಾತನಾಡಿ ‘ಹೆಸರಘಟ್ಟದ ಮುಖ್ಯರಸ್ತೆ ಕಾಮಗಾರಿಯನ್ನು ₹15 ಕೋಟಿಗೆ ಗುತ್ತಿಗೆ ನೀಡಲಾಗಿತ್ತು. ₹3 ಕೋಟಿಯಷ್ಟು ಕಾಮಗಾರಿ ಮಾಡದೇ, ₹8 ಕೋಟಿ ಬಿಲ್ ಮಾಡಿದ್ದರು. ಅಷ್ಟು ಕಾಮಗಾರಿ ನಡೆದಿಲ್ಲ. ಬಿಲ್ ನೀಡಬೇಡಿ' ಎಂದು ಪತ್ರ ಬರೆದಿದ್ದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಮುಖ್ಯ ಎಂಜಿನಿಯರ್ ಸ್ಥಳ ಪರಿಶೀಲನೆ ನಡೆಸಿದ್ದಾರೆ’ ಎಂದು ವಿವರಿಸಿದರು.

‘ವೈಮ್ಯಾಕ್ ಸರ್ಕಲ್ ರಸ್ತೆಗೆ ₹8 ಕೋಟಿ, ಹೆಸರಘಟ್ಟ ಮುಖ್ಯರಸ್ತೆಗೆ ₹15 ಕೋಟಿ, ನೆಲಗದರನಹಳ್ಳಿ ಮುಖ್ಯರಸ್ತೆಯ ಅಭಿವೃದ್ಧಿಗೆ ₹20ಕೋಟಿ ಅನುದಾನ ಬಿಡುಗಡೆಯಾಗಿದೆ’ ಎಂದು ತಿಳಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯ

‘ಸೇಫ್ ಸಿಟಿ ಯೋಜನೆ ಜಾರಿಗೊಳಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಶುಕ್ರವಾರ ಭೇಟಿಯಾಗಿ ರಾಜ್ಯದ ಪೊಲೀಸ್ ಪಡೆಯ ಬಲವರ್ಧನೆಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆಗಳ ಮಂಜೂರಾತಿ ಕುರಿತಂತೆ ಗಮನ ಸೆಳೆದರು.

ಕರ್ನಾಟಕ ರಾಜ್ಯ ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದು, ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು ಮತ್ತು ಸಾರ್ವಜನಿಕರ ಸುರಕ್ಷತೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕೇಂದ್ರದಿಂದ ಅಗತ್ಯವಿರುವ ನೆರವಿನ ಕುರಿತ ಹಲವು ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು.

ಭಾರತ ಸರ್ಕಾರವು ₹80 ಕೋಟಿ ವೆಚ್ಚದಲ್ಲಿ ಇಂಡಿಯನ್ ರಿಸರ್ವ್ ಬೆಟಾಲಿಯನ್ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಹೆಚ್ಚುವರಿಯಾಗಿ ಬಳ್ಳಾರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಎರಡು ಬೆಟಾಲಿಯನ್ ಸ್ಥಾಪನೆಗೆ ಅನುಮೋದನೆ ನೀಡುವಂತೆ ಕೋರಿದರು.

ನಿರ್ಭಯಾ ನಿಧಿಯಡಿಯಲ್ಲಿ ಬೆಂಗಳೂರು ನಗರದಂತೆಯೇ ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಮಂಗಳೂರು ಹಾಗೂ ಕಲಬುರಗಿ ನಗರಗಳಲ್ಲಿ ಸೇಫ್ ಸಿಟಿ ಯೋಜನೆಯನ್ನು ತಲಾ ₹200 ಕೋಟಿ ರೂ. ಗಳಂತೆ ಒಟ್ಟು 1000 ಕೋಟಿ ವೆಚ್ಚದಲ್ಲಿ ಅನುಷ್ಠಾನಕ್ಕೆ ಅನುಮೋದನೆ ನೀಡಬೇಕು ಎಂದು ಮನವಿ ಮಾಡಿದರು.

ಮುಖ್ಯಾಂಶಗಳು

- 100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಿಸಲು ನೆರವು ಕೋರಿಕೆ
- ಪೊಲೀಸ್ ಕ್ಯಾಂಟೀನ್ ರೀತಿ ಅಗ್ನಿಶಾಮಕ ಸಿಬ್ಬಂದಿಗೂ ಕ್ಯಾಂಟೀನ್‌ಗೆ ಅನುಮತಿ

ಪ್ರಸಕ್ತ ಸಾಲಿನಲ್ಲಿ ಬಾಡಿಗೆ ಕಟ್ಟಡದಲ್ಲಿರುವ/ ಶಿಥಿಲಾವಸ್ಥೆಯಲ್ಲಿರುವ 100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡವನ್ನು ತಲಾ ₹3 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ₹300 ಕೋಟಿ ಅಗತ್ಯವಿದೆ. ಇದಕ್ಕೆ ನೆರವು ಒದಗಿಸುವಂತೆಯೂ ಕೋರಿದರು.

ಪೊಲೀಸ್ ಕ್ಯಾಂಟೀನ್ ಸೌಲಭ್ಯ ಮಾದರಿಯಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಿಬ್ಬಂದಿಗೂ ಕ್ಯಾಂಟೀನ್ ಸ್ಥಾಪನೆಗೆ ಅಗತ್ಯ ಅನುಮತಿಗಳನ್ನು ಒದಗಿಸಬೇಕು ಎಂದರು. ಪೊಲೀಸ್ ವಸತಿ ಗೃಹಗಳ ನಿರ್ಮಾಣಕ್ಕೆ ನೆರವು, ವಿಧಿವಿಜ್ಞಾನ ಪ್ರಯೋಗಾಲಯಗಳ ಆಧುನೀಕರಣಕ್ಕೆ ನೆರವು ಮತ್ತಿತರ ವಿಷಯಗಳ ಕುರಿತು ಸಹ ಚರ್ಚಿಸಲಾಯಿತು.

‘ಕೇಂದ್ರದ ನೆರವಿಗೆ ಅರೆಬೆಂದ ಮಾಹಿತಿ’

ರಾಜ್ಯದ ಬಾಕಿ ಇರುವ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವು ಕೋರುವಾಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅರೆಬೆಂದ ಮಾಹಿತಿ ನೀಡುತ್ತಿದೆ ಎಂದು ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ವಾಗ್ದಾಳಿ ನಡೆಸಿದರು.



ಕುಮಾರಸ್ವಾಮಿ

ಸಿದ್ದರಾಮಯ್ಯ ಅವರು ಗುರುವಾರ ರಾತ್ರಿ ರಾಜ್ಯದ ಕೇಂದ್ರ ಸಚಿವರು ಮತ್ತು ಸಂಸದರೊಂದಿಗೆ ಸಭೆ ನಡೆಸಿ, ಕೇಂದ್ರದಲ್ಲಿ ಬಾಕಿ ಇರುವ ರಾಜ್ಯ ಯೋಜನೆಗಳಿಗೆ ಶೀಘ್ರ ಅನುಮತಿ ಪಡೆಯಲು ನೆರವು ಕೋರಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ‘ರಾಜ್ಯಕ್ಕೆ ಅನುದಾನ ನೀಡುವ ವಿಷಯದಲ್ಲಿ ಕೇಂದ್ರ ಮಲತಾಯಿ ಧೋರಣೆ ತಳೆದಿಲ್ಲ. ಬದಲಿಗೆ ಅದು ಬಯಸಿದ್ದಕ್ಕಿಂತ ಹೆಚ್ಚಿನದನ್ನು ನೀಡಿದೆ ಎಂದು ಸ್ಪಷ್ಟವಾಗಿ ಹೇಳಿದರು.

ರಾಜ್ಯ ನಾಯಕರು ಸತ್ಯಾಂಶಗಳನ್ನು ತಿರುಚಿ ತಪ್ಪು- ದಾರಿಗೆಳೆಯುವ ಹೇಳಿಕೆ ನೀಡುತ್ತಿದ್ದಾರೆ ಎಂದು ಟೀಕಿಸಿದ ನಿರ್ಮಲಾ, ಕರ್ನಾಟಕಕ್ಕೆ ಜಿಎಸ್‌ಟಿ ಬಾಕಿ ಉಳಿಸಿಕೊಂಡಿಲ್ಲ ಎಂದರು.

ಮೇಕೆದಾಟು ಸೇರಿದಂತೆ ನ್ಯಾಯಾಲಯದಲ್ಲಿ ಯಾವುದೇ ಬಾಕಿ ಉಳಿದಿರುವ ಯೋಜನೆಗಳಿಗೆ ರಾಜ್ಯ ಸರ್ಕಾರ ಕೇಂದ್ರವನ್ನು ದೂಷಿಸಬಾರದು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವೆ ಶೋಭಾ ಕರಂದ್ಲಾಜೆ ಅವರು ಹೇಳಿದರು.

ರಾಜ್ಯ ಸರ್ಕಾರವು ಕೇಂದ್ರದ ವಿರುದ್ಧ ಪ್ರತಿಭಟಿಸುವ ಬದಲು ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿ ಕೇಂದ್ರ ಸರ್ಕಾರದೊಂದಿಗೆ ಕೆಲಸ ಮಾಡಬೇಕು ಎಂದು ಕೇಂದ್ರ ಉಕ್ಕು ಸಚಿವ ಎಚ್. ಡಿ. ಕುಮಾರಸ್ವಾಮಿ ತಿಳಿಸಿದರು.

‘ಕನ್ನಡಕ್ಕೇ ಅಗ್ರ ತಾಂಬೂಲವಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಾಧಿಕಾರಗಳು ಮತ್ತು ಸರ್ಕಾರಿ ಅಧಿಕಾರಿಗಳು ಕನ್ನಡವನ್ನು ತಮ್ಮ ದಿನನಿತ್ಯದ ಕೆಲಸದಲ್ಲಿ ಸಮೃದ್ಧಗೊಳಿಸಿ ಪ್ರೋತ್ಸಾಹಿಸಬೇಕಾದ ಅಗತ್ಯವಿದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಲೋಕಾಯುಕ್ತ ಸಂಸ್ಥೆಯಲ್ಲಿ ದಿನನಿತ್ಯದ ಎಲ್ಲ ಪ್ರಕ್ರಿಯೆಗಳನ್ನು ಕನ್ನಡ ಭಾಷೆಯಲ್ಲೇ ನಡೆಸುವಂತೆ ನಿರ್ದೇಶಿಸಬೇಕು’ ಎಂದು ಕೋರಿ ಬೀದರ್‌ನ ಸಾಮಾಜಿಕ ಕಾರ್ಯಕರ್ತ ಗುರುನಾಥ್ ವಡ್ಡೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಅಂತೆಯೇ, ಅರ್ಜಿದಾರರು ಕೋರಿಕೆಯನ್ನು ಪುರಸ್ಕರಿಸಲು ನಿರಾಕರಿಸಿತು.

‘ರಾಜ್ಯ ಸರ್ಕಾರ ಮತ್ತು ಅಧೀನ ಪ್ರಾಧಿಕಾರಗಳು ಕನ್ನಡ ಬಳಕೆಗೆ ಸಂಬಂಧಿಸಿದಂತೆ ಸಕಾರಾತ್ಮಕ ನಿಲುವು ತೆಗೆದುಕೊಳ್ಳಬೇಕು. ಸರ್ಕಾರ ಮತ್ತು ಅಧಿಕಾರಿಗಳು ಸಾಧ್ಯವಾದಷ್ಟು ಕನ್ನಡಕ್ಕೇ ಅಗ್ರ ತಾಂಬೂಲ ನೀಡಬೇಕು. ಆಗ ಮಾತ್ರ ಕರ್ನಾಟಕದ ಭಾಷಾ ಸಂಸ್ಕೃತಿ ಉಳಿಯುತ್ತದೆ. ಸರ್ಕಾರದಲ್ಲಿ ಏಕಭಾಷೆ ಬಳಕೆ ಮಾಡಬೇಕೆಂಬ ಸಾರ್ವತ್ರಿಕ ಸೂತ್ರವಿಲ್ಲ. ಆದಾಗ್ಯೂ, ಮೂಲಭೂತವಾಗಿ ಸರ್ಕಾರಿ ವ್ಯವಹಾರಗಳು ಯಾವ ಬಾಷೆ ಬಳಸಬೇಕೆಂಬುದು ನೀತಿ ಮತ್ತು ಅನುಕೂಲತೆಯ ವಿಷಯವಾಗಿದೆ’ ಎಂದು ನ್ಯಾಯಪೀಠ ಹೇಳಿತು.



ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಾಧಕರನ್ನು ಸನ್ಮಾನಿಸಲಾಯಿತು

ಬಿಎಸ್‌ವೈ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳರಕ್ಷಣೆ ಕಾಯ್ದೆ–2012) ಪ್ರಕರಣದ ಎಫ್‌ಐಆರ್ ರದ್ದುಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಬೇಕು’ ಎಂಬ ಪ್ರಾಸಿಕ್ಯೂಷನ್ ಮನವಿಯನ್ನು ಪರಿಗಣಿಸಿದ ಹೈಕೋರ್ಟ್ ಸಮಯಾವಕಾಶ ನೀಡಿ ವಿಚಾರಣೆ ಮುಂದೂಡಿದೆ.

ಈ ಕುರಿತಂತೆ ಯಡಿಯೂರಪ್ಪ ಅವರು ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಪೋಕ್ಸೊ ಪ್ರಕರಣ

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮಕುಮಾರ್ ಹಾಗೂ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಸಮಯಾವಕಾಶ ನೀಡುವಂತೆ ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಮುಂದಿನ ವಿಚಾರಣೆ ವರೆಗೆ ಯಡಿಯೂರಪ್ಪ ಅವರನ್ನು ಬಂಧಿಸದಂತೆ ತನಿಖಾಧಿಕಾರಿಗೆ ನಿರ್ದೇಶಿಸಿ ಇದೇ 14ರಂದು ಹೊರಡಿಸಿದ್ದ ಆದೇಶವನ್ನು ವಿಸ್ತರಿಸಿತು.

ಇದೇ ವೇಳೆ ಸಂತ್ರಸ್ತ ಬಾಲಕಿಯ ಅಣ್ಣ ಸಲ್ಲಿಸಿರುವ ಮತ್ತೊಂದು ಅರ್ಜಿಯನ್ನೂ ಇದೇ ನ್ಯಾಯಪೀಠ ವಿಚಾರಣೆ ನಡೆಸಿತು. ‘ಆರೋಪಿಯನ್ನು ಬಂಧಿಸಿಯೇ ವಿಚಾರಣೆಗೆ ಒಳಪಡಿಸಲು ನಿರ್ದೇಶಿಸಬೇಕು ಎಂಬ ಅಂಶವನ್ನು ಪುಷ್ಟೀಕರಿಸುವ ಸುಪ್ರೀಂ ಕೋರ್ಟ್ ಪೂರ್ವನಿದರ್ಶನಗಳನ್ನು ನ್ಯಾಯಾಲಯಕ್ಕೆ ಒದಗಿಸಿ’ ಎಂದು ಅರ್ಜಿದಾರರ ಪರ ವಕೀಲ ಎಸ್. ಬಾಲನ್ ಅವರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಸಂತ್ರಸ್ತೆ ಅಪಹರಣ: ಆರೋಪಿಗೆ ಜಾಮೀನು

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯನ್ನು ಅಪಹರಿಸಲು ಸಹಕಾರ ನೀಡಿದ ಆರೋಪ ದಡಿ ಬಂಧನಕ್ಕೊಳಾಗಿರುವ ಆರನೇ ಆರೋಪಿ ಎಚ್.ಟಿ. ಕೀರ್ತಿ; ತಮ್ಮ ತಂದೆಯ ಮರಣೋತ್ತರ ವಿಧಿವಿಧಾನಗಳನ್ನು ನೆರವೇರಿಸಲು (ಅಪರ ಕರ್ಮ) ಹೈಕೋರ್ಟ್ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಆರೋಪಿ ಎಚ್.ಟಿ.ಕೀರ್ತಿ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್.ಕೃಷ್ಣ ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಕೀರ್ತಿ ಅವರ ತಂದೆ ಇದೇ 24ರಂದು ನಿಧನರಾಗಿದ್ದಾರೆ. ಮೃತರಿಗೆ ಕೀರ್ತಿ ಏಕಮಾತ್ರ ಪುತ್ರ. ಹಾಗಾಗಿ, ತಂದೆಯ ಮರಣಾನಂತರದ ಕ್ರಿಯೆಗಳನ್ನು ಪೂರೈಸುವ ಸಲುವಾಗಿ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಮೃತ ಪೋಷಕರ ಅಪರ ಕರ್ಮದಲ್ಲಿ ಭಾಗವಹಿಸಲು ಅನುವು ಮಾಡಿಕೊಡುವುದು ಧಾರ್ಮಿಕ ಹಕ್ಕುಗಳ ಭಾಗವಾಗಿದೆ. ಈ ನಿಟ್ಟನಲ್ಲಿ ಅರ್ಜಿದಾರರಿಗೆ ಜುಲೈ 15ರವರೆಗೆ ಷರತ್ತು ಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಲಾಗುತ್ತಿದೆ’ ಎಂದು ಆದೇಶಿಸಿತು.

‘ಅರ್ಜಿದಾರರನ್ನು ಕೂಡಲೇ ಜೈಲಿನಿಂದ ಬಿಡುಗಡೆ ಮಾಡಬೇಕು. ಆರೋಪಿಯು ₹ 50 ಸಾವಿರ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಶ್ಯೂರಿಟಿ ನೀಡಬೇಕು. ಮೈಸೂರು ಜಿಲ್ಲೆಯ ಕೆ.ಆರ್. ನಗರದ ಹೊರತಾಗಿ ಬೇರೆಡೆ ಪ್ರವಾಸ ಮಾಡಬಾರದು. ಅಪರ ಕರ್ಮಗಳನ್ನು ನೇರವೇರಿಸಿದ ಬಳಿಕ ಜುಲೈ 15 ಕ್ಕೆ ಪೊಲೀಸ್ ಠಾಣೆಗೆ ಹೋಗಿ ಶರಣಾಗಬೇಕು’ ಎಂಬ ಷರತ್ತು ವಿಧಿಸಲಾಗಿದೆ.

ಸಂತ್ರಸ್ತನನ್ನು ಕರೆತಂದು ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಹಾಸನ: ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದ ಮೊದಲ ಸಂತ್ರಸ್ತ ನನ್ನು ಸಿಐಡಿ ಪೊಲೀಸರು ಶುಕ್ರವಾರ ಹೊಳೆನರಸೀಪುರ ತಾಲ್ಲೂಕಿನ ಗನ್ನಿಗಡದ ತೋಟದ ಮನೆಗೆ ಕರೆತಂದು ಸ್ಥಳ ಮಹಜರು ನಡೆಸಿದರು.

‘ಜೂನ್ 16 ರಂದು ಗನ್ನಿಗಡದ ತೋಟದ ಮನೆಯಲ್ಲಿ ಡಾ.ಸೂರಜ್ ಲೈಂಗಿಕ ದೌರ್ಜನ್ಯ ಎಸಗಿದ್ದರು’ ಎಂದು ಸಂತ್ರಸ್ತ ಯುವಕ ಜೂನ್ 22 ರಂದು ಹೊಳೆನರಸೀಪುರ ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದರು.

ಒಬ್ಬ ಮಹಿಳಾ ಅಧಿಕಾರಿ ಸೇರಿದಂತೆ ಮೂರು ಜೀಪುಗಳಲ್ಲಿ ಬಂದಿದ್ದ ನಾಲ್ವರು ಅಧಿಕಾರಿಗಳ ತಂಡ, ದೌರ್ಜನ್ಯ ನಡೆದಿದೆ ಎನ್ನಲಾದ ತೋಟದ ಮನೆಯ ಕೊಠಡಿಯನ್ನು ಪರಿಶೀಲಿಸಿದರು.

ಯಾವ ಸ್ಥಳಗಳಲ್ಲಿ ಏನೆಲ್ಲ ನಡೆದಿದೆ ಎಂಬುದರ ಬಗ್ಗೆ ಸಂತ್ರಸ್ತನಿಂದ ಮಾಹಿತಿ ಕಲೆ ಹಾಕಿದರು.

ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿಕೆ

‘ಮುಂದಿನ ದಿನಗಳಲ್ಲಿ ಡಿಕೆಶಿ ಸಿಎಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಕ್ಕಲಿಗ ಸಮುದಾಯದ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಗಳಾಗಿದ್ದರು. ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಕೂಡ ಮುಖ್ಯಮಂತ್ರಿಯಾಗುವುದು ಖಚಿತ’ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಚುಂಚಶ್ರೀ ಬಳಗವು ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಠದ ಸಮುದಾಯ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಸತ್ಸಂಗ ಮತ್ತು ಯುಪಿ ಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಒಕ್ಕಲಿಗರಿಗೆ ಉನ್ನತ ಸ್ಥಾನ ಸಿಕ್ಕಿದೆ. ಸಚಿವ ಸಂಪುಟದಲ್ಲಿ ಜಾತಿಗಣತಿಯ ಸಾಧಕ, ಬಾಧಕ ಕುರಿತು ಚರ್ಚಿಸಲಾಗುವುದು ಎಂದು ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ದೇಶ ಸೇವೆ ಮಾಡುವ ವರಿಗೆ ಸಂಬಳಕ್ಕಿಂತ ಸಮಾಜ ಮುಖ್ಯವಾಗ ಬೇಕು’ ಎಂದು ಸಲಹೆ ನೀಡಿದರು.

‘ಸಾಧನೆ ಮಾಡಲು ಪ್ರಯತ್ನ ಮಾಡುವವರಿಗೆ ಸಮಾಜ ಸಹಕಾರ ನೀಡುತ್ತದೆ. ಸಮಾಜ ಕಟ್ಟಲು ಶ್ರಮಿಸುವ ವ್ಯಕ್ತಿಗಳಿಗೆ ಸಹಕಾರ ಕೊಡಬೇಕು.ದೇಶ ಸೇವೆಗೆ ಆಯ್ಕೆಯಾಗಿರುವ ಸಾಧಕರನ್ನು ಸೇವೆಗೆ ಕಳುಹಿಸಿಕೊಡುವ ಸಮಯ ಇದು’ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮಾತನಾಡಿ, ‘ಒಕ್ಕಲಿಗ ಸಮುದಾಯದಲ್ಲಿ ವ್ಯವಸಾಯ ನಂಬಿ ಜೀವನ ಸಾಗಿಸುವರು ಸಾಕಷ್ಟು ಜನರಿದ್ದಾರೆ. ರೈತ, ಶಿಕ್ಷಕರ ಕುಟುಂಬದಿಂದ ಮಕ್ಕಳು ಯುಪಿಎಸ್‌ಸಿಯಲ್ಲಿ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ’ ಎಂದು ಶ್ಲಾಘಿಸಿದರು.

ಶಾಸಕ ಸಿ.ಎನ್.ಅಶ್ವತ್ಥ ನಾರಾಯಣ, ಎಂ. ಕೃಷ್ಣಪ್ಪ, ವಿಜಯನಗರದ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಬಿಡಿಎ ಆಯುಕ್ತ ಜಯರಾಮ, ಐಎಎಸ್ ಅಧಿಕಾರಿ ರಂಗಪ್ಪ ಭಾಗವಹಿಸಿದ್ದರು.

‘ಆಂಧ್ರಕ್ಕೆ ಜಗನ್ ಸರ್ಕಾರದಿಂದ ಹೆಚ್ಚು ಹಾನಿ’

ಅಮರಾವತಿ (ಪಿಟಿಐ): ಪ್ರತ್ಯೇಕ ರಾಜ್ಯವಾಗಿ ವಿಭಜನೆಗೊಂಡದ್ದಕ್ಕಿಂತಲೂ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಸರ್ಕಾರದ ಅವಧಿಯಲ್ಲಿ ಆಂಧ್ರಪ್ರದೇಶಕ್ಕೆ ಹೆಚ್ಚು ಹಾನಿ ಸಂಭವಿಸಿತು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಶುಕ್ರವಾರ ಅಭಿಪ್ರಾಯಪಟ್ಟರು. ತಮ್ಮ ಮಾತಿಗೆ ಅವರು ಪೋಲವರಂ ಯೋಜನೆಯನ್ನು ನಿದರ್ಶನವನ್ನಾಗಿ ನೀಡಿದರು.

ಪೋಲವರಂ ಯೋಜನೆ ಬಗ್ಗೆ ಶ್ವೇತಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಜಗನ್ ಅವರ 2019–2024ರ ನಡುವಿನ ಅವಧಿಯ ಆಡಳಿತವು ರಾಜ್ಯದ ಪಾಲಿಗೆ ಒಂದು ಶಾಪವಾಗಿತ್ತು’ ಎಂದು ಟೀಕಿಸಿದರು.

ತಮ್ಮ ಅವಧಿಯಲ್ಲಿ ಯೋಜನೆಯ ಶೇ 72ರಷ್ಟು ಕಾಮಗಾರಿ ಮುಗಿದಿತ್ತು. ಜಗನ್ ಅವಧಿಯಲ್ಲಿ ಯೋಜನೆ ಶೇ 4ರಷ್ಟು ಮಾತ್ರ ಪ್ರಗತಿ ಸಾಧಿಸಿದೆ ಎಂದು ಪ್ರತಿಪಾದಿಸಿದರು. ತಮ್ಮ ಸರ್ಕಾರವು ಯೋಜನೆಗಾಗಿ ₹11,762 ಕೋಟಿ ವೆಚ್ಚ ಮಾಡಿದ್ದರೆ, ಜಗನ್ ಸರ್ಕಾರವು ಕೇವಲ ₹4,167 ಕೋಟಿ ವೆಚ್ಚ ಮಾಡಿದೆ ಎಂದು ತಿಳಿಸಿದರು.

‘ಚಲನವಲನ’ ನಿಯಮಕ್ಕೆ ನೌಕರರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ಸಚಿವಾಲಯ ನೌಕರರಿಗೆ ಸೀಮಿತವಾಗಿದ್ದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸ್ಥಳ ನಿಯುಕ್ತಿಗೊಳಿಸುವ ‘ಚಲನವಲನ’ ನಿಯಮವನ್ನು ಸರ್ಕಾರ ನಗರ ಪ್ರದೇಶದ ವ್ಯಾಪ್ತಿಯ ನೌಕರರಿಗೂ ವಿಸ್ತರಿಸಿದೆ.


ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗೆ ಸೇರಿದ ಸರ್ಕಾರಿ ನೌಕರರನ್ನು ಆವಶ್ಯಕತೆಗೆ ಅನುಗುಣವಾಗಿ ಸಚಿವಾಲಯದ ವ್ಯಾಪ್ತಿಯ ಯಾವುದೇ ಇಲಾಖೆಗೆ ವರ್ಗಾಯಿಸಲು ಬಹಳ ವರ್ಷಗಳ ಹಿಂದೆಯೇ ನಿಯಮ ರೂಪಿಸಲಾಗಿತ್ತು. ಇದಕ್ಕೆ ಸಾರ್ವತ್ರಿಕ ವರ್ಗಾವಣೆಯ ನಿಯಮಗಳು ಅನ್ವಯವಾಗುವುದಿಲ್ಲ. ಯಾವುದೇ ಸಮಯದಲ್ಲಾದರೂ ಅಗತ್ಯ ಕಾರಣ ನೀಡಿ ನೌಕರರನ್ನು ಸ್ಥಳ ನಿಯುಕ್ತಿ ಮಾಡಬಹುದು.

2013ರಲ್ಲಿ ರಾಜ್ಯ ಸರ್ಕಾರ ರೂಪಿಸಿದ್ದ ವರ್ಗಾವಣಾ ಮಾರ್ಗಸೂಚಿಗಳಲ್ಲೂ ‘ಚಲನವಲನ’ ನಿಯಮ ಸಚಿವಾಲಯದ ನೌಕರರಿಗಷ್ಟೇ ಸೀಮಿತವಾಗಿತ್ತು. 2013ರ ವರ್ಗಾವಣಾ ಮಾರ್ಗಸೂಚಿಗಳನ್ನು ಈ ಬಾರಿ ಪರಿಷ್ಕರಿಸಿ ಮರು ಆದೇಶ ಹೊರಡಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಆಯಾ ಇಲಾಖೆಗಳ ನೌಕರರನ್ನು ನಗರ ಪ್ರದೇಶದ ವ್ಯಾಪ್ತಿಯ ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಸ್ಥಳ ನಿಯುಕ್ತಿಗೊಳಿಸಲು ಅವಕಾಶ ಮಾಡಿಕೊಟ್ಟಿದೆ.

‘ಒಬ್ಬ ಅಧೀಕ್ಷಕ ಸಾರ್ವತ್ರಿಕ ವರ್ಗಾವಣೆಯಲ್ಲಿ ಭಾಗವಹಿಸಿ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಗೆ ವರ್ಗವಾಗಿ ಬಂದರೆ, ಇಲಾಖೆಯ ಮುಖ್ಯಸ್ಥರು ಚಲನವಲನ ನಿಯಮವನ್ನು ಬಳಸಿಕೊಂಡು ಕೆಲ ಸಮಯದಲ್ಲೇ ಅವರನ್ನು ಯಲಹಂಕದ ಉಪ ನಿರ್ದೇಶಕರ ಕಚೇರಿ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ವರ್ಗಾಯಿಸಬಹುದು. ಸಚಿವಾಲಯ ನೌಕರರಾದರೆ ವಿಧಾನಸೌಧ, ವಿಕಾಸಸೌಧ ಹಾಗೂ ಸಚಿವಾಲಯ ಕಚೇರಿಗಳ ವ್ಯಾಪ್ತಿಗಷ್ಟೇ ಸೀಮಿತವಾಗಿರುತ್ತಾರೆ. ಬೇರೆ ಇಲಾಖೆಗಳು ನಗರ ಪ್ರದೇಶದ ಬೇರೆ ಬೇರೆ ಭಾಗದಲ್ಲಿರುತ್ತದೆ. ಇದರಿಂದ ಆ ನೌಕರರಿಗೆ ಸಾಕಷ್ಟು ಅನನುಕೂಲವಾಗುತ್ತದೆ’ ಎಂದು ವಿವಿಧ ಇಲಾಖೆಯ ನೌಕರರು ದೂರಿದ್ದಾರೆ.

ಎನ್‌ಇಟಿ ಸೇರಿ 3 ಪರೀಕ್ಷೆಗಳ ದಿನಾಂಕ ಘೋಷಿಸಿದ ಎನ್‌ಟಿಎ

ನವದೆಹಲಿ(ಪಿಟಿಐ): ಯುಜಿಸಿ–ಎನ್‌ಇಟಿ ಸೇರಿದಂತೆ ಮೂರು ಪ್ರಮುಖ ಪ್ರವೇಶ ಪರೀಕ್ಷೆಗಳು ನಡೆಯುವ ಹೊಸ ದಿನಾಂಕಗಳನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಶುಕ್ರವಾರ ಘೋಷಿಸಿದೆ.



ಅಕ್ರಮಗಳು ನಡೆದಿರುವ ಆರೋಪ ದಿಂದಾಗಿ ಕೆಲ ಪರೀಕ್ಷೆಗಳನ್ನು ರದ್ದುಪಡಿಸಲಾಗಿದ್ದರೆ, ಮತ್ತೆ ಕೆಲ ಪರೀಕ್ಷೆ ಗಳನ್ನು ಎನ್‌ಟಿಎ ಮುಂದೂಡಿತ್ತು.

ಯುಜಿಸಿ–ಎನ್‌ಇಟಿ ಆಗಸ್ಟ್ 21ರಿಂದ ಸೆಪ್ಟೆಂಬರ್ 4ರವರೆಗೆ ನಡೆಯಲಿದೆ. ಸಿಎಸ್‌ಐಆರ್ ಯುಜಿಸಿ–ಎನ್‌ಇಟಿ ಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ಮುಂದೂಡಲಾಗಿತ್ತು. ಈ ಪರೀಕ್ಷೆಯನ್ನು ಜುಲೈ 25ರಿಂದ 27ರವರೆಗೆ ನಡೆಸಲಾಗುವುದು ಎಂದು ಎನ್‌ಟಿಎ ತಿಳಿಸಿದೆ.

ರಾಷ್ಟ್ರೀಯ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಎನ್‌ಸಿಇಟಿ) ಜುಲೈ 10ರಂದು ನಡೆಸಲಾಗುತ್ತದೆ ಎಂದು ತಿಳಿಸಿದೆ.

ಐಐಟಿ, ಎನ್‌ಐಟಿ, ಆರ್‌ಐಇ ಸೇರಿದಂತೆ ಆಯ್ದ ಕೇಂದ್ರೀಯ ಮತ್ತು ರಾಜ್ಯಗಳಲ್ಲಿನ ವಿಶ್ವವಿದ್ಯಾಲಯಗಳುಅಥವಾ ಶಿಕ್ಷಣ ಕೇಂದ್ರಗಳಲ್ಲಿನ ನಾಲ್ಕು ವರ್ಷಗಳ ಐಟಿಇಪಿ (ಇಂಟಿಗ್ರೇಟೆಡ್ ಟೀಚರ್ ಎಜುಕೇಷನ್ ಪ್ರೋಗ್ರಾಮ್) ಪ್ರವೇಶಕ್ಕಾಗಿ ನಡೆಯುವ ಎನ್‌ಸಿಇಟಿ ಜೂನ್ 12ರಂದು ನಿಗದಿಯಾಗಿತ್ತು. ನಿಗದಿತ ಸಮಯಕ್ಕೆ ಆರಂಭವಾಗುವುದಕ್ಕೂ ಮುನ್ನ ಈ ಪರೀಕ್ಷೆಯನ್ನು ಮುಂದೂಡಲಾಗಿತ್ತು.

ಪುಣೆ ಪೋಶೆ ಕಾರು ಅಪಘಾತ: ಫಡಣವೀಸ್ ಹೇಳಿಕೆ

‘ಪೊಲೀಸರ ವಿರುದ್ಧ ಕ್ರಮ ಅನಗತ್ಯ’

ಮುಂಬೈ (ಪಿಟಿಐ): ‘ಪುಣೆಯ ಬಹುಚರ್ಚಿತ ಪೋಶೆ ಕಾರು ಅಪಘಾತ ಪ್ರಕರಣದ ತನಿಖೆಯಲ್ಲಿ ಪುಣೆ ನಗರ ಪೊಲೀಸ್ ಕಮಿಷನರ್ ಅಮೃತೇಶ್ ಕುಮಾರ್ ಅವರು ಸಕ್ರಿಯ ಪಾತ್ರ ನಿಭಾಯಿಸಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂಬುದಕ್ಕೆ ಯಾವುದೇ ಸಮರ್ಥನೆಗಳಿಲ್ಲ’ ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಶುಕ್ರವಾರ ವಿಧಾನಸಭೆಯಲ್ಲಿ ಹೇಳಿದರು.

ಗಮನಸೆಳೆಯುವ ಸೂಚನೆ ಮೂಲಕ ಪ್ರಸ್ತಾಪವಾದ ಈ ವಿಷಯ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಅವರು ಈ ಮಾತು ಹೇಳಿದರು. ವಿರೋಧ ಪಕ್ಷದ ನಾಯಕ ವಿಜಯ್ ವಾಡೆಟ್ಟಿವಾರ್ ಅವರು, ಪೊಲೀಸ್ ಕಮಿಷನರ್ ರಾಜೀನಾಮೆಗೆ ಆಗ್ರಹಪಡಿಸಿದ್ದರು.

‘ನ್ಯಾಯ ಖರೀದಿಸಲು ಹಣ ಬಳಕೆಯಾಗಿದೆ’ ಎಂಬ ವಿಷಯ ಕುರಿತು ಫಡಣವೀಸ್ ಅವರು, ಇಂತಹದ್ದಕ್ಕೆ ಅವಕಾಶ ಇರಬಾರದು. ಇದನ್ನು ತಡೆಯಲು ಕಾಯ್ದೆಯನ್ನು ಬಲಪಡಿಸಬೇಕು. ಇದು, ಗಂಭೀರವಾದ ವಿಷಯ. ಹಾಗೆಂದು, ಪುಣೆ ಪೊಲೀಸರ ಬಗ್ಗೆ ನೈತಿಕತೆ ಕುಗ್ಗಿಸುವ ಅಗತ್ಯವಿಲ್ಲ. ಅವರು ಕ್ರಮಕೈಗೊಂಡಿದ್ದಾರೆ, ತಪ್ಪಿತಸ್ಥ ಪೊಲೀಸರಿದ್ದರೆ ಕ್ರಮಜ ರುಗಿಸಬೇಕು’ ಎಂದು ಹೇಳಿದರು.



ದೇವೇಂದ್ರ ಫಡಣವೀಸ್

ಇದೇ ಪ್ರಕರಣದಲ್ಲಿ ಸಾಸೂನ್ ಆಸ್ಪತ್ರೆಯ ಇಬ್ಬರು ವೈದ್ಯರು ₹3 ಲಕ್ಷ ಹಣವನ್ನು ಲಂಚವಾಗಿ ಪಡೆದು ರಕ್ತದ ಮಾದರಿಯನ್ನು ಬದಲಿಸಿದ್ದರು ಎಂದು ಫಡಣವೀಸ್ ಅವರು ಹೇಳಿದರು.

‘ಪ್ರತಿಯೊಂದು ಪ್ರಕರಣದಿಂದಲೂ ನಮಗೆ ವ್ಯವಸ್ಥೆಯಲ್ಲಿನ ಕೆಲ ಲೋಪ ಅರಿವಾಗುತ್ತವೆ. ಜುಲೈ1ರಿಂದ ಜಾರಿ ಯಾಗುವ ಹೊಸ ಕ್ರಿಮಿನಲ್ ಕಾಯ್ದೆಗಳು ನ್ಯಾಯಾಂಗ, ಪ್ರಯೋಗಾಲಯ, ತಾಂತ್ರಿಕ ಸಾಕ್ಷ್ಯ ಕುರಿತು ಹೆಚ್ಚಿನ ಒತ್ತು ನೀಡಲಿವೆ’ ಎಂದು ಹೇಳಿದರು.

ಮೇ 19ರಂದು ನಡೆದಿದ್ದ ಪೋಶೆ ಕಾರು ಅಪಘಾತದಲ್ಲಿ ಇಬ್ಬರು ಸಾಫ್ಟ್‌ವೇರ್ ವೃತ್ತಿಪರರು ಮೃತಪಟ್ಟಿದ್ದರು. ಪೊಲೀಸರ ಪ್ರಕಾರ, 17 ವರ್ಷದ ಬಾಲಕ ಕಾರು ಓಡಿಸುತ್ತಿದ್ದು, ಆತನನ್ನು ಬಂಧಿಸಿ ಬಾಲಮಂದಿರಕ್ಕೆ ಕಳುಹಿಸಲಾಗಿತ್ತು. ಹೈಕೋರ್ಟ್ ಆದೇಶದ ಅನುಸಾರ ಬಾಲಕನನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿತ್ತು.

ಮುಖ್ಯಮಂತ್ರಿ ವಿರುದ್ಧ ಎಂಎಲ್‌ಸಿ ಸಿ.ಟಿ.ರವಿ ಟೀಕೆ

‘ನೈತಿಕತೆ ಇದ್ದರೆ ರಾಜೀನಾಮೆ ಕೊಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ನಿಗಮದ ಹಗರಣ ಮುಖ್ಯಮಂತ್ರಿ ಅವರ ಇಲಾಖೆ ವ್ಯಾಪ್ತಿಯಲ್ಲೇ ನಡೆದ ಬಹುದೊಡ್ಡ ಹಗರಣ. 100 ಕ್ಕೆ ನೂರಷ್ಟು ಹಣ ವರ್ಗಾಯಿಸಿ ಲೂಟಿ ಮಾಡಿದ ಹಗರಣ. ಆದರೆ, ಸಿದ್ದರಾಮಯ್ಯ ಅವರು ನೈತಿಕತೆ ಇಲ್ಲದಂತೆ ವರ್ತಿಸುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಮುಖ್ಯಮಂತ್ರಿಯವರು ನೈತಿಕ ಹೊಣೆ ಹೊರಲು ಹಿಂದೇಟು ಹಾಕುತ್ತಿದ್ದು, ಮುಚ್ಚಿಹಾಕಲು ಮುಂದಾಗಿದ್ದಾರೆ. ಈ ಸಂಬಂಧ ನಾವು ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸಿ ರಾಜೀನಾಮೆಗೆ ಆಗ್ರಹಿಸಿದ್ದೇವೆ’ ಎಂದು ಹೇಳಿದರು.

‘ಸರ್ಕಾರದ ತನಿಖೆಯ ಬಗ್ಗೆ ನಮಗೆ ಸಂಶಯವಿದೆ. ಇದು ಬಹು ರಾಜ್ಯಗಳಿಗೆ ಸಂಬಂಧಿಸಿದ ಹಗರಣ. ಆಂಧ್ರ, ತೆಲಂಗಾಣದಲ್ಲೂ ಆರೋಪಿಗಳಿದ್ದಾರೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾವು ಸಿಬಿಐ ತನಿಖೆಗೆ ಕೋರಿ ಪತ್ರ ಬರೆದಿದೆ. ಆದರೂ, ಕರ್ನಾಟಕ ಸರ್ಕಾರ ಸಿಬಿಐ ತನಿಖೆಗೆ ಇದನ್ನು ಅಧಿಕೃತವಾಗಿ ವಹಿಸಿಲ್ಲವೇಕೆ’ ಎಂದು ರವಿ ಪ್ರಶ್ನಿಸಿದರು.

‘ಮಾಜಿ ಸಚಿವ ನಾಗೇಂದ್ರ ಸಂಬಂಧಿಯೂ ಆಗಿರುವ ಸಿರಗುಪ್ಪದ ಅಭ್ಯರ್ಥಿ ಮುರಳಿ ಪಾತ್ರವೇನು? ಈ ಬಗ್ಗೆ ತನಿಖೆ ಆಗಬೇಕಲ್ಲವೇ? ನಿಗಮಗಳ ಕಾಮಗಾರಿಯಲ್ಲೂ ನೆಕ್ಕುಂಟಿ ನಾಗರಾಜ್ ಪಾತ್ರವಿದೆ. ಅಲ್ಲದೇ, ನೆಕ್ಕುಂಟಿ ನಾಗರಾಜ್ ಅವರ ಮಾವನಿಗೆ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುವ ಗುತ್ತಿಗೆ ಪಡೆದಿದ್ದಾರೆ’ ಎಂದು ಆರೋಪಿಸಿದರು.

‘ಈ ಹಗರಣದಲ್ಲಿ ನಾಗೇಂದ್ರ ಅವರನ್ನು ರಕ್ಷಿಸಲು ಸರ್ಕಾರ ಪ್ರಯತ್ನ ನಡೆಸಿದೆ. ನಾಗೇಂದ್ರ ಅವರನ್ನು ಮುಟ್ಟಿದರೆ ಅವರು ಯಾರ್‍ಯಾರಿಗೆ ಹಣ ಕೊಟ್ಟಿದ್ದಾಗಿ ಬಾಯಿ ಬಿಡುವ ಭಯದಿಂದ ಅವರ ರಕ್ಷಣೆಗೆ ಮುಂದಾಗಿದೆ. ಈವರೆಗೆ 11 ಜನರ ಬಂಧನವಾಗಿದ್ದು, ₹14.07 ಕೋಟಿ ಮಾತ್ರ ಜಪ್ತಿ ಮಾಡಲಾಗಿದೆ. ಬಾಕಿ ಹಣ ಎಲ್ಲಿ ಹೋಗಿದೆ’ ಎಂದು ಅವರು ಪ್ರಶ್ನಿಸಿದರು.

‘ವಿನಯ ಕುಲಕರ್ಣಿ ಜತೆ ಮನಸ್ತಾಪ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕ ವಿನಯ ಕುಲಕರ್ಣಿ ಜತೆ ನನಗೆ ಮನಸ್ತಾಪ ಇಲ್ಲ. ನಾವು ಜಗಳವನ್ನೂ ಆಡಿಕೊಂಡಿಲ್ಲ. ಹೀಗಾಗಿ ಸಂಧಾನದ ಪ್ರಶ್ನೆ ಉದ್ಭವಿಸುವುದೇ ಇಲ್ಲ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ತಮ್ಮ ವಿರುದ್ಧ ವಿನಯ ಪಕ್ಷದ ವರಿಷ್ಠರಿಗೆ ದೂರು ನೀಡಿದ್ದಾರೆ ಎಂಬ ಸುದ್ದಿ ಕುರಿತು ಪತ್ರಕರ್ತರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಸಚಿವರು, ‘ಅವರು ನನ್ನ ಸ್ನೇಹಿತರು. ನನ್ನ ಇಲಾಖೆಯ ಅಧೀನದ ನೀರು ಪೂರೈಕೆ ನಿಗಮದ ಅಧ್ಯಕ್ಷರಾಗಿದ್ದಾರೆ. ನನ್ನ ವಿರುದ್ಧ ದೂರು ಕೊಟ್ಟಿದ್ದರೆ ಅದರ ಪ್ರತಿ ಕೊಡಿ. ಆ ಬಳಿಕ ನಾನು ಮಾತನಾಡುತ್ತೇನೆ’ ಎಂದರು.



ಬೈರತಿ ಸುರೇಶ್

ಶಾಸಕರ ಬೆಂಬಲಿಗರ ಗುತ್ತಿಗೆದಾರರನ್ನು ಸಚಿವರು ಕಪ್ಪು ಪಟ್ಟಿಗೆ ಸೇರಿಸಿದ್ದಾರೆ ಎಂಬ ಆರೋಪದ ಬಗ್ಗೆ ಕೇಳಿದಾಗ, ‘ಯಾರೇ ಕಳ್ಳರಿದ್ದರೂ ಅವರನ್ನು ಕಪ್ಪು ಪಟ್ಟಿಗೆ ಸೇರಿಸುತ್ತೇನೆ. ಈವರೆಗೆ ಯಾರನ್ನೂ ಕಪ್ಪು ಪಟ್ಟಿಗೆ ಸೇರಿಸಿಲ್ಲ. ನಿಮ್ಮ ಬಳಿ ಮಾಹಿತಿ ಇದ್ದರೆ ಕೊಡಿ. ನಾಳೆಯೇ ಆ ಕೆಲಸ ಮಾಡುತ್ತೇನೆ. ತಪ್ಪು ಮಾಡಿದವರನ್ನು ಜೈಲಿಗೂ ಕಳಿಸುವೆ ’ ಎಂದು ಹೇಳಿದರು.

‘ಟೆಂಡರ್ ಅನುಮೋದನೆ ವಿಚಾರದಲ್ಲಿ ಮುಖ್ಯಮಂತ್ರಿ, ಮಂತ್ರಿಗಳಿಗೆ ಕೂಡ ಅಧಿಕಾರ ಇಲ್ಲ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ದರ್ಜೆಯ ಅಧಿಕಾರಿಗಳಿರುವ ಉನ್ನತ ಮಟ್ಟದ ಸಮಿತಿ ಎಲ್ಲವನ್ನೂ ನಿರ್ಧರಿಸುತ್ತದೆ. ರಾಜಕಾರಣಿಗಳಿಗೆ ಯಾವ ಅಧಿಕಾರವೂ ಇಲ್ಲ. ನಾನು ಯಾವುದೇ ಸೂಚನೆ ನೀಡಿಲ್ಲ’ ಎಂದರು.

‘ವಿನಯ ಅವರೇ ನಿಗಮದ ಆಡಳಿತ ಮಂಡಳಿ ಅಧ್ಯಕ್ಷರಿದ್ದಾರೆ. ಮಂಡಳಿಗೆ ಸೂಚನೆ ನೀಡುವ ಅಧಿಕಾರ ನನಗೂ ಇಲ್ಲ, ಅವರಿಗೂ ಇಲ್ಲ. ಎಲ್ಲವನ್ನೂ ಅಧಿಕಾರಿಗಳು ಮಾಡುತ್ತಾರೆ. ಯಾವುದೇ ತಪ್ಪುಗಳಾಗಿದ್ದರೆ ಸಚಿವನಾಗಿ ಸರಿಪಡಿಸುವ ಕೆಲಸ ಮಾಡುತ್ತೇನೆ’ ಎಂದು ಹೇಳಿದರು.

ಬಜೆಟ್‌ನಲ್ಲಿ ರೈಲ್ವೆ ಯೋಜನೆ ಸೇರ್ಪಡೆ: ಅಶ್ವಿನಿ ವೈಷ್ಣವ್

ನವದೆಹಲಿ: ಹೆಜ್ಜಾಲ- ಚಾಮರಾಜನಗರ ನಡುವಿನ ರೈಲ್ವೆ ಯೋಜನೆಯನ್ನು ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಸೇರಿಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಮಳವಳ್ಳಿ ಕ್ಷೇತ್ರದ ಮಾಜಿ ಶಾಸಕ ಕೆ.ಅನ್ನದಾನಿ ಬರೆದಿದ್ದ ಪತ್ರಕ್ಕೆ ಸ್ಪಂದಿಸಿರುವ ಸಚಿವರು, ಈ ಬಗ್ಗೆ ಮಂಡ್ಯ ಲೋಕಸಭೆ ಕ್ಷೇತ್ರದ ಸಂಸದರೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಹೆಜ್ಜಾಲ - ಚಾಮರಾಜನಗರ ನಡುವಿನ ಮಾರ್ಗವು ಕನಕಪುರ, ಮಳವಳ್ಳಿ, ಕೊಳ್ಳೇಗಾಲ, ಯಳಂದೂರು ಮಾರ್ಗವಾಗಿ ಹಾದು ಹೋಗಲಿದ್ದು, ಈ ಯೋಜನೆ ಈ ಭಾಗದ ಜನರ ಬಹುದಿನಗಳ ಕನಸಾಗಿದೆ. ಈ ರೈಲು ಮಾರ್ಗವನ್ನು ಮಂಜೂರು ಮಾಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೂ ಮನವಿ ಮಾಡಿದ್ದರು.

ಕಾಯಂ ಶಿಕ್ಷಕರ ನೇಮಕ: ಮಂಡ್ಯದಲ್ಲಿರುವ ಕೇಂದ್ರೀಯ ವಿದ್ಯಾಲಯಕ್ಕೆ ಕಾಯಂ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಪೆರೋಲ್ ಕೋರಿಕೆ ನಿಯಮ ಪ್ರಶ್ನೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಜಾ ಬಂದಿ ಅಪರಾಧಿಗಳ ಜಾಮೀನು ಅರ್ಜಿ ಅಥವಾ ಮೇಲ್ಮನವಿ ವಿಚಾರಣೆಗೆ ಬಾಕಿ ಇದ್ದಾಗ ಅವರ ಪೆರೋಲ್ ಕೋರಿಕೆಯನ್ನು ಪರಿಗಣಿಸಬಾರದು’ ಎಂಬ ನಿಯಮ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್‌ನ ಕಾನೂನು ಸೇವಾ ಸಮಿತಿ ಕಾರ್ಯದರ್ಶಿ ಎಸ್.ಯು.ಶ್ಯಾಮ್‌ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಮಮತಾ ವಿರುದ್ಧ ಬೋಸ್ ಮಾನನಷ್ಟ ಮೊಕದ್ದಮೆ

ಕೋಲ್ಕತ್ತ(ಪಿಟಿಐ): ರಾಜಭವನ ಕುರಿತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ನೀಡಿದ್ದಾರೆ ಎನ್ನಲಾದ ಅಸಹ್ಯಕರ ಹೇಳಿಕೆಗೆ ಸಂಬಂಧಿಸಿ ಅವರ ವಿರುದ್ಧ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಶುಕ್ರವಾರ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

‘ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿಯ ಕೆಲ ಮುಖಂಡರ ವಿರುದ್ಧ ಕಲ್ಕತ್ತ ಹೈಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ರಾಜಭವನದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಕಾರಣದಿಂದಾಗಿ ಅಲ್ಲಿಗೆ ಹೋಗಲು ಹೆದರಿಕೆಯಾಗುತ್ತಿದೆ ಎಂಬುದಾಗಿ ಮಹಿಳೆಯರು ನನ್ನ ಬಳಿ ದೂರಿದ್ದಾರೆ’ ಎಂದು ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಮತಾ ಬ್ಯಾನರ್ಜಿ ಹೇಳಿದ್ದರು. ಇದರ ಬೆನ್ನಲ್ಲೇ, ಅವರ ವಿರುದ್ಧ ರಾಜ್ಯಪಾಲ ಬೋಸ್ ಪ್ರಕರಣ ದಾಖಲಿಸಿದ್ದಾರೆ.

ರಾಜ್ಯಪಾಲ ಬೋಸ್ ಅವರು ತನ್ನ ಮೇಲೆ ಲೈಂಗಿಕ ಹಲ್ಲೆ ನಡೆಸಿದ್ದಾಗಿ ರಾಜಭವನದಲ್ಲಿ ಗುತ್ತಿಗೆ ಆಧಾರದಲ್ಲಿ ನೌಕರಿ ಮಾಡುತ್ತಿರುವ ಮಹಿಳೆಯೊಬ್ಬರು ಮೇ 2ರಂದು ಆರೋಪಿಸಿದ್ದರು. ಈ ಕುರಿತು ಕೋಲ್ಕತ್ತ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಚನ್ನಗಿರಿಯಿಂದ ತಿರುಪತಿಗೆ ತೆರಳಿದ ಸರ್ಕಾರಿ ಅಧಿಕಾರಿಗಳ ದಂಡು

ಶಾಸಕರ ಜನ್ಮದಿನ; ಅಧಿಕಾರಿಗಳ ಸಾಮೂಹಿಕ ರಜೆ?

ಪ್ರಜಾವಾಣಿ ವಾರ್ತೆ

ಚನ್ನಗಿರಿ (ದಾವಣಗೆರೆ ಜಿಲ್ಲೆ): ಪಟ್ಟಣದಲ್ಲಿರುವ ತಾಲ್ಲೂಕು ಮಟ್ಟದ 33ಕ್ಕೂ ಅಧಿಕ ಸರ್ಕಾರಿ ಕಚೇರಿಗಳ ಪೈಕಿ ಬಹುತೇಕ ಕಚೇರಿಗಳಲ್ಲಿ ಶುಕ್ರವಾರ ಹಿರಿಯ ಅಧಿಕಾರಿಗಳು ಇರಲಿಲ್ಲ. ಕಾರ್ಯನಿಮಿತ್ಯ ಕಚೇರಿಗೆ ಬಂದಿದ್ದ ಸಾರ್ವಜನಿಕರು ಕೇಳಿದರೆ, ‘ಸಾಹೇಬರು ರಜೆ ಹಾಕಿದ್ದಾರೆ’ ಎಂದು ಸಿಬ್ಬಂದಿ ಹೇಳುತ್ತಿರುವುದು ಕಂಡುಬಂತು.

ಶುಕ್ರವಾರ ಚನ್ನಗಿರಿ ಶಾಸಕ ಬಸವರಾಜು ಶಿವಗಂಗಾ ಅವರ ಜನ್ಮದಿನ. ಅದನ್ನು ತಿರುಪತಿ ಸಮೀಪದ ರೆಸಾರ್ಟ್ ಒಂದರಲ್ಲಿ ಆಚರಿಸಲು ಎಲ್ಲ ಪ್ರಮುಖ ಹಿರಿಯ ಅಧಿಕಾರಿಗಳು ರಜೆ ಹಾಕಿ ಅಲ್ಲಿಗೆ ತೆರಳಿದ್ದಾರೆ ಎಂದು ತಿಳಿದುಬಂದಿದೆ.

ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಕಾರ್ಯ ನಿಮಿತ್ತ ಬೆಳಿಗ್ಗೆಯಿಂದಲೇ ತಾಲ್ಲೂಕು ಮಟ್ಟದ ಕಚೇರಿಗಳಿಗೆ ಬಂದ ಸಾರ್ವಜನಿಕರು, ಪ್ರಮುಖ ಅಧಿಕಾರಿ ಇಲ್ಲ ಎನ್ನುವುದನ್ನು ಕೇಳಿ ಬೇಸರದಿಂದಲೇ ಮರಳಿದರು. ‘ಇನ್ನೊಂದು ದಿನ ದುಡ್ಡು ಖರ್ಚು ಮಾಡಿಕೊಂಡು, ನಾವೂ ರಜೆ ಹಾಕಿ ಮತ್ತೆ ಬರಬೇಕಲ್ಲ?’ ಎಂದು ಗೊಣಗಿಕೊಂಡು ವಾಪಸಾಗುತ್ತಿದ್ದ ದೃಶ್ಯ ಸಾಮಾನ್ಯವಾಗಿ ಕಂಡುಬಂತು.

ತಹಶೀಲ್ದಾರ್, ತಾ.ಪಂ. ಇ.ಒ, ಪುರಸಭೆ ಮುಖ್ಯಾಧಿಕಾರಿ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ, ಪಶು ವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ, ಕ್ಷೇತ್ರ ಶಿಕ್ಷಣಾಧಿಕಾರಿ, ತಾಲ್ಲೂಕು ವೈದ್ಯಾಧಿಕಾರಿ, ಸರ್ಕಾರಿ ಸಮುದಾಯ ಆಸ್ಪತ್ರೆಯ ವೈದ್ಯಾಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಲೋಕೋಪಯೋಗಿ ಇಲಾಖೆಯ ಕೆಲವು ಎಂಜಿನಿಯರ್‌ಗಳು ಹಾಗೂ ಕೆಲವು ಇಲಾಖೆಗಳ ಅಧಿಕಾರಿಗಳು ಸೇರಿ ಕೆಳಹಂತದ ಕೆಲವು ಅಧಿಕಾರಿಗಳು, ಸಹಾಯಕ ಸಿಬ್ಬಂದಿ ರಜೆ ಹಾಕಿ ಹೋಗಿದ್ದಾಗಿ ಗೊತ್ತಾಗಿದ್ದು, ಕೆಲವರು ವೈಯಕ್ತಿಕ ಕಾರಣ ಮುಂದಿರಿಸಿ ರಜೆ ಹಾಕಿದ್ದರು ಎನ್ನಲಾಗಿದೆ.



ರಜೆಗೆ ನನ್ನಿಂದ ಯಾರೂ ಅನುಮತಿ ಪಡೆದಿಲ್ಲ. ಸಾಮೂಹಿಕವಾಗಿ ರಜೆ ಹಾಕಿರುವ ಬಗ್ಗೆ ಮಾಹಿತಿ ಬಂದಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದು

ಡಾ.ಎಂ.ವಿ.ವೆಂಕಟೇಶ್, ಜಿಲ್ಲಾಧಿಕಾರಿ

‘ಗುರುವಾರ ಬೆಳಿಗ್ಗೆ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ನಂತರ ಶಿವಮೊಗ್ಗದಿಂದ ವಿಮಾನದ ಮೂಲಕ ತಿರುಪತಿಗೆ ಹೋಗಿದ್ದಾರೆ. ಇನ್ನು ಕೆಲವರು ಜನ್ಮದಿನ ಆಚರಣೆಯ ಸಕಲ ವ್ಯವಸ್ಥೆ ಮಾಡಲು ಎರಡು ದಿನಗಳ ಹಿಂದೆಯೇ ರೆಸಾರ್ಟ್ ತಲುಪಿದ್ದಾರೆ’ ಎಂದು ಸರ್ಕಾರಿ ಕಚೇರಿಯೊಂದರಲ್ಲಿದ್ದ ಸಿಬ್ಬಂದಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಧಿಕಾರಿಗಳಿಗೆ ಜನರ ಕೆಲಸಕ್ಕಿಂತ ಕ್ಷೇತ್ರದ ಶಾಸಕರ ಜನ್ಮದಿನಾಚರಣೆ ಸಮಾರಂಭದಲ್ಲಿ ಪಾಲ್ಗೊಳ್ಳುವುದೇ ಮುಖ್ಯ ಎಂಬಂತಿದೆ’ ಎಂದು ತಹಶೀಲ್ದಾರ್ ಕಚೇರಿಗೆ ಬಂದಿದ್ದ ತಾಲ್ಲೂಕಿನ ದಾಗಿನಕಟ್ಟೆ ಗ್ರಾಮದ ವಾಸಿ ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ನಾನು ರಜೆ ಹಾಕಿದ್ದೆ. ಸಂಜೆ ಚನ್ನಗಿರಿಗೆ ಮರಳಿದ್ದೇನೆ ಎಂದು ತಹಶೀಲ್ದಾರ್ ಪಿ.ಎಸ್. ಎರಿಸ್ವಾಮಿ ಪ್ರತಿಕ್ರಿಯಿಸಿದರೆ, ತಾಲ್ಲೂಕು ಪಂಚಾಯಿತಿ ಇ.ಒ ಉತ್ತಮ್ ಬಿ.ಕೆ. ಅವರು ರಜೆ ಹಾಕಿದ್ದಾಗಿ ತಿಳಿಸಿದ್ದಾರೆ. ‘ರಜೆ ಹಾಕಿಲ್ಲ ಜಿಲ್ಲಾಧಿಕಾರಿಯವರು ಕರೆದಿದ್ದ ಸಭೆಗೆ ತೆರಳಿದ್ದೆ. ಚನ್ನಗಿರಿಗೆ ಮರಳಿದ್ದೇನೆ’ ಎಂದು ಪುರಸಭೆ ಮುಖ್ಯಾಧಿಕಾರಿ ಕೃಷ್ಣಾ ಕಟ್ಟೀಮನಿ ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ

‘ಸಿಎಂ–ಡಿಸಿಎಂ ಹುದ್ದೆಗೆ ಹೊಡೆದಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಹುದ್ದೆಗಳ ವಿಚಾರವನ್ನು ಸಚಿವರ ಮೂಲಕ ಮುನ್ನಲೆಗೆ ತಂದವರೇ ಮುಖ್ಯಮಂತ್ರಿ ಸಿದ್ದರಾಮಯ್ಯ. ಮುಖ್ಯಮಂತ್ರಿ –ಉಪ ಮುಖ್ಯಮಂತ್ರಿ ಹುದ್ದೆಗಳ ಕುರಿತು ಮುಂದಿನ ದಿನಗಳಲ್ಲಿ ಹಾದಿಬೀದಿಗಳಲ್ಲಿ ಹೊಡೆದಾಟ ನಡೆದರೂ ಅಚ್ಚರಿ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರನ್ನು ಬಲಿಕೊಡುವ ಉದ್ದೇಶದಿಂದಲೇ ಮುಖ್ಯಮಂತ್ರಿ ಈ ವಿಚಾರ ಪ್ರಸ್ತಾಪ ಮಾಡಿಸಿದ್ದಾರೆ. ಜನರ ಸಮಸ್ಯೆಗಳನ್ನು ಕೇಳಲು ಇವರಿಗೆ ಸಮಯವೇ ಇಲ್ಲ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರು ಎಷ್ಟು ದಿನ ಮುಖ್ಯಮಂತ್ರಿ ಆಗಿರುತ್ತಾರೋ ಗೊತ್ತಿಲ್ಲ. ಈಗ ಅವರ ಬುಡಕ್ಕೇ ಬಂದಿದೆ. ಹೀಗಾಗಿ ರಾಜ್ಯದ ಅಭಿವೃದ್ಧಿ ಮತ್ತು ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿದರೆ ಉಡಾಫೆ ಉತ್ತರ ಕೊಡುತ್ತಾರೆ. ಜನ ಕಾಂಗ್ರೆಸ್ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಮುಖ್ಯಮಂತ್ರಿ ಹುದ್ದೆಯ ವಿಚಾರದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಚಿವರು ಹಾದಿ ಬೀದಿಯಲ್ಲಿ ಹೊಡೆದಾಡುವ ಮಟ್ಟಕ್ಕೆ ಬಂದಿದೆ ಎಂದು ವಿಜಯೇಂದ್ರ ಹೇಳಿದರು.

ಲೋಕಸಭಾ ಚುನಾವಣೆಗೂ ಮೊದಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಒಟ್ಟಿಗೆ ಹೋಗುವುದೇನು, ತಿಂಡಿ ತಿನ್ನಿಸುವುದೇನು ಈಗ ಪರಸ್ಪರ ಹೊಡೆದಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ. ಪರಸ್ಪರ ಬುಡ ಕೊಯ್ಯುವ ಕೆಲಸದಲ್ಲಿ ನಿರತರಾಗಿದ್ದಾರೆ. ಮುಂದೆ ಏನೇನು ಆಗುತ್ತದೆ ಕಾದು ನೋಡಬೇಕು ಎಂದು ವ್ಯಂಗ್ಯವಾಗಿ ನುಡಿದರು.

‘ನಾವು ಜನರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ನಿರಂತರ ಹೋರಾಟ ಮಾಡುತ್ತೇವೆ. ಇದರ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತೇವೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಸಂಬಂಧ ಸತ್ಯನಾರಾಯಣ ಅವರು ಆರೋಪಗಳನ್ನು ಮಾಡಿದ್ದಾರೆ. ಆದರೆ ಮಾಜಿ ಸಚಿವ ನಾಗೇಂದ್ರ ಅವರನ್ನು ಇನ್ನೂ ವಿಚಾರಣೆಗೆ ಒಳಪಡಿಸಿಲ್ಲ. ಎಸ್ಐಟಿಗೆ ಆ ಧೈರ್ಯವೇ ಇಲ್ಲ.

ಈ ವಿಚಾರದಲ್ಲಿ ನ್ಯಾಯಾಲಯ ಸರ್ಕಾರಕ್ಕೆ ಛೀಮಾರಿ ಹಾಕಿದೆ’ ಎಂದು ಅವರು ಕಿಡಿಕಾರಿದರು.



ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹುದ್ದೆ ಕುರಿತು ನಾಯಕರು ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕೆ ಹೊರತು ಸಾರ್ವಜನಿಕವಾಗಿ ಚರ್ಚಿಸುತ್ತಿರುವುದು ಪಕ್ಷ, ರಾಜ್ಯದ ಹಿತದೃಷ್ಟಿಯಿಂದ ಸರಿಯಲ್ಲ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

‘ಡಿಕೆಶಿ ಮುಖ್ಯಮಂತ್ರಿ ಆಗುವುದು ಪಕ್ಕಾ’

ದಾವಣಗೆರೆ: ‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಅವಧಿಯಲ್ಲೇ ಮುಖ್ಯಮಂತ್ರಿ ಆಗುವುದು ಪಕ್ಕಾ. ಈ ಬಗ್ಗೆ ಯಾವುದೇ ಸಂಶಯ ಇಲ್ಲ’ ಎಂದು ಚನ್ನಗಿರಿ ಶಾಸಕ ಬಸವರಾಜು ಶಿವಗಂಗಾ ಹೇಳಿದರು.

‘ಒಕ್ಕಲಿಗ ಸಮುದಾಯದ ಸ್ವಾಮೀಜಿ ಹೇಳಿರುವುದು ಸರಿಯಿದೆ. ಡಿ.ಕೆ. ಶಿವಕುಮಾರ್ ಅವರ ಸಂಘಟನಾ ಶಕ್ತಿಯಿಂದಲೇ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು, ಅವರೇ ಮುಖ್ಯಮಂತ್ರಿ ಆಗಬೇಕಿತ್ತು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಡಿಸಿಎಂ ಆಗಿದ್ದಾರೆ’ ಎಂದು ನಗರದಲ್ಲಿ ಶುಕ್ರವಾರ ಸಂಜೆ ಸುದ್ದಿಗಾರರಿಗೆ ತಿಳಿಸಿದರು.

‘ಡಿ.ಕೆ.ಶಿವಕುಮಾರ್ ಅವರಿಗೆ ಅನೇಕ ಶಾಸಕರ ಬೆಂಬಲ ಇದೆ. ಅವರ ಹೆಸರನ್ನು ಪ್ರಸ್ತಾಪ ಮಾಡುವುದಿಲ್ಲ. ರಾಜ್ಯದ ಎಲ್ಲ ಸಮುದಾಯಗಳ ಪರವಾಗಿ ಸಮರ್ಥ ನಾಯಕ ಎಂಬ ಕಾರಣಕ್ಕೆ ಡಿ.ಕೆ. ಶಿವಕುಮಾರ್ ಅವರನ್ನು ಡಿಸಿಎಂ ಮಾಡಲಾಗಿದೆ’ ಎಂದು ಹೇಳಿದರು.

ಸ್ವಾಮೀಜಿಗಳಿಗೂ ರಾಜಕೀಯಕ್ಕೂ ಸಂಬಂಧವಿಲ್ಲ: ಕೆ.ವೆಂಕಟೇಶ

ರಾಯಚೂರು: ‘ಸ್ವಾಮೀಜಿಗಳಿಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಚಂದ್ರಶೇಖರನಾಥ ಸ್ವಾಮೀಜಿ ತಿಳಿವಳಿಕೆಯಿಂದ ಮಾತನಾಡಿದ್ದಾರೋ, ತಿಳಿವಳಿಕೆ ಇಲ್ಲದೆ ಮಾತನಾಡಿದ್ದಾರೋ ಗೊತ್ತಿಲ್ಲ. ಅವರು ರಾಜಕೀಯ ಮಾತನಾಡಬಾರದಿತ್ತು’ ಎಂದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ ಅಭಿಪ್ರಾಯಪಟ್ಟರು.

‘ಸ್ವಾಮೀಜಿ ಏಕೆ ರಾಜಕೀಯದ ಬಗ್ಗೆ ಮಾತನಾಡಬೇಕು? ಇದು ಸರಿಯಲ್ಲ. ರಾಜ್ಯದಲ್ಲಿ ಮೂರು ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಬೇಕು ಎನ್ನುವ ವಿಚಾರ ಅಲ್ಲಲ್ಲಿ ಪ್ರಸ್ತಾಪ ವಾಗುತ್ತಿದೆ. ಈ ವಿಷಯದ ಬಗ್ಗೆ ಏನೂ ಹೇಳಲಾರೆ. ಇದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಕೆಲವರು ಏಕೆ ಬಹಿರಂಗ ಹೇಳಿಕೆ ಕೊಡುತ್ತಿದ್ದಾರೋ ಗೊತ್ತಿಲ್ಲ’ ಎಂದರು.

‘ಕಾಂಗ್ರೆಸ್ ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ ಎನ್ನುವ ನಿಯಮ ಇದೆ. ಆದರೆ, ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿಯೂ ಮುಂದುವರಿಯುತ್ತಿದ್ದಾರೆ’ ಎಂದು ಹೇಳಿದರು.

‘ಹೈಕಮಾಂಡ್ ಶಿಸ್ತುಕ್ರಮ ಜರುಗಿಸಲಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹುಬ್ಬಳ್ಳಿ: ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ ಅವರಿಗೆ ಬಿಟ್ಟುಕೊಡಬೇಕು’ ಎಂದು ಚಂದ್ರಶೇಖರನಾಥ ಸ್ವಾಮೀಜಿ ಅವರು ಗುರುವಾರ ಹೇಳಿಕೆ ನೀಡಿದ ಬೆನ್ನಲ್ಲೇ ಈ ಬಗ್ಗೆ ಪರ- ವಿರೋಧ ಚರ್ಚೆಗಳು ಆರಂಭವಾಗಿದೆ. ಉಪಮುಖ್ಯಮಂತ್ರಿ ಸ್ಥಾನದ ಬೇಡಿಕೆ ಚರ್ಚೆಯೂ ಮುಂದುವರಿದಿದೆ.

‘ಯಾವುದೇ ಹುದ್ದೆಗಳ ಬಗ್ಗೆ ಚರ್ಚೆ ನಾಲ್ಕು ಗೋಡೆಗಳ ಮಧ್ಯೆ ನಡೆಯಬೇಕು. ಮಾಧ್ಯಮಗಳ ಮೂಲಕ ಜನರ ಎದುರು ಹೋಗಬಾರದು. ಈ ಹುದ್ದೆಗಳನ್ನು ಸಾರ್ವಜನಿಕ ಸ್ಥಳ ಅಥವಾ ಮಾರುಕಟ್ಟೆಯಲ್ಲಿ ಸೃಷ್ಟಿಸಲು ಆಗುವುದಿಲ್ಲ’ ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ತಿಳಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಯಾವುದೇ ಆರೋಪ, ದೂರುಗಳಿಲ್ಲ. ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅನಗತ್ಯ ಚರ್ಚೆಗಳು ಬೇಡ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ವೀರಶೈವ ಲಿಂಗಾಯತರೇ ಆಗಲಿ’: ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಅಥವಾ ಇನ್ನಷ್ಟು ಉಪ ಮುಖ್ಯಮಂತ್ರಿಗಳ ಸ್ಥಾನ ಸೃಷ್ಟಿಸುವುದಾದರೆ ವೀರಶೈವ ಲಿಂಗಾಯತರಿಗೆ ಆದ್ಯತೆ ನೀಡಬೇಕು’ ಎಂದು ಯಡೂರ-ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಗ್ರಹಿಸಿದರು.



ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ

ಚಿಕ್ಕೋಡಿ ತಾಲ್ಲೂಕಿನ ಯಡೂರು ಗ್ರಾಮದಲ್ಲಿ ಶುಕ್ರವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ವೀರಶೈವ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ನಮ್ಮ ಸಮುದಾಯದ ಸಚಿವರಾದ ಎಂ.ಬಿ.ಪಾಟೀಲ, ಈಶ್ವರ ಖಂಡ್ರೆ, ಎಸ್.ಎಸ್.ಮಲ್ಲಿಕಾರ್ಜುನ, ಶಾಮನೂರು ಶಿವಶಂಕರಪ್ಪ ಅವರಂಥವರಿಗೆ ಅವಕಾಶ ನೀಡಬೇಕು’ ಎಂದರು.

‘ಈ ಬೆಳವಣಿಗೆ ಬಗ್ಗೆ ಕಾಶಿ, ಉಜ್ಜಯಿನಿ ಸೇರಿ ಪಂಚಪೀಠದ ಪೀಠಾಧಿಪತಿಗಳ ಜತೆ ಚರ್ಚಿಸಲಾಗಿದೆ. ಮುಖ್ಯಮಂತ್ರಿ ಸ್ಥಾನ ಬದಲಾವಣೆ ಬಗ್ಗೆ ಕಾಂಗ್ರೆಸ್‌ನಲ್ಲಿ ಮುಂಚಿತವಾಗಿಯೇ ಒಡಂಬಡಿಕೆ ಆಗಿದ್ದರೆ ಅದರ ಪ್ರಕಾರ ನಡೆದುಕೊಳ್ಳಲಿ’ ಎಂದು ಹೇಳಿದರು.

‘ಚರ್ಚೆ ಅಪ್ರಸ್ತುತ’

‘ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಕಾಂಗ್ರೆಸ್‌ನ ಎರಡು ಕಣ್ಣುಗಳು. ಮುಖ್ಯಮಂತ್ರಿ ಯಾರು ಆಗಬೇಕು ಎಂಬುದು ಈಗ ಅಪ್ರಸ್ತುತ. 136 ಶಾಸಕರ ಅಭಿಪ್ರಾಯ ಅನುಸಾರ ಮುಖ್ಯಮಂತ್ರಿ ಆಗಿರುವ ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನೀಡುತ್ತಿದ್ದಾರೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.



ಲಕ್ಷ್ಮಿ ಹೆಬ್ಬಾಳಕರ

‘ಸಿದ್ದರಾಮಯ್ಯ ನಮ್ಮ ‘ಮಾಸ್ ಲೀಡರ್’. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಡಿ.ಕೆ. ಶಿವಕುಮಾರ್ ರಾಜ್ಯವ್ಯಾಪಿ ಸುತ್ತಾಡಿ, ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ. ಕೊರೊನಾ ವ್ಯಾಪಿಸಿದ್ದ ದಿನಗಳಲ್ಲಿ ಅವರು ಜನರ ಮಧ್ಯೆ ಇದ್ದು ಕೆಲಸ ಮಾಡಿದ್ದಾರೆ. ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ’ ಎಂದು ತಿಳಿಸಿದರು.

ಸಸ್ಯಜನ್ಯ ಕೈಚೀಲ ಬಳಕೆ: ನಿಯಮ ತಿದ್ದುಪಡಿಗೆ ಸೂಚನೆ

ಬೆಂಗಳೂರು: ಜೈವಿಕವಾಗಿ ವಿಘಟನೆಯಾಗಿ, 180 ದಿನಗಳಲ್ಲಿ ಕರಗಿಹೋಗುವ ಸಸ್ಯ ಜನ್ಯ ಪಾಲಿ ಲಿಕ್ವಿಡ್ ಆ್ಯಸಿಡ್ ಪಾಲಿಮರ್ ಕೈಚೀಲಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲು ಕಾನೂನು ತಿದ್ದುಪಡಿಗೆ ತುರ್ತಾಗಿ ಪ್ರಸ್ತಾವ ಸಲ್ಲಿಸುವಂತೆ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಶುಕ್ರವಾರ ಸಭೆ ನಡೆಸಿದ ಅವರು, ‘ಏಕ ಬಳಕೆ ಪ್ಲಾಸ್ಟಿಕ್‌ನಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಸಸ್ಯಜನ್ಯ ಕೈಚೀಲಗಳ ಬಳಕೆಗೆ ಒತ್ತು ನೀಡಬೇಕಿದೆ. ಇದಕ್ಕಾಗಿ 2016ರಲ್ಲಿ ಪ್ಲಾಸ್ಟಿಕ್ ನಿಷೇಧಿಸಿ ಹೊರಡಿಸಿ ಆದೇಶ ಹಿಂಪಡೆದು ಕೇಂದ್ರ ಪರಿಸರ ಇಲಾಖೆಯ 2021ರ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳನ್ನು ಜಾರಿಗೊಳಿಸಲು ಪ್ರಸ್ತಾವ ಸಲ್ಲಿಸಿ’ ಎಂದು ನಿರ್ದೇಶನ ನೀಡಿದರು.



ಗರ್ಭಿಣಿಯರ ಏರುರಕ್ತದೊತ್ತಡ ಮುಂಜಾಗ್ರತೆ ಏನು?


ಸ್ಪಂದನ



ಡಾ. ವೀಣಾ ಎಸ್. ಭಟ್

- **ನಾನು ಖಾಸಗಿ ಶಾಲೆ ಶಿಕ್ಷಕಿಯಾಗಿದ್ದು 6ವರ್ಷದ ಮಗಳಿದ್ದಾಳೆ. ನನಗೆ ಮೊದಲನೇ ಹೆರಿಗೆಯಲ್ಲಿ ಬಿ.ಪಿ.ಇದ್ದು, 8 ತಿಂಗಳೊಳಗೆ ಸಿಸೇರಿಯನ್ ಮಾಡಿ ಮಗು ತೆಗೆದಿದ್ದರಿಂದ, ಮಗುತೂಕ ಕಡಿಮೆ ಇತ್ತು. ಕಷ್ಟಪಟ್ಟು ಆ ಮಗುವನ್ನು ಇಲ್ಲಿಯವರೆಗೆ ಸಾಕಿದ್ದೇನೆ. ಎರಡು ಮೂರು ಬಾರಿ ಅಬಾರ್ಶನ್‌ಮಾಡಿಕೊಳ್ಳಲು ಮಾತ್ರೆ ಕೂಡಾ ತೆಗೆದುಕೊಂಡಿರುವೆ. ಈಗ ಮತ್ತೆ 2ತಿಂಗಳ ಗರ್ಭಿಣಿಯಾಗಿರುತ್ತೇನೆ. ಆದರೆ ಮೊದಲನೇ ಬಾರಿಯ ಹಾಗೇ ಬಿ.ಪಿ.ಹೆಚ್ಚಾಗುತ್ತೇನೋ ಎಂದು ಹೆದರುತ್ತಿದ್ದೇನೆ ಏನು ಮಾಡಲಿ? ಬಿ.ಪಿ. ಬಾರದ ಹಾಗೇ ತಡೆಯಬಹುದೇ? ನಮ್ಮ ಅಜ್ಜಿ ದಿನಾಲು ನಿಂಬೆಹಣ್ಣಿನ ರಸಕುಡಿಯಲು ಹೇಳುತ್ತಿದ್ದಾರೆ. ಕುಡಿಯಬಹುದೇ?**

35ವರ್ಷಗಳಾಗಿದ್ದು 2ನೇ ಮಗು ಬೇಕೆಂದಿದ್ದರೇ ತಡಮಾಡಬೇಡಿ, ಗರ್ಭಿಣಿಯರಲ್ಲಿ 5ತಿಂಗಳ ನಂತರ ರಕ್ತದೊತ್ತಡವು 140/90ಕ್ಕಿಂತ, 4ತಾಸು ಅಂತರದಲ್ಲಿ 2ಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಹೆಚ್ಚಿದ್ದರೆ ಅದನ್ನು ಗರ್ಭಧಾರಣೆಯ ಅಧಿಕರಕ್ತದೊತ್ತಡ ಅಥವಾ ಪಿ.ಐ.ಎಚ್ (ಪ್ರೆಗ್ನೆನ್ಸಿ ಇಂಡ್ಯೂಸಡ್ ಹೈಪರ್‌ಟೆನ್ಸ್) ಎನ್ನುತ್ತಾರೆ.



ನಿಮಗೆ ಈ ರೀತಿಯ ಏರುರಕ್ತದೊತ್ತಡ ಹೆರಿಗೆಯಾಗಿ 3ತಿಂಗಳೊಳಗಾಗಿ ಸಹಜ ಸ್ಥಿತಿಗೆ ಬರುತ್ತದೆ. ಇದರಲ್ಲಿ ಮೂತ್ರಪಿಂಡ ಅಥವಾ ಇನ್ನಿತರ ಯಾವುದೇ ಅಂಗಾಂಗ ಹಾನಿಯಾಗುವುದಿಲ್ಲ. ನಿಮಗಾಗಿದ್ದು ಬಹುಶಃ ಸೌಮ್ಯರೀತಿಯ ಪಿ.ಐ.ಎಚ್ ಇರಬಹುದೇನೊ. ನೀವು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನ ತೆಗೆದುಕೊಳ್ಳಿ. 5ಮಿ. ಗ್ರಾಂ ಫೋಲಿಕ್‌ಆಸಿಡ್ ಮಾತ್ರೆಗಳನ್ನ ನಿಯಮಿತವಾಗಿ 9ತಿಂಗಳವರೆಗೂ ಸೇವಿಸಿ. ತಿಂಗಳಿಗೊಮ್ಮೆ 7 ತಿಂಗಳವರೆಗೂ ವೈದ್ಯರಹತ್ತಿರ ತಪಾಸಣೆಮಾಡಿಸಿ. ನಂತರ 15ದಿನಕ್ಕೊಮ್ಮೆ ತಪಾಸಣೆಗೊಳಗಾಗಿ. ಈ ಮೊದಲೇ ಗರ್ಭಿಣಿಯಾದಾಗ ಏರುರಕ್ತದೊತ್ತಡ ಇರುವುದರಿಂದ ಗರ್ಭಧಾರಣೆಯ ಆರಂಭದಿಂದಲೇ (ಕಡಿಮೆಪ್ರಮಾಣದ) ಆಸ್ಪಿರಿನ್‌ಮಾತ್ರೆ ಕೊಡುತ್ತಾರೆ (8ತಿಂಗಳವರೆಗೆ). ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಮಾತ್ರೆಗಳನ್ನ ನಿಯಮಿತವಾಗಿ ಸೇವಿಸಿ. ಉಪ್ಪಿನಸೇವನೆಗೂ ಗರ್ಭಿಣಿಯರ ಏರುರಕ್ತದೊತ್ತಡಕ್ಕೂ ನೇರ ಸಂಬಂಧ ಇಲ್ಲದಿದ್ದರೂ ಉಪ್ಪು, ಸಕ್ಕರೆ, ಮೈದಾ ಇವೆಲ್ಲವುಗಳನ್ನ ಸಾಧ್ಯವಾದಷ್ಟು ಕಡಿಮೆ ಸೇವಿಸುವುದು ಒಳ್ಳೆಯದು. ಇನ್ನೂ ನಿಂಬೆ ಹಣ್ಣಿನ ರಸ ಅಥವಾ ಸಿಟ್ರಸ್ ಹಣ್ಣುಗಳಾದ ಕಿತ್ತಳೆ, ಮೂಸಂಬೆ, ಬೀಟ್‌ರೂಟ್ ಇವೆಲ್ಲವೂಗಳ ಸೇವನೆ ಒಳ್ಳೆಯದೇ. ಇವು ಸೂಕ್ಷ್ಮ ರಕ್ತನಾಳಗಳಲ್ಲಿ ರಕ್ತಪರಿಚಲನೆ ಸುಸ್ಥಿತಿಯಲ್ಲಿಡಲು ಸಹಾಯವಾಗುತ್ತದೆ. ಸಾಧ್ಯವಾದಷ್ಟು ಸೊಪ್ಪು, ತರಕಾರಿಗಳನ್ನು ಸೇವಿಸಿ, ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿದ್ದಾಗ ಅವರು ನಿಮ್ಮ ಪ್ರತಿ ಭೇಟಿಯಲ್ಲಿಯೂ ನಿಮ್ಮ ರಕ್ತದೊತ್ತಡವನ್ನ ಸರಿಯಾಗಿ ತಪಾಸಣೆ ಮಾಡಿ ಸೂಕ್ತ ಔಷಧವನ್ನು ಕೊಡುತ್ತಾರೆ. ನೀವು ಈಗಿಂದಲೇ ಬಿ.ಪಿ ಹೆಚ್ಚಾಗುತ್ತದೆ ಎಂದು ಆತಂಕ ಇಟ್ಟುಕೊಳ್ಳದಿರಿ. ದೀರ್ಘ ಉಸಿರಾಟ ಮಾಡುತ್ತಿರಿ, ನಾಡಿಶೋಧನ ಮತ್ತು ಭ್ರಮರಿ ಪ್ರಾಣಾಯಾಮಗಳನ್ನ ತಜ್ಞರಿಂದ ಕಲಿತು 5ರಿಂದ 10ನಿಮಿಷ ಅಭ್ಯಾಸ ಮಾಡಿದರೆ ಒತ್ತಡ ನಿರ್ವಹಣೆಗೆ ಸಹಾಯವಾಗುತ್ತದೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಹಡೆದವಳಿಗೂ ಪಡೆದವಳಿಗೂ ರಜೆಯ ಭಾಗ್ಯ

ಬಾಡಿಗೆ ತಾಯಿ ಮಾತ್ರವಲ್ಲ, ಆ ಕಂದನಿಗೆ ಮಡಿಲಾಗಬೇಕಿರುವ ಅಧಿಕೃತ ಅಮ್ಮನಿಗೂ ಹೆರಿಗೆ ರಜೆ ಬೇಕು ಎನ್ನುವ ವಾದಕ್ಕೆ ಪುಷ್ಟಿ ದೊರೆತಂತಾಗಿದೆ. ನವಜಾತ ಮಗುವಿನೊಂದಿಗೆ ಅಮ್ಮನಾಗಿ ಬೆರೆಯಬೇಕಿರುವ, ಬೆಸೆಯಬೇಕಿರುವ ಜರೂರು ಜೈವಿಕ ಅಮ್ಮನಿಗಿರುವುದರಿಂದ ಬಾಡಿಗೆ ತಾಯ್ತನದ ಮೂಲಕ ಮಗು ಪಡೆಯುವ ಮಹಿಳಾ ಸರ್ಕಾರಿ ನೌಕರರಿಗೆ ಹೆರಿಗೆ ರಜೆ ನೀಡಲು ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಅಸ್ತು ಅಂದಿದೆ.

ಸುಶೀಲಾ ಡೋಣೂರ

‘ಬಾಡಿಗೆ ತಾಯ್ತನ’ ಎನ್ನುವುದೊಂದು ಬಹುಜಟಿಲ ವ್ಯವಸ್ಥೆ. ಹಡೆದವಳೇ ಅಮ್ಮನೊ, ಪಡೆದವಳೂ ಅಮ್ಮನೊ ಎನ್ನುವ ತಗಾದೆ ಹೊಸದೇನೂ ಅಲ್ಲ. ಇದರ ಸುತ್ತ ಹಬ್ಬಿಕೊಂಡಿರುವ ಭಾವನಾತ್ಮಕ–ನೈತಿಕ–ಸಾಮಾಜಿಕ ಅಂಶಗಳೂ ಕಡಿಮೆ ಏನಿಲ್ಲ. ಇಲ್ಲಿಯತನಕ ಹೆರಿಗೆ ರಜೆಯ ವಿಚಾರ ಬಂದಾಗ ಜೈವಿಕ ಅಮ್ಮನಿಗೆ ರಜೆ ಯಾಕೆ ಬೇಕು? ಎನ್ನುವ ಸವಾಲು ಎದುರಾಗುತ್ತಿತ್ತು. ಗರ್ಭದಲ್ಲಿ ಹೊತ್ತು, ಹೆತ್ತು ಕೊಡುವವಳು (ಬಾಡಿಗೆ ತಾಯಿ) ಬೇರೆಯೇ ಇರುವಾಗ ಈ ಜೈವಿಕ ಅಮ್ಮಂದೇನು ಕೆಲಸ? ಎನ್ನುವ ಉಡಾಫೆಯೂ ಅಲ್ಲಲ್ಲಿ ಇಣುಕುವುದಿತ್ತು. ಆದರೆ, ಬಾಡಿಗೆ ತಾಯ್ತನದಲ್ಲಿ ಜೈವಿಕ ಅಮ್ಮನ ಪಾತ್ರ, ಜವಾಬ್ದಾರಿ, ಹೊಣೆಗಾರಿಕೆಯ ಮಹತ್ವವನ್ನು ಎತ್ತಿ ಹಿಡಿದು ಇದೀಗ ಕಾನೂನಿನ ವ್ಯಾಪ್ತಿಯನ್ನು ಹಿಗ್ಗಿಸಲಾಗಿದೆ. ಮಗುವಿನೊಂದಿಗೆ ಭಾವನಾತ್ಮಕ ಬೆಸೆತಕ್ಕೆ ಸಿದ್ಧಗೊಳ್ಳಬೇಕಿರುವ ಜೈವಿಕ ಅಮ್ಮನಿಗೂ ಆರು ತಿಂಗಳ ರಜೆಯನ್ನು ವಿಸ್ತರಿಸಲಾಗಿದೆ.

1972ರ ಕೇಂದ್ರ ನಾಗರಿಕ ಸೇವೆಗಳ(ರಜೆ) ನಿಯಮಗಳಿಗೆ ಈ ಹೊಸ ಮಾರ್ಪಾಟುಗಳನ್ನು ಸೂಚಿಸಲಾಗಿದ್ದು, ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆಯುವ ‘ಕಮಿಷನಿಂಗ್ ತಾಯಿ’ ಅಥವಾ ‘ಜೈವಿಕ ತಾಯಿ’ (ಸರೊಗಸಿ ಅಥವಾ ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲಿಚ್ಛಿಸುವ ತಾಯಿ)ಗೂ 180 ದಿನಗಳ ಹೆರಿಗೆ ರಜೆಯನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ.

ಬಾಡಿಗೆ ತಾಯ್ತನದ ಮೂಲಕ ಮಗು ಪಡೆಯುವ ಮಹಿಳಾ ಸರ್ಕಾರಿ ನೌಕರರಿಗೆ ಹೆರಿಗೆ ರಜೆ ನೀಡಲು ಇದುವರೆಗೂ ಯಾವುದೇ ನಿಯಮವಿರಲಿಲ್ಲ, ಸ್ಪಷ್ಟ ಮಾರ್ಗಸೂಚಿಗಳಿರಲಿಲ್ಲ. ಇದೇ ಜೂನ್ 18 ರಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಈ ಅಧಿಸೂಚನೆಯನ್ನು ಹೊರಡಿಸಿದ್ದು, ನವಜಾತ ಮಗುವಿನೊಂದಿಗೆ ಅನುಬಂಧ ಬೆಳೆಸಿಕೊಳ್ಳಲು ಸಮಯದ ಅಗತ್ಯವಿರುವ ಜೈವಿಕ ತಾಯಿಗೂ ಹೆರಿಗೆ ರಜೆಯ ಅಗತ್ಯವಿದೆ ಎನ್ನುವ ವಾದಕ್ಕೆ ಪುಷ್ಟಿ ದೊರೆತಂತಾಗಿದೆ.

ಯಾರು ಜೈವಿಕ ತಾಯಿ

ಕೃತಕಸಂತಾನಾಭಿವೃದ್ಧಿತಂತ್ರಜ್ಞಾನವನ್ನುಬಳಸಿಕೊಂಡು ಪ್ರಯೋಗಾಲಯದಲ್ಲಿ ಫಲಿಸಿದ ಭ್ರೂಣಗಳನ್ನು ಬಾಡಿಗೆ ತಾಯಿಯ ಗರ್ಭದಲ್ಲಿ ಬೆಳೆಸಿ, ಮಗುವನ್ನು ಪಡೆಯಲು ಸಂತಾನಾಭಿವೃದ್ಧಿ ಸಾಮರ್ಥ್ಯವಿಲ್ಲದ ದಂಪತಿಗೆ ಅವಕಾಶ ಕಲ್ಪಿಸುವುದೇ ಬಾಡಿಗೆ ತಾಯ್ತನ. ಈ ತಂತ್ರಜ್ಞಾನ ಜಗತ್ತಿನೆಲ್ಲೆಡೆ, ಪ್ರವರ್ಧಮಾನಕ್ಕೆ ಬಂದು ದಶಕಗಳೇ ಕಳೆದಿವೆ. ಅದರ ಮುಂದುವರಿದ ರೂಪವಾಗಿ, ಸಿಂಗಲ್ ಆಗಿರುವ ಅವಿವಾಹಿತರು, ಇಷ್ಟಪಟ್ಟು ಜೊತೆಯಲ್ಲಿರುವ ಸಲಿಂಗಿಗಳು, ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರುವವರು, ಸಿವಿಲ್ ಯೂನಿಯನ್ ರಿಲೇಷನ್ಸ್ ನಲ್ಲಿ ಇರುವವರು ತಮ್ಮದೇ ಜೈವಿಕ ಅನುಬಂಧದ ಮಗುವನ್ನು ಪಡೆಯುವತನಕ ಇದರ ಕವಲುಗಳು ಚಾಚಿಕೊಂಡಿವೆ. ಈ ವ್ಯವಸ್ಥೆ ಇಷ್ಟೊಂದು ವಿಸ್ತೃತವೂ–ವಿಶಾಲವೂ ಆಗಿ ಬೆಳೆಯುತ್ತಿರುವುದರ ಗಂಭೀರತೆಯನ್ನು ಅರಿತು ಹೆರಿಗೆಯ ರಜೆಯನ್ನು ವಿಸ್ತರಿಸಿರುವುದು ಸ್ವಾಗತಾರ್ಹ.

ಭಾವನಾತ್ಮಕ ಕೊಂಡಿ

ಬಾಡಿಗೆ ತಾಯ್ತನದಲ್ಲಿ ಎರಡು ರೀತಿಯ ಸವಾಲುಗಳಿವೆ. ತನ್ನದೇ ಗರ್ಭದಲ್ಲಿ ಬೆಳೆದು, ತನ್ನ ರಕ್ತ ಹಂಚಿಕೊಂಡು ಹುಟ್ಟುವ ಮಗುವನ್ನು ತನ್ನದಲ್ಲ ಎನ್ನುವಂತೆ ಕಳಚಿಟ್ಟು ಹೋಗಬೇಕಾದ ಬಹುದೊಡ್ಡ ಸ್ಥಿತ್ಯಂತರಕ್ಕೆ ಬಾಡಿಗೆ ತಾಯಿ ಸಿದ್ಧಗೊಳ್ಳಬೇಕು. ಹಾಗೆಯೇ ತನ್ನ ಗರ್ಭದಿಂದ ಹುಟ್ಟದ, ಕೆಲವೊಮ್ಮೆ ತನ್ನ ಅಂಡಾಣುವಿನಿಂದ ಜನಿಸಿದ, ಕೆಲವೊಮ್ಮೆ ತನ್ನ ಅಂಡಾಣುವನ್ನೂ ಒಳಗೊಳ್ಳದ ಮಗುವನ್ನು ತನ್ನದೆಂದು ಪರಿಭಾವಿಸುವ, ಸಾರುವ ಹಾಗೂ ಸ್ಥಾಪಿಸುವ ಅಷ್ಟೇ ದೊಡ್ಡ ಹೊಣೆ ಜೈವಿಕ ಅಮ್ಮನ ಮೇಲಿರುತ್ತದೆ.

ರಜೆ ಏನೊ ಸಿಕ್ಕಿದೆ. ಅದರ ಸದ್ಬಳಕೆ ಹೇಗೆ?

- ಮಗು ಬಾಡಿಗೆ ತಾಯಿಯ ಗರ್ಭದಲ್ಲಿರುವಾಗಲೇ ಅದರೊಂದಿಗೆ ಸಂವಹನ ಆರಂಭಿಸಿ.
- ಬಾಡಿಗೆ ತಾಯಿಯ ಆರೈಕೆಯ ಮೂಲಕ ಗರ್ಭದಲ್ಲಿರುವ ಮಗುವಿನ ಚಲನ–ವಲನಗಳನ್ನು ಗಮನಿಸುವ, ಆನಂದಿಸುವ ಪ್ರಯತ್ನ ಚಾಲ್ತಿಯಲ್ಲಿರಲಿ
- ಮಗುವಿನ ಜನನದ ನಂತರ ಅದರ ಜವಾಬ್ದಾರಿಗಳೆಲ್ಲಾ ನಿಮ್ಮದಾಗಲಿ, ಅಂದರೆ ಮೈತಿಕ್ಕುವುದು, ಎಣ್ಣೆ ಹಾಕುವುದು, ಸ್ನಾನ ಮಾಡಿಸುವುದು, ಆಟವಾಡಿಸುವುದು, ಮಲಗಗಿಸುವುದು...
- ರಾತ್ರಿ ಎದ್ದು ಅಳುವುದು, ರಂಪ ಮಾಡುವುದು ಎಲ್ಲಾ ಮಕ್ಕಳಲ್ಲಿಯೂ ಸಾಮಾನ್ಯ ಈ ಜವಾಬ್ದಾರಿಗೂ ನೀವು ಸಜ್ಜಾಗಿದ್ದರೆ ಒಳ್ಳೆಯದು.
- **ನೆನಪಿಡಿ:** ಹೆತ್ತವಳು ತಾಯಿಯಾಗುತ್ತಾಳೆ. ಹೆರದೆಯೂ ಅಮ್ಮನಾಗಬೇಕಾದರೆ, ತಾಯ್ತನದ ಸವಿಯುಣ್ಣಬೇಕಾದರೆ ಕಂದನ ಆರೈಕೆ–ಆತಿಥ್ಯದ ಜವಾಬ್ದಾರಿಯನ್ನು, ಆದಷ್ಟು ತಾವೇ ಹೊತ್ತು, ಅಗತ್ಯ ಬಿದ್ದಾಗ ಬೇರೆಯವರ ಸಹಾಯವನ್ನೂ ಪಡೆದುಕೊಂಡು, ಪ್ರೀತ್ಯಾಧಾರದಿಂದ ನಿರ್ವಹಿಸುವುದು ಮುಖ್ಯ.



ಡಾ. ಅರುಣಾ ಯಡಿಯಾಳ್, ಮನೋವೈದ್ಯೆ



ಹುಟ್ಟಿದ ಮಗುವಿನೊಂದಿಗೆ ನಿಜವಾದ ಬಾಂದವ್ಯ ಬೆಸೆಯುವುದೇ ಎದೆಹಾಲುಣಿಸುವಾಗ. ಆದರೆ ಈ ಅವಕಾಶ ಜೈವಿಕ ಅಮ್ಮನಿಗೆ ಇಲ್ಲಿ ಸಿಗುವುದಿಲ್ಲ. ಹೀಗಾಗಿ, ಅವಳು ಮಗುವಿನೊಂದಿಗೆ ಬಾಂದವ್ಯ ಬೆಳೆಸಿಕೊಳ್ಳಲು ಆರಂಭದ ದಿನಗಳಿಂದಲೇ ಪ್ರಯತ್ನಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಜೈವಿಕ ಅಮ್ಮನಿಗೂ ಹೆರಿಗೆ ರಜೆ ಅತ್ಯವಶ್ಯಕವಾಗುತ್ತದೆ.

ಯಾರಿಗೆಲ್ಲಾ ಅನ್ವಯ

- ಭಾರತದಲ್ಲಿ, ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರ ಎರಡು ಹೆರಿಗೆಗಳಿಗೆ ಮಾತ್ರ ಈ ಕಾನೂನು ಅನ್ವಯ
- ವಾಣಿಜ್ಯ ಬಾಡಿಗೆ ತಾಯ್ತನಕ್ಕೆ ಇದು ಅನ್ವಯಿಸುವುದಿಲ್ಲ, ಪರಹಿತಚಿಂತನೆಯ ಬಾಡಿಗೆ ತಾಯ್ತನವನ್ನು (altruistic surrogacy) ಮಾತ್ರ ಇದು ಅನುಮತಿಸುತ್ತದೆ
- ಕಾನೂನುಬದ್ಧವಾಗಿ ವಿವಾಹವಾಗಿರುವ ಭಾರತೀಯ ದಂಪತಿಗಳಾಗಿರಬೇಕು
- ವಿವಾಹವಾಗಿ ಕನಿಷ್ಠ ಐದು ವರ್ಷಗಳ ಕಾಲ ಸ್ವಾಭಾವಿಕ ತಾಯ್ತನಕ್ಕೆ ಪ್ರಯತ್ನಿಸಿರಬೇಕು
- ತಾಯಿಯಾಗಲು ವೈದ್ಯಕೀಯ ತೊಡಕುಗಳಿರುವ ಬಗ್ಗೆ ದಾಖಲೆಗಳಿರಬೇಕು
- ಅದಕ್ಕೂ ಮೊದಲು ಯಾವುದೇ ಜೀವಂತ ಜೈವಿಕ, ದತ್ತು ಪಡೆದ ಅಥವಾ ಬಾಡಿಗೆ ತಾಯ್ತನದ ಮೂಲಕ ಪಡೆದ ಮಕ್ಕಳು ಇರಬಾರದು
- ಬಾಡಿಗೆ ತಾಯಿಯಾಗುವಾಕೆ ವಿವಾಹಿತ ಮಹಿಳೆಯಾಗಿರಬೇಕು, ಮೊದಲೇ ಮಕ್ಕಳನ್ನು ಹೊಂದಿರಬೇಕು, ಕನಿಷ್ಠ 25 ರಿಂದ 35 ವರ್ಷ ವಯಸ್ಸಿನವರಾಗಿರಬೇಕು



ಸರ್ಕಾರ ಹೆರಿಗೆ ರಜೆಯ ನಿಯಮಾವಳಿಯಲ್ಲಿ ಈ ಅಂಶವನ್ನು ಸೇರಿಸಿರುವುದು ಸ್ವಾಗತಾರ್ಹ. ಬಾಡಿಗೆ ತಾಯ್ತನವನ್ನು ಇನ್ನಷ್ಟು ಸರಳಗೊಳಿಸುವ ನಿಟ್ಟಿನಲ್ಲಿ ಈ ಬದಲಾವಣೆಯ ಅಗತ್ಯವಿತ್ತು. ಆದರೆ, ಬಾಡಿಗೆ ತಾಯ್ತನದಲ್ಲಿ ಅತಿ ಹೆಚ್ಚು ತೊಡಗಿಸಿಕೊಂಡಿರುವ ವರ್ಗವೆಂದರೆ ಸಾಫ್ಟ್‌ವೇರ್ ಮತ್ತು ಇನ್ನಿತರ ಕಾರ್ಪೋರೇಟ್ ಕಂಪನಿಗಳಲ್ಲಿ ದುಡಿಯುವ ಮಹಿಳೆಯರು. ಹೀಗಿರುವಾಗ ಈ ನಿಯಮವನ್ನು ಎಲ್ಲಾ ಖಾಸಗಿ ಸಂಸ್ಥೆಗಳ ವ್ಯಾಪ್ತಿಗೆ ತರಬೇಕಾದುದು ಅತ್ಯಗತ್ಯ. ಈಗಾಗಲೇ ಅನೇಕ ಖಾಸಗಿ ಸಂಸ್ಥೆಗಳು ಬಾಡಿಗೆ ಅಮ್ಮಂದಿರಿಗೂ, ಜೈವಿಕ ಅಮ್ಮಂದಿರಿಗೂ ಹೆರಿಗೆ ರಜೆ ಸೇರಿದಂತೆ ಇನ್ನಿತರ ಅನುಕೂಲತೆಗಳನ್ನು ನೀಡುತ್ತಿವೆ. ಆದರೂ, ಸರ್ಕಾರವೇ ಈ ಬಗ್ಗೆ ಸ್ಪಷ್ಟ ನಿಯಮಗಳನ್ನು, ಮಾರ್ಗಸೂಚಿಗಳನ್ನು ಹೊರಡಿಸಿದರೆ ಖಾಸಗಿ ವಲಯದಲ್ಲಿ ದುಡಿಯುವ ಮಹಿಳಾ ವರ್ಗಕ್ಕೆ ಹೆಚ್ಚು ನಿರಾಳತೆಯನ್ನು ನೀಡಬಲ್ಲದು.

ಅಂಜಲಿ ರಾಮಣ್ಣ

ಮಹಿಳೆ ಮತ್ತು ಮಕ್ಕಳ ಹಕ್ಕುಗಳ ವಕೀಲರು



ಹೌದು, ಭಾವನಾತ್ಮಕ ಬಾಂದವ್ಯ ಬೆಸೆಯುವ ನಿಟ್ಟಿನಲ್ಲಿ ಜೈವಿಕ ಅಮ್ಮನಿಗೆ ಆರು ತಿಂಗಳ ರಜೆ ಖಂಡಿತ ನೆರವಾಗುತ್ತದೆ. ಆದರೆ, ಔದ್ಯೋಗಿಕ ಉನ್ನತಿಯ ದೃಷ್ಟಿಯಿಂದ ನೋಡಿದಾಗ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಮುಖ್ಯ ಹುದ್ದೆಯಲ್ಲಿರುವ ಅಮ್ಮಂದಿರ ಮೇಲೆ ಈ ಅನುಕೂಲವೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಈ ಕಾರಣದಿಂದ ಅವರು ಔದ್ಯೋಗಿಕ ಅವಕಾಶಗಳಿಂದ ಹಾಗೂ ಮುಂಬಡ್ತಿಯಿಂದ ವಂಚಿತರಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇಂತಹ ನಿಯಮಗಳಿಂದ ಖಾಸಗಿ ವಲಯಗಳು ಈಗಾಗಲೇ ಮಹಿಳೆಯರನ್ನು ದೂರ ಇಡುವ ಪ್ರವೃತ್ತಿಯನ್ನು ಆರಂಭಿಸಿವೆ. ಇದರ ಬದಲು ಮಹಿಳೆಯರ ಔದ್ಯೋಗಿಕ ಉನ್ನತಿಗೆ ಕಾರಣವಾಗಬಲ್ಲ ಬೇರೆ ಆಯ್ಕೆಗಳತ್ತ ವ್ಯವಸ್ಥೆ ಗಮನ ಹರಿಸಿದರೆ ಉತ್ತಮ. ಎಲ್ಲಾ ಕಚೇರಿಗಳಲ್ಲಿ, ಮಕ್ಕಳ ಪಾಲನೆ, ಪೋಷಣೆ ಹಾಗೂ ಬಿಡುವಿನ ಅವಧಿಯಲ್ಲಿ ಮಗುವಿನೊಂದಿಗೆ ಸಮಯ ಕಳೆಯಲು ತಾಯಿಗೆ ನೆರವಾಗುವಂತಹ ಪೆಟಲ್ಸ್ ಪ್ರಿಸ್ಕೂಲ್, ಡೇಕೇರ್, ಕ್ರೆಚೆಯಂತಹ ಆಯ್ಕೆಗಳನ್ನು ನೀಡಬೇಕು. ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆಯೂ ಉಪಯುಕ್ತ.

ಡಾ. ಕಾಮಿನಿ ರಾವ್

ಪ್ರಸೂತಿ ತಜ್ಞೆ, ಎಆರ್‌ಟಿ ಮಾರ್ಗಸೂಚಿಗಳ ಸಮಿತಿಯ ಚೇರ್ಮನ್

ಮಳೆಗಾಲಕ್ಕಿರಲಿ ಬಣ್ಣಗಳ ಬಟ್ಟೆ

ಕಲಾವತಿ ಬೈಚಬಾಳ

ಫ್ಯಾಷನ್

ಋತುಮಾನಗಳು ಬದಲಾಗುವಂತೆ ಫ್ಯಾಷನ್ ಕ್ಷೇತ್ರದಲ್ಲೂ ಬದಲಾವಣೆಗಳಾಗುತ್ತಿರುತ್ತವೆ. ಆಯಾ ಕಾಲಕ್ಕೆ ಹೊಂದುವಂತಹ ಫ್ಯಾಷನ್ ಉಡುಪುಗಳು ಮಾರುಕಟ್ಟೆಯನ್ನು ಪ್ರವೇಶಿಸುತ್ತಲೇ ಇರುತ್ತವೆ.

ತುಂತುರು ಮಳೆಯಿಂದ ಆರಂಭವಾಗುವ ಮಳೆ ಕೆಲವೊಮ್ಮೆ ಹೊರಗಡೆ ಹೆಜ್ಜೆ ಇಡಲು ಸಾಧ್ಯವಾಗದಷ್ಟು ಸುರಿಯುತ್ತದೆ. ಮಳೆಗಾಲದಲ್ಲಿ ಧರಿಸುವ, ಆಯ್ಕೆ ಮಾಡಿಕೊಳ್ಳುವ ಬಣ್ಣ ಬಣ್ಣದ ಉಡುಪುಗಳು ನಿಮ್ಮನ್ನು ಸ್ಟೈಲಿಷ್ ಆಗಿ ಕಾಣುವಂತೆ ಮಾಡಬಲ್ಲವು.

ನಮ್ಮ ಉಡುಗೆ ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸುವಂಥದ್ದು. ಟ್ರೆಂಡ್‌ಗೆ ಹೊಂದುವಂತೆ, ಬೇರೆಯವರಿಗಿಂತ ವಿಭಿನ್ನವಾಗಿ ಕಾಣಿಸಿಕೊಳ್ಳಬೇಕೆಂಬ ಹಂಬಲ ಬಹುತೇಕರದ್ದು.

ಹೊಸ ವಿನ್ಯಾಸದ ಬಟ್ಟೆಗಳನ್ನು ಧರಿಸುವ ಭರದಲ್ಲಿ ಕಿರಿಕಿರಿಯಾಗದಂಥ, ಆಹ್ಲಾದಕರ ಎನಿಸುವ, ಕಣ್ಣಿಗೆ ರಾಚದಂಥ ಬಣ್ಣದ ಉಡುಪುಗಳನ್ನು ಧರಿಸುವುದು ಉತ್ತಮ. ವರ್ಣರಂಜಿತ ಶಿರವಸ್ತ್ರಗಳು, ಹೆಡ್‌ಬ್ಯಾಂಡ್‌ಗಳು ಅಥವಾ ಛತ್ರಿ, ಶೂ, ಚಪ್ಪಲಿಗಳು ನಿಮ್ಮ ಉಡುಪಿಗೆ ಒಗ್ಗುವಂತೆ ಬಳಸಿ.


ಸಾಮಾನ್ಯವಾಗಿ ಮನೆಯಲ್ಲೇ ಇರುವ ಬಹುತೇಕರು ಬೆಚ್ಚಗಿನ ಹಿತ ನೀಡುವ ಉಡುಪುಗಳನ್ನು ತೊಡಲು ಇಷ್ಟಪಡುತ್ತಾರೆ. ಇನ್ನು ಮನೆಯಿಂದ ಆಚೆ, ಕಚೇರಿಯಲ್ಲಿ ದುಡಿಯುವ ಮಹಿಳೆಯರು ಮಳೆ ನೀರು, ಕೆಸರಿನ ರಸ್ತೆ ದಾಟಿ ಬರುವಾಗ ಉಡುಗೆ ಹಾಳಾಗದಂತೆ ಜಾಗೃತಿ ವಹಿಸುವತ್ತ ಮುಂದಾಗುತ್ತಾರೆ. ಅಂಥವರು ಶಾರ್ಟ್ಸ್, ಸ್ಕರ್ಟ್ಸ್, ಆ್ಯಂಕಲ್ ಲೆಂಥ್ ಜೀನ್ಸ್, ಲೆಗ್ಗಿನ್ಸ್, ಕಾಟನ್ ಹಾಗೂ ಹಗುರವಾದ ಸೀರೆ ಮುಂತಾದವುಗಳನ್ನೇ ಆಯ್ದುಕೊಳ್ಳುತ್ತಾರೆ.

ಮಾನ್ಸೂನ್ ಋತುವಿಗೆ ಶಾರ್ಟ್ಸ್ ಬಟ್ಟೆಗಳು ಸೂಕ್ತ ಆಯ್ಕೆ. ಡೆನಿಮ್ ಶಾರ್ಟ್ಸ್ ಜನಪ್ರಿಯ ಉಡುಪುಗಳಾಗಿದ್ದರೂ ಒದ್ದೆಯಾದಾಗ ಅವು ಭಾರವಾಗಬಹುದು. ಬದಲಿಗೆ, ಲಿನಿನ್ ಅಥವಾ ಸಿಂಥೆಟಿಕ್ ಮಿಶ್ರಣದ ಬಟ್ಟೆಗಳನ್ನು ಬಳಸಬಹುದು. ಇವು ನೀರು ಹಿಡಿದಿಟ್ಟುಕೊಳ್ಳದೇ, ಬೇಗನೆ ಒಣಗುತ್ತವೆ. ರಬ್ಬರ್ ಸ್ಯಾಂಡಲ್‌ಗಳು, ಸ್ನೀಕರ್‌ಗಳಂತಹ ವಾಟರ್‌ಪ್ರೂಫ್ ಶೂ, ಬ್ಯಾಗ್‌ಗಳು ಅತ್ಯುತ್ತಮ ಆಯ್ಕೆಯಾಗಲಿ.ಸನ್ನಿ ಯೆಲ್ಲೊ ಬಣ್ಣದ ರೇನ್‌ಕೋಟ್, ಕುರ್ತಿ, ಶರ್ಟ್ಸ್, ಓಷಿಯನ್ ಬ್ಲೂ ಬಣ್ಣದ ಡೆನಿಂಸ್ಕರ್ಟ್ಸ್ ಜೊತೆಗೆ ಹಗುರವಾದ ಉಲನ್ ಟಾಪ್‌ಗಳನ್ನು ತೊಡಬಹುದು. ಫ್ರೆಷ್ ಗ್ರೀನ್ ಬಣ್ಣದ ಕಾಟನ್ ಮತ್ತು ಲೆನಿನ್ ಬಟ್ಟೆಯ ಕುರ್ತಾ ತೊಟ್ಟಾಗ ಮೈಗೆ ಹಗುರವೆನಿಸಿ ಆರಾಮದಾಯಕ ಅನುಭವ ನೀಡುತ್ತವೆ.ಮರಳಿನ ಬಣ್ಣದ ಹಾಗೂ ಬಿಳಿ, ತಿಳಿ ಗುಲಾಬಿ ಬಣ್ಣದ ಟ್ರೆಂಚ್ ಕೋಟ್‌ಗಳು, ವೈಡ್ ಲೆಗ್ ಪ್ಯಾಂಟ್ ಅಥವಾ ಲಿನಿನ್ ಶರ್ಟ್‌ಗಳು ಸುಲಭವಾಗಿ ಹೊಂದುವುದರಿಂದ ಕಾರ್ಪೊರೇಟ್ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಹೆಚ್ಚು ಸೂಕ್ತ ಎನಿಸುವವು.ಆ್ಯಂಕಲ್ ಲೆಂತ್ ಜೀನ್ಸ್ ಜೊತೆಗೆ, ಶಾರ್ಟ್, ಟಾಪ್, ಆ್ಯಂಕಲ್ ಬೂಟ್ಸ್ ಜೊತೆಗೆ ಉದ್ದನೆಯ ಜಾಕೆಟ್ ಧರಿಸಿದರೆ ಸ್ಟೈಲಿಷ್ ಲುಕ್ ಸಿಗುವುದು. ಇಲ್ಲಿ ಬಣ್ಣಗಳ ಆಯ್ಕೆಗೆ ಆದ್ಯತೆ ನೀಡುವುದು ಉತ್ತಮ.

ಕಡುಕಪ್ಪು, ಬಿಳಿ, ಕೆಂಪು ಬಣ್ಣವಿಲ್ಲದೇ ಫ್ಯಾಷನ್ ಲೋಕವೇ ಇಲ್ಲ. ಫ್ಲೋರಲ್ ಪ್ರಿಂಟೆಡ್ ರೇನ್‌ಕೋಟ್ಸ್, ಸ್ಟ್ರೈಪ್ಡ್ ಟಾಪ್‌ಗಳು, ಫ್ಲೋರಲ್ ಪ್ರಿಂಟೆಡ್ ಟ್ರುಸರ್ಸ್ ಹಾಗೂ ರೇನ್ ಬೂಟ್ಸ್‌ಗಳನ್ನು ತೊಡವುದರಿಂದ ಇನ್ನಷ್ಟು ಟ್ರೆಂಡಿಯಾಗಿ ಕಾಣಿಸಿಕೊಳ್ಳಬಹುದು. ಮಳೆಗಾಲದ ಖುಷಿಯನ್ನು ಇವು ಹೆಚ್ಚಿಸಬಲ್ಲವು. ಮಳೆಗಾಲದಲ್ಲಿ ಟ್ರೆಕಿಂಗ್ ಮಾಡುವವರು ಟ್ರ್ಯಾಕ್ ಪ್ಯಾಂಟ್‌ಗಳು, ಹೂಡೀಸ್ ಅಥವಾ ಸ್ನೀಕರ್ಸ್‌ಗಳನ್ನು ಧರಿಸುವುದು ಹೆಚ್ಚು ಸೂಕ್ತ. ಜಾಕೆಟ್, ಉಲನ್ ಬಟ್ಟೆಗಳು, ಪುಲ್‌ಓವರ್‌ಗಳು ಟ್ರೆಂಡಿ ಎನ್ನಿಸುವ ಜೊತೆಗೆ ಅಂದವನ್ನೂ ಹೆಚ್ಚಿಸುತ್ತವೆ. ಜೊತೆಗೆ ದೇಹವನ್ನೂ ಬೆಚ್ಚಗಿಸಿರುತ್ತವೆ. ಇದನ್ನು ಜೀನ್ಸ್ ಜೊತೆ, ಕುರ್ತಾ ಹಾಗೂ ಸೀರೆ ಮೇಲೆ, ಸ್ಕರ್ಟ್ ಜೊತೆ ಧರಿಸಬಹುದು.ಸೀರೆ ಉಡುವ ಮಹಿಳೆಯರಿಗಾಗಿ ಓವರ್‌ಕೋಟ್ ಬ್ಲೌಸ್ ಮಳೆಗಾಲದ ಟ್ರೆಂಡಿ ಡ್ರೆಸ್ ಆಗಿದೆ. ತೊಡಲು ಆರಾಮದಾಯಕ ಎನ್ನಿಸುವ ಈ ಬ್ಲೌಸ್, ಫ್ಯಾಷನ್ ವಿಚಾರದಲ್ಲಿ ಬದಲಾದ ಮನಸ್ಥಿತಿಯನ್ನೂ ಹೇಳುತ್ತದೆ. ಕಾಟನ್, ಆರ್ಗಾಂಜಾ, ಕ್ರೇಪ್, ಫ್ಯಾನ್ಸಿ, ಹೀಗೆ ಎಲ್ಲ ಥರದ ಸೀರೆಗಳಿಗೂ ಈ ಬ್ಲೌಸ್ ಹೊಂದುವಂಥದ್ದು.



ಮಳೆಗೆ ಆಲೂ ಕುರುಕಲು



ವೇದಾವತಿ ಎಚ್.ಎಸ್.

ರಸಾಸ್ವಾದ

ಫ್ರೆಂಚ್ ಫ್ರೈಸ್ /ಫಿಂಗರ್ ಚಿಪ್ಸ್

ಬೇಕಾಗುವ ಸಾಮಗ್ರಿಗಳು: ಆಲೂಗಡ್ಡೆ-4, ಉಪ್ಪು-1 ಟೀ ಚಮಚ, ಎಣ್ಣೆ ಕರಿಯಲು, ಚಾಟ್ ಮಸಾಲೆ ನಿಮ್ಮ ರುಚಿಗೆ ಅನುಗುಣವಾಗಿ, ಅಚ್ಚಖಾರದ ಪುಡಿ ನಿಮ್ಮ ಖಾರಕ್ಕೆ ಅನುಗುಣವಾಗಿ ಹಾಕಿ.

ತಯಾರಿಸುವ ವಿಧಾನ: ಆಲೂಗಡ್ಡೆಯ ಸಿಪ್ಪೆಯನ್ನು ತೆಗೆದು ಕೊಳ್ಳಿ. ನಂತರ ಆಲೂಗಡ್ಡೆ ಕಪ್ಪಾಗದಂತೆ ಒಂದು ಪಾತ್ರೆಯಲ್ಲಿ ನೀರನ್ನು ಹಾಕಿ ಅದರಲ್ಲಿ ಮುಳುಗಿಸಿಡಿ. ಬಳಿಕ ಒಂದೇ ರೀತಿಯಲ್ಲಿ ಕೈಯಲ್ಲಿ ಅಥವಾ ಅದನ್ನು ಆಲೂಗಡ್ಡೆಯನ್ನು ಕತ್ತರಿಸುವ ಉಪಕರಣದಲ್ಲಿ ಕತ್ತರಿಸಿ. ಒಂದು ಪಾತ್ರೆಯಲ್ಲಿ ನೀರನ್ನು ಹಾಕಿ ಐದು ನಿಮಿಷ ಬಿಸಿ ಮಾಡಿ. ಅದರಲ್ಲಿ ಕತ್ತರಿಸಿದ ಆಲೂಗಡ್ಡೆಯನ್ನು ಮತ್ತು ಸ್ವಲ್ಪ ಉಪ್ಪನ್ನು ಹಾಕಿ ಸ್ವಲ್ಪ ಮೆತ್ತಗಾಗುವರೆಗೆ ಬೇಯಿಸಿ. ನಂತರ ಅದನ್ನು ನೀರಿನಿಂದ ತೆಗೆದು ಒಂದು ಬಟ್ಟೆಯಲ್ಲಿ ಹರಡಿ. ಅದರಲ್ಲಿರುವ ನೀರು ಆರಿದ ಬಳಿಕ ಒಂದು ತಟ್ಟೆಯಲ್ಲಿ ಹಾಕಿ ಫ್ರೀಜರ್‌ನಲ್ಲಿ ಒಂದು ಗಂಟೆ ಕಾಲ ಇಡಿ. ಹೀಗೆ ಮಾಡುವುದರಿಂದ ಫಿಂಗರ್ ಚಿಪ್ಸ್ ಗರಿ ಗರಿಯಾಗಿರುತ್ತದೆ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಂಡು ಅದರಲ್ಲಿ ಫಿಂಗರ್ ಚಿಪ್ಸ್ ಅನ್ನು ಡೀಪ್ ಫ್ರೈ ಮಾಡಿ. ಒಮ್ಮೆ ಎಲ್ಲಾ ಫ್ರೆಂಚ್ ಫ್ರೈಸ್ ಅನ್ನು ಎಣ್ಣೆಯಲ್ಲಿ ಕರಿದ ನಂತರ ಅದನ್ನು ತಣ್ಣಗಾಗುವರೆಗೆ ಹಾಗೇ ಇಡಿ. ನಂತರ ಮತ್ತೊಮ್ಮೆ ಎಣ್ಣೆಯಲ್ಲಿ ಹಾಕಿ ಕೆಂಬಣ್ಣ ಬರುವರೆಗೆ ಕರಿಯಿರಿ. ಹೀಗೆ ಮಾಡುವುದರಿಂದ ಗರಿ ಗರಿಯಾಗಿರುತ್ತದೆ. ನಂತರ ಒಂದು ಬೌಲಿನಲ್ಲಿ ತಯಾರಿಸಿದ ಫ್ರೆಂಚ್ ಫ್ರೈಸ್ ಹಾಕಿ. ಅದಕ್ಕೆ ಚಾಟ್ ಮಸಾಲೆ, ಅಚ್ಚಖಾರದ ಪುಡಿ ಮತ್ತು ಉಪ್ಪನ್ನು ಸೇರಿಸಿ ಮಿಶ್ರಣ ಮಾಡಿ. ರುಚಿಕರವಾದ ಫ್ರೆಂಚ್ ಫ್ರೈಸ್ ಅನ್ನು ಟೊಮೆಟೊ ಕೆಚಪ್ ಅಥವಾ ಯಾವುದಾದರೂ ಚಟ್ನಿಯೊಂದಿಗೆ ತಯಾರಿಸಿ ಸವಿಯಿರಿ.

ಆಲೂ-ಸೂಜಿ ಕಟ್ಲೇಟ್



ಬೇಕಾಗುವ ಸಾಮಗ್ರಿಗಳು: ದೊಡ್ಡ ಗಾತ್ರದ ಆಲೂಗಡ್ಡೆ 2, ಸೂಜಿ ರವೆ 1 ಕಪ್, ಗಟ್ಟಿ ಮೊಸರು 3/4 ಕಪ್, ಈರುಳ್ಳಿ 2 ಚಿಕ್ಕದಾಗಿ ಕತ್ತರಿಸಿ, ಕೊತ್ತಂಬರಿ ಸೊಪ್ಪು 2 ಚಮಚ, ಹಸಿಮೆಣಸಿನಕಾಯಿ 2 ಚಿಕ್ಕದಾಗಿ ಕತ್ತರಿಸಿ, ಶುಂಠಿ ಒಂದಿಂಚು ಚಿಕ್ಕದಾಗಿ ಕತ್ತರಿಸಿ, ಜೀರಿಗೆ 1 ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು ಎಣ್ಣೆ ಕರಿಯಲು.

ತಯಾರಿಸುವ ವಿಧಾನ: ಆಲೂಗಡ್ಡೆಯನ್ನು ಬೇಯಿಸಿಕೊಂಡು ನುಣ್ಣಗೆ ಪುಡಿ ಮಾಡಿಕೊಳ್ಳಿ. ಒಂದು ಬೌಲ್‌ನಲ್ಲಿ ಸೂಜಿ ರವೆ ಮತ್ತು ಮೊಸರನ್ನು ಹಾಕಿ ಕಲಸಿ ನಂತರ ಹದಿನೈದು ನಿಮಿಷಗಳ ಮುಚ್ಚಿಡಿ. ಬಳಿಕ ಈ ಮಿಶ್ರಣಕ್ಕೆ ಪುಡಿಮಾಡಿಕೊಂಡ ಆಲೂಗಡ್ಡೆ, ಈರುಳ್ಳಿ, ಜೀರಿಗೆ, ಹಸಿ ಮೆಣಸಿನಕಾಯಿ, ಶುಂಠಿ, ಕೊತ್ತಂಬರಿ ಸೊಪ್ಪು ಮತ್ತು ಉಪ್ಪನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ಕೈಯಿಗೆ ಎಣ್ಣೆಯನ್ನು ಸವರಿ ಕೊಂಡು ತಯಾರಿಸಿದ ಮಿಶ್ರಣದಿಂದ ನಿಮಗೆ ಬೇಕಾದ ಗಾತ್ರದ ಉಂಡೆಗಳನ್ನು ಮಾಡಿಕೊಂಡು ಅದನ್ನು ದಪ್ಪವಾಗಿಯೂ ಅಲ್ಲದೆ ತುಂಬಾ ತೆಳುವಾಗಿ ಅಲ್ಲದೆ ಸಮತಟ್ಟಾಗಿ ತಟ್ಟಿಕೊಳ್ಳಿ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಂಡು ಅದರಲ್ಲಿ ತಯಾರಿಸಿದ ಕಟ್ಲೇಟ್ ಹಾಕಿ ಎರಡೂ ಬದಿಯಲ್ಲಿ ಕೆಂಬಣ್ಣ ಬರುವಂತೆ ಮಧ್ಯಮ ಉರಿಯಲ್ಲಿ ಕರಿಯಿರಿ. ರುಚಿಕರವಾದ ಮತ್ತು ಆರೋಗ್ಯಕರವಾದ ಕಟ್ಲೇಟ್ ಅನ್ನು ಪುದಿನ ಚಟ್ನಿ ಅಥವಾ ಟೊಮೆಟೊ ಕೆಚಪ್‌ನೊಂದಿಗೆ ಸವಿಯಿರಿ.

ನವದೆಹಲಿಯಲ್ಲಿ ಮಳೆಯ ಅಬ್ಬರ; ಟ್ಯಾಕ್ಸಿ ಚಾಲಕ ಸೇರಿ ಐದು ಮಂದಿ ಸಾವು

ವಿಮಾನ ನಿಲ್ದಾಣದ ಚಾವಣಿ ಕುಸಿತ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮಳೆಯ ಅಬ್ಬರಕ್ಕೆ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಚಾವಣಿಯ ಒಂದು ಭಾಗ ಕುಸಿದಿದ್ದು, ಟ್ಯಾಕ್ಸಿ ಚಾಲಕರೊಬ್ಬರು ಮೃತಪಟ್ಟಿದ್ದಾರೆ.

ದೆಹಲಿಯಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ಒಟ್ಟು ಐದು ಮಂದಿ ಶುಕ್ರವಾರ ಮೃತಪಟ್ಟಿದ್ದಾರೆ.

ಚಾವಣಿಯ ಕುಸಿದ ಘಟನೆಯು ವಿಮಾನ ನಿಲ್ದಾಣದಲ್ಲಿನ ಮೂಲಸೌಕರ್ಯಗಳ ಗುಣಮಟ್ಟದ ಬಗ್ಗೆ ಪ್ರಶ್ನೆಗಳು ಏಳುವಂತೆ ಮಾಡಿದೆ. ಟರ್ಮಿನಲ್–1ರ ಮೂಲಕ ಕಾರ್ಯಾಚರಣೆ ನಡೆಸುವ ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

ಸ್ಥಳಕ್ಕೆ ಭೇಟಿ ನೀಡಿದ ಕೇಂದ್ರ ವಿಮಾನಯಾನ ಸಚಿವ ಕೆ.ರಾಮ ಮೋಹನ್ ನಾಯ್ಡು ಅವರು ಘಟನೆ ಬಗ್ಗೆ ತನಿಖೆಗೆ ಆದೇಶಿಸಿದ್ದು, ದೇಶದ ಎಲ್ಲ ವಿಮಾನ ನಿಲ್ದಾಣಗಳ ಮೂಲ ಸೌಕರ್ಯಗಳ ಸಮೀಕ್ಷೆ ನಡೆಸುವಂತೆಯೂ ಸೂಚಿಸಿದ್ದಾರೆ. ಚಾವಣಿಯ ಶೀಟ್‌ಗಳು ಮತ್ತು ಉಕ್ಕಿನ ತೊಲೆಗಳ ಅಡಿಯಲ್ಲಿ ಸಿಲುಕಿ ಹಲವು ವಾಹನಗಳು ಜಖಂಗೊಂಡಿವೆ. ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ.

‘ಟರ್ಮಿನಲ್–1ರ ಗೇಟ್ 1 ಮತ್ತು 2ರ ಬಳಿಯ ಚಾವಣಿ ಭಾರಿ ಮಳೆಯ ಕಾರಣದಿಂದ ಬೆಳಿಗ್ಗೆ 5ರ ವೇಳೆ ಕುಸಿದು ಬಿದ್ದಿದೆ’ ಎಂದು ವಿಮಾನ ನಿಲ್ದಾಣದ ಡಿಸಿಪಿ ಉಷಾ ರಂಗ್ನಾನಿ ತಿಳಿಸಿದರು.

‘ಟರ್ಮಿನಲ್–1ಕ್ಕೆ ಬರುವ ಮತ್ತು ಅಲ್ಲಿಂದ ನಿರ್ಗಮಿಸುವ ಎಲ್ಲ ವಿಮಾನಗಳ ಸಂಚಾರವನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ. ವಿಮಾನಗಳ ಸುಗಮ ಕಾರ್ಯಾಚರಣೆಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ’ ಎಂದು ಕೇಂದ್ರ ವಿಮಾನಯಾನ ಸಚಿವಾಲಯವು ‘ಎಕ್ಸ್’ನಲ್ಲಿ ತಿಳಿಸಿದೆ.

ಮಳೆಯ ಅಬ್ಬರ: ದೆಹಲಿಯಲ್ಲಿ ಶುಕ್ರವಾರ ಬೆಳಿಗ್ಗೆ ಸುಮಾರು ಮೂರು ಗಂಟೆ ಧಾರಾಕಾರ ಮಳೆ ಸುರಿಯಿತು. ಹಲವು ರಸ್ತೆಗಳು ಜಲಾವೃತಗೊಂಡು, ವಾಹನ ಸವಾರರು ಪರದಾಡಿದರು. ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನೀರು ನುಗ್ಗಿತು. ರೋಹಿಣಿ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ವಿದ್ಯುತ್ ತಗುಲಿ ಮೃತಪಟ್ಟರು. ವಸಂತ ವಿಹಾರ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಗೋಡೆ ಕುಸಿದು, ಮೂವರು ಕಾರ್ಮಿಕರು ಅವಶೇಷಗಳಡಿ ಸಿಲುಕಿದ್ದು, ತಡರಾತ್ರಿ ವರೆಗೂ ಅವರ ರಕ್ಷಣಾ ಕಾರ್ಯ ನಡೆದಿತ್ತು.



ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್–1ರ ಚಾವಣಿ ಕುಸಿದುಬಿದ್ದು ಕಾರುಗಳು ಜಖಂಗೊಂಡವು –ಪಿಟಿಐ ಚಿತ್ರ

88 ವರ್ಷಗಳಲ್ಲೇ ಅಧಿಕ ಮಳೆ

ದೆಹಲಿಯಲ್ಲಿ ಗುರುವಾರ ಬೆಳಿಗ್ಗೆ 8.30ರಿಂದ ಶುಕ್ರವಾರ ಬೆಳಿಗ್ಗೆ 8.30ರ ವರೆಗೆ 22.8 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜೂನ್ ತಿಂಗಳ ಸರಾಸರಿ (7.4 ಸೆಂ.ಮೀ.) ಮಳೆಗಿಂತ 3 ಪಟ್ಟು ಅಧಿಕ ಮಳೆ ಒಂದೇ ದಿನದಲ್ಲಿ ಸುರಿದಿದೆ. 1936ರ ಬಳಿಕ ಅಂದರೆ, ಕಳೆದ 88 ವರ್ಷಗಳಲ್ಲಿ ಜೂನ್ ತಿಂಗಳಲ್ಲಿ ದಾಖಲಾದ ಅತ್ಯಧಿಕ ಮಳೆ ಇದಾಗಿದೆ.

ಸಂಸದರ ಮನೆಗಳಿಗೆ ನುಗ್ಗಿದ ನೀರು

ಸಂಸದರಾದ ಶಶಿ ತರೂರ್ ಮತ್ತು ಮನೀಷ್ ತಿವಾರಿ ಅವರ ಮನೆಗಳಿಗೂ ನೀರು ನುಗ್ಗಿದೆ. ದೆಹಲಿಯ ಲುಟೆನ್ಸ್ ಪ್ರದೇಶದಲ್ಲಿರುವ ತಮ್ಮ ಮನೆಯ ಸುತ್ತಲೂ ನೀರು ಆವರಿಸಿರುವ ವಿಡಿಯೊವನ್ನು ಇಬ್ಬರೂ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

‘ಬೆಳಿಗ್ಗೆ ಎದ್ದಾಗ ಮನೆಯೊಳಗೆ ಸುಮಾರು ಒಂದು ಅಡಿಯಷ್ಟು ನೀರು ನಿಂತಿತ್ತು. ಕೊಠಡಿಗಳಲ್ಲಿದ್ದ ಪೀಠೋಪಕರಣಗಳು, ಕಾರ್ಪೆಟ್‌ಗಳು ಮತ್ತು ನೆಲದಲ್ಲಿದ್ದ ಎಲ್ಲ ವಸ್ತುಗಳಿಗೂ ಹಾನಿಯಾಗಿವೆ’ ಎಂದು ತರೂರ್ ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ. ದೆಹಲಿಯ ಸಚಿವೆ ಆತಿಶಿ ಅವರ ಮಥುರಾ ರಸ್ತೆಯ ನಿವಾಸದ ಸುತ್ತಲೂ ನೀರು ನಿಂತಿರುವ ವಿಡಿಯೊವನ್ನು ದೆಹಲಿ ಬಿಜೆಪಿ ಘಟಕವು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ರಾಜಕೀಯ ಕೆಸರೆರಚಾಟ

ವಿಮಾನ ನಿಲ್ದಾಣದ ಚಾವಣಿ ಕುಸಿದ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿವೆ. ‘ಮೋದಿ ಅವರ ಕಳೆದ 10 ವರ್ಷಗಳ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ನಿರ್ಲಕ್ಷ್ಯವೇ ಇಂತಹ ಘಟನೆಗಳಿಗೆ ಕಾರಣ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಸರ್ಕಾರದ ಮೂಲಗಳು ಇದಕ್ಕೆ ತಿರುಗೇಟು ನೀಡಿದ್ದು, ‘ಈಗ ಕುಸಿದಿರುವ ಟರ್ಮಿನಲ್ 2009ರಲ್ಲಿ ಉದ್ಘಾಟನೆಯಾಗಿತ್ತು. ಆಗ ಕಾಂಗ್ರೆಸ್ ಅಧಿಕಾರದಲ್ಲಿದ್ದು, ಘಟನೆಗೆ ಅವರನ್ನೇ ಹೊಣೆಯನ್ನಾಗಿಸಬೇಕು’ ಎಂದಿದೆ.



ಶಿಮ್ಲಾದಲ್ಲಿ ಶುಕ್ರವಾರ ಸುರಿದ ಭಾರಿ ಮಳೆಗೆ ಭೂಕುಸಿತ ಉಂಟಾಗಿದ್ದು, ರಸ್ತೆ ಬದಿ ನಿಲ್ಲಿಸಿದ್ದ ವಾಹನಗಳು ಮಣ್ಣಿನ ಅವಶೇಷಗಳ ಅಡಿ ಸಂಪೂರ್ಣವಾಗಿ ಹೂತುಹೋಗಿವೆ –ಪಿಟಿಐ ಚಿತ್ರ

ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶಕ್ಕೆ ಗುರುವಾರ ನೈರುತ್ಯ ಮುಂಗಾರು ಪ್ರವೇಶಿಸಿದ ಬೆನ್ನಲ್ಲೇ ರಾಜಧಾನಿ ಶಿಮ್ಲಾ ಸೇರಿದಂತೆ ರಾಜ್ಯದ ವಿವಿಧೆಡೆ ಶುಕ್ರವಾರ ಭಾರಿ ಮಳೆಯಾಗಿದೆ. ಹವಾಮಾನ ಇಲಾಖೆಯು ‘ಆರೆಂಜ್ ಅಲರ್ಟ್’ ಘೋಷಿಸಿದ್ದು, ರಾಜ್ಯದ 12 ಜಿಲ್ಲೆಗಳ ಪೈಕಿ 7 ಜಿಲ್ಲೆಗಳಲ್ಲಿ ಶನಿವಾರ ಮತ್ತು ಭಾನುವಾರ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂಬುದಾಗಿ ಮುನ್ಸೂಚನೆ ನೀಡಿದೆ.

ರಾಜ್ಯದಲ್ಲಿ ಮುಂದಿನ ಗುರುವಾರದವರೆಗೆ ಮಳೆ ಮುಂದುವರೆಯಲಿದೆ. ಸೋಮವಾರ ಮತ್ತು ಮಂಗಳವಾರ ಹೆಚ್ಚಿನ ಮಳೆಯಾಗಲಿರುವ ಹಿನ್ನೆಲೆಯಲ್ಲಿ ‘ಯೆಲ್ಲೊ ಅಲರ್ಟ್’ ಘೋಷಣೆ ಮಾಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿಮ್ಲಾದ ಜಬ್ಬರ್‌ಹಟ್ಟಿಯಲ್ಲಿ ಕಳೆದ 24 ಗಂಟೆಗಳಲ್ಲಿ 170 ಮಿ.ಮೀ. ಮಳೆಯಾಗಿದ್ದು, ಶಿಮ್ಲಾದಲ್ಲಿ 93 ಮಿ.ಮೀ. ಮಳೆಯಾಗಿದೆ. ಕಾಂಗ್ರಾ ಮತ್ತು ಕುಲ್ಲು ಜಿಲ್ಲೆಯಲ್ಲಿ ತಲಾ ಒಂದು ರಸ್ತೆಗಳು ಮಳೆಗೆ ಹಾಳಾಗಿದ್ದು, ಸಂಚಾರ ದಟ್ಟಣೆ ಉಂಟಾಗಿದೆ. ಶಿಮ್ಲಾದ ಮಲ್ಯಾಣ–ಸುರಾಳ ರಸ್ತೆಯಲ್ಲಿ ನಿಲ್ಲಿಸಿದ್ದ ವಾಹನಗಳು ಭೂಕುಸಿತದಿಂದಾಗಿ ಮಣ್ಣಿನ ಅವಶೇಷಗಳ ಅಡಿ ಸಿಲುಕಿವೆ. ಯಾವುದೇ ಪ್ರಾಣಾಪಾಯ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಮುಂಗಾರಿನಿಂದ ಸಂಭವಿಸಬಹುದಾದ ಎಲ್ಲ ಸವಾಲುಗಳನ್ನು ಎದುರಿಸಲು ರಾಜ್ಯ ಸರ್ಕಾರ ಸನ್ನದ್ಧವಾಗಿದೆ. ಆದಾಗ್ಯೂ, ಮೇಘಸ್ಫೋಟ ಸಂಭವಿಸಿ ನದಿಗಳು ಉಕ್ಕಿ ಹರಿಯುವ ಸಾಧ್ಯತೆಯಿದ್ದು, ಜನರು ಮುಂಜಾಗ್ರತೆ ವಹಿಸುವಂತೆ ಮನವಿ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ತಿಳಿಸಿದ್ದಾರೆ.

ಉತ್ತರ ಪ್ರದೇಶ ಸಿಡಿಲು ಬಡಿದು ಇಬ್ಬರ ಸಾವು

ಸುಲ್ತಾನಪುರ(ಉತ್ತರ ಪ್ರದೇಶ) (ಪಿಟಿಐ): ಜಿಲ್ಲೆಯ ಕುದ್ವಾರ ಪೊಲೀಸ್ ಠಾಣೆ ವ್ಯಾಪ್ತಿಯ ಸೆಹಗೌಲಿ ಗ್ರಾಮದಲ್ಲಿ ಸಿಡಿಲು ಬಡಿದು ಬಾಲಕಿ ಹಾಗೂ ಮಹಿಳೆಯೊಬ್ಬರು ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಸುಮ ಕೋರಿ (46) ಹಾಗೂ ನ್ಯಾನ್ಸಿ(13) ಮೃತರು.

ಜೋರಾಗಿ ಮಳೆ ಬಂದ ಹಿನ್ನೆಲೆಯಲ್ಲಿ ಈ ಇಬ್ಬರು ಮರದ ಕೆಳಗೆ ನಿಂತಿದ್ದಾಗ, ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿ ರಾಮವಿಲಾಸ್ ಯಾದವ್ ತಿಳಿಸಿದ್ದಾರೆ.

ಕಾಶ್ಮೀರಕ್ಕೆ ಬಂದ 4,600 ಯಾತ್ರಿಗಳು

ಶ್ರೀನಗರ/ ಜಮ್ಮು (ಪಿಟಿಐ): ವಾರ್ಷಿಕ ಅಮರನಾಥ ಯಾತ್ರೆಗಾಗಿ ಮೊದಲ ತಂಡದ ಯಾತ್ರಿಕರು ಶುಕ್ರವಾರ ಬಿಗಿ ಭದ್ರತೆ ನಡುವೆ ಕಾಶ್ಮೀರ ಕಣಿವೆ ತಲುಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಗರಕ್ಕೆ ಆಗಮಿಸಿದ 4,603 ಯಾತ್ರಾರ್ಥಿಗಳನ್ನು ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಖಾಜಿಗುಂಡ್ ಪ್ರದೇಶದ ನವಯುಗ್ ಸುರಂಗದಲ್ಲಿ ಪೊಲೀಸರು, ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸ್ಥಳೀಯರು ಸ್ವಾಗತಿಸಿದರು.

‘ಬಮ್ ಬಮ್ ಭೋಲೆ’ ಮತ್ತು ‘ಹರ್ ಹರ್ ಮಹಾದೇವ್’ ಘೋಷಣೆಗಳ ನಡುವೆ, ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಶುಕ್ರವಾರ ನಸುಕಿನಲ್ಲಿ ಜಮ್ಮುವಿನ ಭಗವತಿ ನಗರದಲ್ಲಿನ ಯಾತ್ರಿ ನಿವಾಸದ ಬೇಸ್ ಕ್ಯಾಂಪ್‌ನಿಂದ ಮೊದಲ ತಂಡದ ಯಾತ್ರೆಗೆ ಚಾಲನೆ ನೀಡಿದರು.

ಸಂಕಷ್ಟಕ್ಕೆ ಸಿಲುಕಿದ 65 ಕೋಟಿ ಭಾರತೀಯರು: ವಿಜ್ಞಾನಿಗಳ ವರದಿ

ಉಷ್ಣತೆ; 500 ಕೋಟಿ ಜನ ಬಾಧಿತ

ನವದೆಹಲಿ (ಪಿಟಿಐ): ಭಾರತದ 61.9 ಕೋಟಿ ಸೇರಿದಂತೆ ಜಾಗತಿಕವಾಗಿ 500 ಕೋಟಿ ಜನರು ಜೂನ್ ತಿಂಗಳ 9 ದಿನ ಜಾಗತಿಕ ಹವಾಮಾನ ಬದಲಾವಣೆಯಿಂದ ಉಂಟಾದ ತೀವ್ರ ಶಾಖವನ್ನು ಅನುಭವಿಸಿದ್ದಾರೆ ಎಂದು ಅಮೆರಿಕ ಮೂಲದ ಸ್ವತಂತ್ರ ಗುಂಪಿನ ವಿಜ್ಞಾನಿಗಳ ತಂಡವು ನಡೆಸಿದ ಅಧ್ಯಯನದಲ್ಲಿ ತಿಳಿಸಿದೆ.

‘ಚೀನಾದ 57.9 ಕೋಟಿ, ಇಂಡೊನೇಷ್ಯಾದ 23.1 ಕೋಟಿ, ನೈಜೀರಿಯಾದ 20.6 ಕೋಟಿ, ಬ್ರೆಜಿಲ್‌ನ 17.6 ಕೋಟಿ, ಬಾಂಗ್ಲಾದೇಶದ 17.1 ಕೋಟಿ, ಅಮೆರಿಕದ 16.5 ಕೋಟಿ, ಯುರೋಪ್‌ನ 15.2 ಕೋಟಿ, ಮೆಕ್ಸಿಕೊದ 12.3 ಕೋಟಿ, ಇಥೋಪಿಯಾದ 12.1 ಕೋಟಿ, ಈಜಿಪ್ಟ್‌ನ 10.3 ಕೋಟಿ ಮಂದಿ ಜೂನ್‌ನಲ್ಲಿ ಉಂಟಾದ ಅತಿಯಾದ ಬಿಸಿಲಿನಿಂದ ಉಂಟಾದ ಪರಿಣಾಮಕ್ಕೆ ತುತ್ತಾಗಿದ್ದಾರೆ’ ಎಂದು ಹವಾಮಾನ ಕೇಂದ್ರದ ವರದಿ ತಿಳಿಸಿದೆ.

‘ವಿಶ್ವದ ಶೇಕಡ 60ರಷ್ಟು ಜನರು ಬಿಸಿಲಿನ ಪರಿಣಾಮ ಎದುರಿಸಿದ್ದು, ಜೂನ್ 16ರಿಂದ 24ರವರೆಗೆ ಹವಾಮಾನ ತೀವ್ರವಾಗಿ ಬದಲಾಗಿತ್ತು’ ಎಂದು ತಿಳಿಸಿದೆ.

‘ಒಂದು ಶತಮಾನಕ್ಕೂ ಹೆಚ್ಚು ಕಾಲ ಕಲ್ಲಿದ್ದಲು, ತೈಲ, ನೈಸರ್ಗಿಕ ಇಂಧನವನ್ನು ಅತೀ ಹೆಚ್ಚು ಸುಡುತ್ತಿರುವುದು ಇಡೀ ಜಗತ್ತಿಗೆ ಅಪಾಯ ಕಾರಿಯಾಗಿದೆ. ವಿಶ್ವದಲ್ಲೇ ಬೇಸಿಗೆ ಸಂದರ್ಭದಲ್ಲಿ ಬಿಸಿಗಾಳಿ ಸಾಮಾನ್ಯವಾಗಿದ್ದು, ಇಂಗಾಲದ ಮಾಲಿನ್ಯವೂ ನಿಲ್ಲುವವರೆಗೂ ಈ ಪರಿಸ್ಥಿತಿ ಇರಲಿದೆ’ ಎಂದು ಹವಾಮಾನ ಕೇಂದ್ರದ ಮುಖ್ಯ ಕಾರ್ಯಕ್ರಮ ಅಧಿಕಾರಿ ಆ್ಯಂಡ್ರ್ಯೂ ಪರ್ಶಿಂಗ್ ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ನಡೆಯುವ ತಾಪಮಾನ ಬದಲಾವಣೆಗಳನ್ನು ಹವಾಮಾನ ಬದಲಾವಣೆ ಸೂಚ್ಯಂಕ (ಸಿಎಸ್‌ಐ)ದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

‘ಜೂನ್ 16ರಿಂದ 24ರವರೆಗೆ ಸಿಎಸ್‌ಐನ ಪ್ರಮಾಣವು ಮೂರರಷ್ಟಿತ್ತು. ಸಾಮಾನ್ಯ ದಿನಗಳಿಗಿಂತಲೂ ಬಿಸಿಲಿನ ಪ್ರಖರತೆ ಮೂರು ಪಟ್ಟು ಹೆಚ್ಚಾಗಿತ್ತು’ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ವರ್ಷ ಭಾರತವು ಇತಿಹಾಸದಲ್ಲೇ ಅತಿಯಾದ ಬಿಸಿಲು ದಾಖಲಾಗಿದ್ದು, 40 ಸಾವಿರ ಬಿಸಿಲಿನ ಆಘಾತದ ಪ್ರಕರಣಗಳು ವರದಿಯಾಗಿದ್ದು, ಈ ಕಾರಣದಿಂದ 100 ಮಂದಿ ಸಾವನ್ನಪ್ಪಿದ್ದರು. ನೀರಿನ ತೀವ್ರ ಸಮಸ್ಯೆ ಜೊತೆಗೆ ಹೆಚ್ಚಿನ ವಿದ್ಯುತ್ ಬೇಡಿಕೆಯಿಂದ ಪವರ್ ಗ್ರಿಡ್‌ಗಳ ಮೇಲೂ ಅತಿಯಾದ ಒತ್ತಡ ಉಂಟಾಗಿತ್ತು.

ಏಪ್ರಿಲ್–ಜೂನ್ ತಿಂಗಳ ಅವಧಿಯಲ್ಲಿ ಶಾಖದ ತೀವ್ರ ಅಲೆಗಳ ಪ್ರಮಾಣವು ದುಪ್ಪಟ್ಟು ದಾಖಲಾಗಿತ್ತು ಎಂದು ಭಾರತೀಯ ಹವಾಮಾನ ಇಲಾಖೆ ಪ್ರಕಟಿಸಿದ ವರದಿಯಲ್ಲಿ ದೃಢಪಟ್ಟಿತ್ತು. ರಾಜಸ್ಥಾನದಲ್ಲಿ ಗರಿಷ್ಠ ತಾಪಮಾನ 50 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ದೇಶದ ವಿವಿಧ ನಗರಗಳಲ್ಲಿಯೂ ರಾತ್ರಿ ವೇಳೆ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ತಿಳಿಸಿದೆ.

‘ದೆಹಲಿಯಲ್ಲಿ ಮೇ 13ರಿಂದ ಸತತ 40 ದಿನಗಳ ಕಾಲ ತಾಪಮಾನವು 40 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಬಿಸಿಲಿನ ಹೊಡೆತಕ್ಕೆ ಈ ವರ್ಷ 60 ಮಂದಿ ಸಾವನ್ನಪ್ಪಿದ್ದಾರೆ’ ಎಂದು ಮಾಧ್ಯಮದ ವರದಿಗಳು ತಿಳಿಸಿದೆ.



ಅಮೆರಿಕದ ಬಾಸ್ಟನ್‌ನಲ್ಲಿ ಜೂನ್ 20ರಂದು ದಾಖಲಾದ ತೀವ್ರ ಬಿಸಿಲಿನಿಂದ ಪಾರಾಗಲು ಮಕ್ಕಳು ನೀರಿನಾಟದಲ್ಲಿ ತೊಡಗಿದ್ದರು–ಎಎಫ್‌ಪಿ ಚಿತ್ರ

ಸೆಂಗೋಲ್ ತೆರವಿಗೆ ಒತ್ತಾಯಿಸಿದ ಎಸ್‌ಪಿಗೆ ಮಾಯಾವತಿ ಸಲಹೆ

‘ನಿರ್ಲಕ್ಷಿತ ಜನರ ಸಮಸ್ಯೆಯನ್ನೂ ಚರ್ಚಿಸಲಿ’

ಲಖನೌ (ಪಿಟಿಐ): ‘ಸೆಂಗೋಲ್’ ಬದಲಿಸಬೇಕು ಎಂಬ ಆಗ್ರಹದ ಜೊತೆಗೆ, ದುರ್ಬಲ ಮತ್ತು ನಿರ್ಲಕ್ಷಿತ ವರ್ಗಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಲೋಕಸಭೆಯಲ್ಲಿ ಸಮಾಜವಾದಿ ಪಕ್ಷ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕು ಎಂದು ಮಾಯಾವತಿ ಆಗ್ರಹಪಡಿಸಿದ್ದಾರೆ.

ಬಿಎಸ್‌ಪಿ ಅಧ್ಯಕ್ಷೆ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಯೂ ಆದ ಮಾಯಾವತಿ ಅವರು, ಲೋಕಸಭೆಯಲ್ಲಿ ಸಮಾಜವಾದಿ ಪಕ್ಷದ ಸದಸ್ಯ ಆರ್.ಕೆ.ಚೌಧರಿ ಅವರ ಆಗ್ರಹ ಉಲ್ಲೇಖಿಸಿ ಈ ಮಾತು ಹೇಳಿದರು.



ಮಾಯಾವತಿ

ಲೋಕಸಭೆ ಸ್ಪೀಕರ್ ಅವರಿಗೆ ಪತ್ರ ಬರೆದಿದ್ದ ಚೌಧರಿ, ‘ಸೆಂಗೋಲ್’ ಬದಲಿಗೆ ಸಂವಿಧಾನದ ಪ್ರತಿಯನ್ನು ಲೋಕಸಭೆಯಲ್ಲಿ ಇಡಬೇಕು ಎಂದು ಆಗ್ರಹಪಡಿಸಿದ್ದರು.

‘ಎಕ್ಸ್’ ಜಾಲತಾಣದಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಮಾಯಾವತಿ ಅವರು, ‘ಸೆಂಗೋಲ್ ವಿಷಯದ ಜೊತೆಗೆ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಸಮಾಜವಾದಿ ಪಕ್ಷ ಲೋಕಸಭೆಯಲ್ಲಿ ಪ್ರಸ್ತಾಪಿಸಲಿ. ಆದರೆ, ವಸ್ತುಸ್ಥಿತಿ ಏನೆಂದರೆ ದುರ್ಬಲ ವರ್ಗದವರಿಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಆ ಪಕ್ಷ ಮೌನವಾಗಿಯೆ ಇರಲಿದೆ’ ಎಂದಿದ್ದಾರೆ.

‘ಬಿಜೆಪಿ ನಾಯಕಿ ಮೇಲೆ ಟಿಎಂಸಿ ಬೆಂಬಲಿಗರಿಂದ ಹಲ್ಲೆ’

ಕೋಲ್ಕತ್ತ: ಬಿಜೆಪಿಯ ಅಲ್ಪಸಂಖ್ಯಾತ ಮೋರ್ಚಾದ ನಾಯಕಿಯೊಬ್ಬರ ಮೇಲೆ ಟಿಎಂಸಿ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ ಎಂದು ಪಶ್ಚಿಮ ಬಂಗಾಳದ ವಿಪಕ್ಷದ ನಾಯಕ ಸುವೆಂದು ಅಧಿಕಾರಿ ದೂರಿದ್ದಾರೆ.

‘ಈ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗಕ್ಕೆ ದೂರು ನೀಡಲಾಗಿದ್ದು, ತನಿಖೆ ನಡೆಸಬೇಕು’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಸೊರೇನ್ ಬಿಡುಗಡೆ



ರಾಂಚಿ (ಪಿಟಿಐ): ಭೂಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರ್ಖಂಡ್ ಹೈಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಬಿರ್ಸಾ ಮುಂಡಾ ಕಾರಾಗೃಹದಿಂದ ಸೊರೇನ್ ಅವರು ಬಿಡುಗಡೆಯಾದರು. ಈ ವೇಳೆ ಕಾರಾಗೃಹದ ಬಳಿ ಸೇರಿದ್ದ ಜಾರ್ಖಂಡ್ ಮುಕ್ತಿ ಮೋರ್ಚಾದ ಕಾರ್ಯಕರ್ತರು, ಸೊರೇನ್ ಪರ ಘೋಷಣೆ ಮತ್ತು ಜೈಕಾರ ಕೂಗಿದರು .

ಈ ಕುರಿತ ಅರ್ಜಿಯನ್ನು ಜೂನ್ 13ರಂದು ವಿಚಾರಣೆ ನಡೆಸಿದ್ದ ನ್ಯಾಯಾಲಯವು ಆದೇಶವನ್ನು ಕಾಯ್ದಿರಿಸಿತ್ತು.

‘₹50 ಸಾವಿರ ಮೌಲ್ಯದ ಬಾಂಡ್ ಮತ್ತು ಇದೇ ಮೊತ್ತದ ಇಬ್ಬರು ಶ್ಯೂರಿಟಿಯೊಂದಿಗೆ ಸೊರೇನ್ ಅವರನ್ನು ಜಾಮೀನಿನ ಮೇರೆಗೆ ಬಿಡುಗಡೆ ಮಾಡಬೇಕು’ ಎಂದು ನ್ಯಾಯಮೂರ್ತಿ ರಂಗೋನ್ ಮುಖ್ಯೋಪಾಧ್ಯಾಯ ಅವರಿದ್ದ ಏಕಸದಸ್ಯ ಪೀಠ ಆದೇಶ ಹೊರಡಿಸಿದೆ.

ಸ್ಫೋಟ; 5 ಸಾವು

ಹೈದರಾಬಾದ್ (ಪಿಟಿಐ): ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಗಾಜಿನ ಕಾರ್ಖಾನೆಯೊಂದರಲ್ಲಿ ಶುಕ್ರವಾರ ಸಂಭವಿಸಿದ ಸ್ಫೋಟದಲ್ಲಿ ಐವರು ಮೃತಪಟ್ಟಿದ್ದು, 15 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾದ್‌ನಗರದ ಕಾರ್ಖಾನೆಯಲ್ಲಿನ ಟ್ಯಾಂಕ್ ಸಂಜೆ 4.30ರ ವೇಳೆಗೆ ಸ್ಫೋಟಗೊಂಡಿದೆ ಎಂದು ಅವರು ಹೇಳಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಂತಾಜನಕ ಸ್ಥಿತಿಯಲ್ಲಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಿಕ್ರಮ್ ಮಿಸ್ರಿ ವಿದೇಶಾಂಗ ಕಾರ್ಯದರ್ಶಿ



ನವದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತಾ ಉಪ ಸಲಹೆಗಾರ ವಿಕ್ರಮ್ ಮಿಸ್ರಿ ಅವರನ್ನು ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

‘ಮಿಸ್ರಿ ಅವರಿಗಿರುವ ರಾಷ್ಟ್ರೀಯ ಭದ್ರತಾ ಉಪ ಸಲಹೆಗಾರ ಅಧಿಕಾರವನ್ನು ಮೊಟಕುಗೊಳಿಸಿ, ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಲು ಸಚಿವ ಸಂಪುಟದ ನೇಮಕಾತಿ ಸಮಿತಿಯು ಅನುಮತಿ ನೀಡಿದ್ದು, ಜುಲೈ 15ರಿಂದ ಅವರ ಕಾರ್ಯಾವಧಿ ಆರಂಭವಾಗಲಿದೆ’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ ಶುಕ್ರವಾರ ಆದೇಶಿಸಿದೆ.

ಪ್ರಸ್ತುತ ವಿದೇಶಾಂಗ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ವಿನಯ್ ಮೋಹನ್ ಕ್ವಾತ್ರ ಅವರ ಸೇವಾವಧಿಯು ಮಾರ್ಚ್‌ನಲ್ಲಿ ಮುಕ್ತಾಯವಾಗಬೇಕಿತ್ತು ಆದರೆ, ಸರ್ಕಾರ ಅವರ ಸೇವಾವಧಿಯನ್ನು 6 ತಿಂಗಳು ವಿಸ್ತರಿಸಿತ್ತು.

ಅಭಿಮತ



❦ ಸುಭಾಷಿತ ❦

ಗಟ್ಟಿಯಾದ ಮನಸ್ಸು ಸೋಲಲು ಸಾಧ್ಯವಿಲ್ಲ.
-ಸಿದ್ಧೇಶ್ವರ ಸ್ವಾಮೀಜಿ

ಕಾರ್ಮಿಕ ಕಲ್ಯಾಣ ಮಂಡಳಿ ನಿಧಿ ಬಳಕೆಯಲ್ಲಿ ಪಾರದರ್ಶಕತೆ ಇರಲಿ

ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ರಾಜ್ಯದಲ್ಲಿರುವ ನಿರ್ಮಾಣ ಕಾರ್ಮಿಕರ ಕುಟುಂಬಗಳಿಗೆ ಅಗತ್ಯ ನೆರವು ಕಲ್ಪಿಸಿ, ಅವರ ಜೀವನಮಟ್ಟ ಸುಧಾರಣೆಗೆ ನೆರವಾಗುವ ಮಹತ್ತರವಾದ ಹೊಣೆಗಾರಿಕೆಯನ್ನು ಹೊಂದಿದೆ. ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ– 1996ರ ಅಡಿಯಲ್ಲಿ ಈ ಮಂಡಳಿ 2007ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 40 ಲಕ್ಷ ಕಾರ್ಮಿಕರು ಈ ಮಂಡಳಿಯಲ್ಲಿ ನೋಂದಾಯಿತರಾಗಿದ್ದಾರೆ. ಬೃಹತ್ ನಿರ್ಮಾಣ ಕಾಮಗಾರಿ ಕೈಗೊಳ್ಳುವವರು ನಿರ್ಮಾಣ ಕಾಮಗಾರಿಗಳ ಒಟ್ಟು ಮೌಲ್ಯದ ಶೇಕಡ 1ರಷ್ಟನ್ನು ಸೆಸ್ ರೂಪದಲ್ಲಿ ಮಂಡಳಿಗೆ ಪಾವತಿಸಬೇಕು. ನೋಂದಣಿಯಾಗುವ ಕಾರ್ಮಿಕರೂ ಅತ್ಯಲ್ಪ ಪ್ರಮಾಣದ ಶುಲ್ಕ ನೀಡಬೇಕು. 2006–07ರಿಂದ 2023–24ನೇ ಆರ್ಥಿಕ ವರ್ಷದ ಅಂತ್ಯದವರೆಗೆ ಮಂಡಳಿಯು ಸಂಗ್ರಹಿಸಿದ ಸೆಸ್, ನೋಂದಣಿ ಶುಲ್ಕ ಮತ್ತು ಅವುಗಳ ಮೇಲೆ ಬ್ಯಾಂಕ್‌ಗಳಿಂದ ದೊರೆತ ಬಡ್ಡಿಯ ಒಟ್ಟು ಮೊತ್ತ ₹ 14,000 ಕೋಟಿಗೂ ಹೆಚ್ಚು. ನಿರ್ಮಾಣ ಕಾರ್ಮಿಕರ ಕುಟುಂಬಗಳಿಗಾಗಿ ಮಂಡಳಿಯು ಶೈಕ್ಷಣಿಕ ಸಹಾಯಧನ, ವಿವಾಹ ಸಹಾಯಧನ, ಅಪಘಾತ ಮತ್ತು ಮರಣ ಪರಿಹಾರ, ವೈದ್ಯಕೀಯ ವೆಚ್ಚ ಪಾವತಿ, ವಸತಿ ಸೌಲಭ್ಯ ಸೇರಿದಂತೆ ನೇರ ಅನುಕೂಲದ ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಕಾರ್ಮಿಕರಿಗೆ ಪರೋಕ್ಷವಾಗಿ ಅನುಕೂಲ ಕಲ್ಪಿಸುವಂತಹ ಕೆಲವು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದೆ. ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ₹ 6,000 ಕೋಟಿಗೂ ಹೆಚ್ಚು ಮೊತ್ತವನ್ನು ಈ ಯೋಜನೆಗಳ ಅಡಿಯಲ್ಲಿ ವೆಚ್ಚ ಮಾಡಲಾಗಿದೆ ಎಂಬುದನ್ನು ಮಂಡಳಿಯ ಅಂಕಿಅಂಶಗಳು ಹೇಳುತ್ತವೆ.



ನಿರ್ಮಾಣ ಕಾರ್ಮಿಕರಿಗೆ ನೆಮ್ಮದಿಯ ನಾಳೆಗಳನ್ನು ಖಾತರಿಪಡಿಸುವಂತಹ ಯೋಜನೆಗಳ ಅನುಷ್ಠಾನಕ್ಕೆ ಮಂಡಳಿ ಒತ್ತು ನೀಡಬೇಕು

ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ನೆರವು ನೀಡುವುದಕ್ಕಾಗಿಯೇ ಸಂಗ್ರಹಿಸಿದ ಹಣ ಬಳಕೆಗೆ ಮಂಡಳಿ ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಹಲವು ವರ್ಷಗಳಿಂದಲೂ ಆಕ್ಷೇಪ ವ್ಯಕ್ತವಾಗುತ್ತಲೇ ಇದೆ. ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ಶೈಕ್ಷಣಿಕ ಸಹಾಯಧನದ ಮೊತ್ತವನ್ನು ಕಡಿತಗೊಳಿಸಿದ್ದನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಒಕ್ಕೂಟ ಹಾಗೂ ಇತರರು ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ಅಂತಹ ಅನೇಕ ಸಂಗತಿಗಳು ಹೊರಬಂದಿವೆ. ತನ್ನ ಬಳಿ ₹ 8,000 ಕೋಟಿಯಷ್ಟು ಬೃಹತ್ ಮೊತ್ತ ಇದ್ದಾಗ್ಯೂ ವಿದ್ಯಾರ್ಥಿಗಳ ಶೈಕ್ಷಣಿಕ ಸಹಾಯಧನದ ಮೊತ್ತವನ್ನು ಕಡಿತಗೊಳಿಸಿದ ಕ್ರಮವನ್ನು ಸಮರ್ಥಿಸಿಕೊಳ್ಳಲಾಗದೇ ಮಂಡಳಿಯು ನ್ಯಾಯಾಲಯದಲ್ಲಿ ಪೇಚಿಗೆ ಸಿಲುಕಿದೆ. ತನ್ನ ಬಳಿ ಲಭ್ಯವಿರುವ ಹಣದ ಕುರಿತು ಸರಿಯಾಗಿ ಮಾಹಿತಿ ನೀಡಲು ಹಿಂದೇಟು ಹಾಕಿ ಆರಂಭದಲ್ಲೇ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡ ಮಂಡಳಿಯು ಈವರೆಗೆ ಮಾಡಿರುವ ವೆಚ್ಚದ ಬಗ್ಗೆಯೂ ಸರಿಯಾದ ಮಾಹಿತಿ ಒದಗಿಸದೇ ಟೀಕೆಗೊಳಗಾಗಿದೆ. ಲಭ್ಯವಿರುವ ಹಣ ಮತ್ತು ಈವರೆಗಿನ ವೆಚ್ಚದ ಕುರಿತು ಪಾರದರ್ಶಕ ರೀತಿಯಲ್ಲಿ ಮಾಹಿತಿ ಹಂಚಿಕೊಳ್ಳಲು ಹಿಂದೇಟು ಹಾಕುತ್ತಿರುವ ಮಂಡಳಿಯ ನಡೆಯು ಅಲ್ಲಿನ ವಹಿವಾಟುಗಳ ಬಗ್ಗೆ ಸಂಶಯಕ್ಕೆ ಎಡೆಮಾಡಿದೆ. ಅನುದಾನದ ಮಾರ್ಗಪಲ್ಲಟಕ್ಕೆ ಪ್ರಯತ್ನ, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಕಾರ್ಮಿಕರಿಗೆ ನೆರವು ನೀಡುವ ಹೆಸರಿನಲ್ಲಿ ದುಂದುವೆಚ್ಚ, ಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆಯಲ್ಲಿ ಅಕ್ರಮ, ಕಾರ್ಮಿಕರಲ್ಲದವರನ್ನು ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಣಿ ಮಾಡಿಸಿರುವುದು ಸೇರಿದಂತೆ ಹಲವು ಆರೋಪಗಳು ಈ ಹಿಂದೆ ಕೇಳಿಬಂದಿದ್ದವು.

ನಿರ್ಮಾಣ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲಿ ಹೆಚ್ಚಿನವರು ಅಲೆಮಾರಿಗಳಂತೆ ಬದುಕುತ್ತಿದ್ದಾರೆ. ಜೀವನೋಪಾಯಕ್ಕಾಗಿ ಹುಟ್ಟಿದ ಊರು ತೊರೆದು ನಗರ, ಪಟ್ಟಣ ಪ್ರದೇಶಗಳಿಗೆ ವಲಸೆ ಬಂದು ದೈಹಿಕ ಶ್ರಮದಲ್ಲೇ ಜೀವನ ನಡೆಸುತ್ತಿರುವವರಿಗೆ ಈ ಮಂಡಳಿ ಭರವಸೆಯ ಬೆಳಕಾಗಬೇಕಿತ್ತು. ದುಡಿಯುವ ವರ್ಗದ ಜನರ ಜೀವನಮಟ್ಟ ಸುಧಾರಣೆಗೆ ಪೂರಕವಾಗಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕೆಲಸವನ್ನು ಸಂಶಯಕ್ಕೆ ಎಡೆ ಇಲ್ಲದಂತೆ ಮಾಡಬೇಕಿತ್ತು. ಆದರೆ, ಶೈಕ್ಷಣಿಕ ಸಹಾಯಧನಕ್ಕೆ ಕತ್ತರಿ ಹಾಕಿರುವ ಅಧಿಕಾರಿಗಳು ಬಡವರ ಜೀವನಮಟ್ಟ ಸುಧಾರಣೆಗೆ ಮೀಸಲಾದ ನಿಧಿಯನ್ನು ಆಡಳಿತ ನಿರ್ವಹಣೆ ಹೆಸರಿನಲ್ಲಿ ಮನಸೋಇಚ್ಛೆ ಬಳಕೆ ಮಾಡಿರುವುದು ಮಹಾಲೇಖಪಾಲರ ವರದಿಯಲ್ಲಿ ಬಯಲಾಗಿದೆ. ಅನುದಾನದ ಕೊರತೆಯ ನೆಪವೊಡ್ಡಿ ಆರು ಲಕ್ಷದಷ್ಟು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನಿರಾಕರಿಸಿರುವ ಮಂಡಳಿಯ ಅಧಿಕಾರಿಗಳ ನಡೆಯನ್ನು ಒಪ್ಪಲಾಗದು. ಇತ್ತೀಚಿನ ವರ್ಷಗಳಲ್ಲಿ ಫಲಾನುಭವಿಗಳಿಗೆ ನೇರವಾಗಿ ತಲುಪುವಂತಹ ಕಾರ್ಯಕ್ರಮಗಳಿಗಿಂತಲೂ ಟೆಂಡರ್ ಮೂಲಕ ನಿರ್ವಹಿಸುವ ಕಾರ್ಯಕ್ರಮಗಳಿಗೇ ಹೆಚ್ಚು ವೆಚ್ಚ ಮಾಡುತ್ತಿರುವ ಬಗ್ಗೆ ಕಾರ್ಮಿಕರ ವಲಯದಲ್ಲಿ ಆಕ್ಷೇಪಗಳಿವೆ. ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮಂಡಳಿ ಅನುಸರಿಸುತ್ತಿರುವ ಇಂತಹ ನೀತಿಯೂ ಅನುಮಾನಗಳಿಂದ ಹೊರತಾಗಿಲ್ಲ. ಮಂಡಳಿಯು ಸಂಪನ್ಮೂಲ ಸಂಗ್ರಹ ಮತ್ತು ವೆಚ್ಚ ಎರಡೂ ವಿಚಾರಗಳಲ್ಲಿ ಸಂಪೂರ್ಣ ಪಾರದರ್ಶಕತೆ ಅಳವಡಿಸಿಕೊಳ್ಳಬೇಕು. ಹೈಕೋರ್ಟ್ ಆದೇಶದಂತೆ ಈಗ ಲಭ್ಯವಿರುವ ಹಣ ಮತ್ತು ವೆಚ್ಚದ ಕುರಿತು ಮಾಹಿತಿ ಬಹಿರಂಗಪಡಿಸುವುದರ ಜತೆಗೆ ಮುಂದೆಯೂ ನಿಯಮಿತವಾಗಿ ಆ ಕೆಲಸವನ್ನು ಮುಂದುವರಿಸಬೇಕು. ಮಂಡಳಿಯಲ್ಲಿ ಪಾರದರ್ಶಕತೆ ತರುವ ಹೊಣೆಗಾರಿಕೆ ಕಾರ್ಮಿಕ ಇಲಾಖೆಗೂ ಸೇರಿದೆ. ಗುತ್ತಿಗೆದಾರರು ಮತ್ತು ಪೂರೈಕೆದಾರರ ಜೇಬು ತುಂಬಿಸುವ ಯೋಜನೆಗಳಿಗಿಂತಲೂ ನಿರ್ಮಾಣ ಕಾರ್ಮಿಕರು ಹಾಗೂ ಅವರ ಕುಟುಂಬದ ಸದಸ್ಯರಿಗೆ ನೆಮ್ಮದಿಯ ನಾಳೆಗಳನ್ನು ಖಾತರಿಪಡಿಸುವಂತಹ ಯೋಜನೆಗಳ ಅನುಷ್ಠಾನಕ್ಕೆ ಮಂಡಳಿ ಒತ್ತು ನೀಡಬೇಕು.

ದಿನದ ಟ್ವೀಟ್

ಅಪಘಾತ ತಪ್ಪಿಸಿ, ಜೀವ ಉಳಿಸಿ

ವಾಹನಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿರುವುದರಿಂದ, ನಾಗರಿಕರಲ್ಲಿ ಸಂಚಾರ ನಿಯಮಗಳ ಬಗ್ಗೆ ಮೂಲಭೂತವಾದ ಅರಿವು ಮೂಡಿಸಬೇಕಾದ ಅಗತ್ಯವಿದೆ. ರಸ್ತೆ ಸಂಚಾರವು 'ವ್ಯಕ್ತಿ ಜೀವಂತವಾಗಿ ವಾಪಸ್ ಬರುತ್ತಾನೆಯೇ' ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಸ್ಥಿತಿ ಇದೆ.



ವಿಜಯ್ ಕುಮಾರ್ ಜಿ., ಸಂಸ್ಥಾಪಕ ಮತ್ತು ನಿರ್ದೇಶಕ, ಗುರು ದೀಕ್ಷಾ ಅಕಾಡೆಮಿ

ಕಿಡಿನುಡಿ



ಮುಖ್ಯಮಂತ್ರಿ ಬದಲಾವಣೆ ಮತ್ತು ಇನ್ನಷ್ಟು ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಬಹಿರಂಗ ಹೇಳಿಕೆ ನೀಡುತ್ತಿರುವ ಕಾಂಗ್ರೆಸ್ ಮುಖಂಡರ ವಿರುದ್ಧ ಹೈಕಮಾಂಡ್ ಶಿಸ್ತುಕ್ರಮ ಕೈಗೊಳ್ಳಬೇಕು.



ಆರ್.ವಿ.ದೇಶಪಾಂಡೆ, ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 29-6-1999

● ಸಿಯಾಚಿನ್ ವಶಕ್ಕೆ ಪಾಕ್ ಹತಾಶ ಯತ್ನ ವಿಫಲ

ನವದೆಹಲಿ, ಜೂನ್ 28– ಕಾರ್ಗಿಲ್ ಪ್ರದೇಶದ ನಂತರ ಈಗ ಸಿಯಾಚಿನ್ ಕಡೆಗೆ ಕಣ್ಣಿಟ್ಟಿರುವ ಪಾಕಿಸ್ತಾನ ಸೇನೆ, ದಕ್ಷಿಣ ಸಿಯಾಚಿನ್ ಹಿಮನದಿ ಪ್ರದೇಶದ ಇಳಿಜಾರು ನೆಲವನ್ನು ಆಕ್ರಮಿಸಿಕೊಳ್ಳಲು ನಿನ್ನೆ ನಡೆಸಿದ ಯತ್ನವನ್ನು ಭಾರತೀಯ ಸೇನೆ ವಿಫಲಗೊಳಿಸಿದೆ.

ಪಾಕಿಸ್ತಾನ ಸೇನೆಯು ಈ ಪ್ರದೇಶಕ್ಕೆ 26ರಂದು ದಾಳಿ ಆರಂಭಿಸಿತು. ಎತ್ತರದ ಪರ್ವತ ಶಿಖರದಲ್ಲಿ ಸಮರ ನಡೆಸಲು ವಿಶೇಷ ತರಬೇತಿ ಹೊಂದಿರುವ ಭಾರತೀಯ ಕಮಾಂಡೋಗಳು ಪ್ರತಿದಾಳಿ ನಡೆಸಿ ಪಾಕಿಸ್ತಾನಿ ಸೈನಿಕರನ್ನು ಹಿಮ್ಮೆಟ್ಟಿಸಿದರು.

● ಪ್ರಾಥಮಿಕ ಶಿಕ್ಷಕರ ಪ್ರತಿಭಟನೆ

ಬೆಂಗಳೂರು, ಜೂನ್ 28– ಐದನೇ ವೇತನ ಆಯೋಗದ ವೇತನ ತಾರತಮ್ಯವನ್ನು ಕೂಡಲೇ ಸರಿಪಡಿಸಬೇಕೆಂದು ಒತ್ತಾಯಿಸಿ ರಾಜ್ಯದ ವಿವಿಧ ಭಾಗಗಳಿಂದ ನಗರಕ್ಕೆ ಬಂದಿದ್ದ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರು ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಿದರು.

ವಿಧಾನಸೌಧದ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿದ್ದ ಕಾರಣ, ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆಯಲ್ಲಿ ಹೊರಟ ಹಲವು ಹತ್ತು ಸಾವಿರ ಸಂಖ್ಯೆಯ ಶಿಕ್ಷಕರು ಮಲ್ಲೇಶ್ವರಂ ಆಟದ ಮೈದಾನದಲ್ಲಿ ಸಭೆ ಸೇರಿದರು.

50 ವರ್ಷಗಳ ಹಿಂದೆ

ಶನಿವಾರ, 29-6-1974

● ಕೃತಕ ಮಳೆ ತರಿಸಲು ಸಿದ್ಧತೆ

ಬೆಂಗಳೂರು, ಜೂನ್ 28– ರಾಜ್ಯದಲ್ಲಿ ಮಳೆ ಸಂಪೂರ್ಣವಾಗಿ ವಿಫಲವಾಗಿ, ಪರಿಸ್ಥಿತಿ ತೀರಾ ವಿಷಮಿಸುತ್ತಿರುವುದರಿಂದ, ಲಿಂಗನಮಕ್ಕಿ ಮತ್ತಿತರ ಅಗತ್ಯ ಪ್ರದೇಶಗಳಲ್ಲಿ 'ಕೃತಕ ಮಳೆ' ತರಿಸುವ ಕಾರ್ಯಕ್ರಮವನ್ನು ರಾಜ್ಯ ವಿದ್ಯುತ್ ಮಂಡಳಿಯು ರೂಪಿಸುತ್ತಿದೆ.

ದೆಹಲಿಯಿಂದ ಬೆಂಗಳೂರಿಗೆ ಹಿಂದಿರುಗಿದ ಮಂಡಳಿಯ ಅಧ್ಯಕ್ಷ ಶ್ರೀ ಶಿವಪ್ರಕಾಶ ಅವರು, ಈ ಸಂಬಂಧದಲ್ಲಿ ಈಗಾಗಲೇ ಕೇಂದ್ರ ಹವಾಮಾನ ಇಲಾಖೆಯ ಡೈರೆಕ್ಟರ್ ಜನರಲ್ ಅವರೊಡನೆ ಮಾತುಕತೆ ನಡೆಸಿದ್ದಾರೆ.

● ಶ್ರೀಲಂಕೆಗೆ ಕಛತೀವು 'ಭೂದಾನ'ದ ವಿರುದ್ಧ ಜನಸಂಘದ ರಿಟ್

ಮುಂಬೈ, ಜೂನ್ 28– ಕಛತೀವು ದ್ವೀಪವನ್ನು ಶ್ರೀಲಂಕೆಗೆ ಬಿಟ್ಟುಕೊಡುವ ಕೇಂದ್ರದ ವಿರುದ್ಧ ಜನಸಂಘವು ವಿವಾದ ಎಬ್ಬಿಸಿದೆ.

ಆಯಕಟ್ಟಿನಲ್ಲಿರುವ ಈ ದ್ವೀಪದ ಪರಮಾಧಿಕಾರ ಬಿಟ್ಟುಕೊಡುವುದರ ವಿರುದ್ಧ ಮದ್ರಾಸ್ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಹಾಕುವುದಾಗಿ ಆ ರಾಜ್ಯದ ಘಟಕಕ್ಕೆ ಆದೇಶ ನೀಡಿರುವುದಾಗಿ ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಪ್ರಕಟಿಸಿದರು.

ಪ್ರವೇಶ ಪರೀಕ್ಷೆಗಳನ್ನೂ ಸಮರ್ಪಕವಾಗಿ ನಡೆಸಲಾಗದಷ್ಟು ದುರ್ಬಲವಾಗಿದೆಯೇ ವ್ಯವಸ್ಥೆ?

ನೀಟ್‌ಗೆ 'ಅನಾರೋಗ್ಯ': ಕಾಯುವವರಾರು?



ವಿಶ್ಲೇಷಣೆ

ಡಾ. ವಿನಯ ಶ್ರೀನಿವಾಸ್

ಇದೇ ತಿಂಗಳ 23ರಂದು ನಡೆಯಬೇಕಿದ್ದ ಈ ಬಾರಿಯ ವೈದ್ಯಕೀಯ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ (ನೀಟ್) ನನ್ನ ಪುತ್ರನೂ ಸಿದ್ಧತೆ ನಡೆಸಿದ್ದ. ಅರ್ಜಿ ತುಂಬುವಾಗ, ಎಷ್ಟೇ ಪ್ರಯತ್ನಪಟ್ಟರೂ ನಮ್ಮ ಊರು ಶಿವಮೊಗ್ಗದಲ್ಲಿನ ಪರೀಕ್ಷಾ ಕೇಂದ್ರ ದೊರಕದಿದ್ದಾಗ, ಲಭ್ಯವಿದ್ದ ಕೇಂದ್ರಗಳಲ್ಲಿಯೇ ಒಂದನ್ನು ಆಯ್ದುಕೊಳ್ಳಬೇಕಾಯಿತು. ನಮ್ಮೂರಿನಿಂದ ಸುಮಾರು ಇನ್ನೂರು ಕಿಲೊಮೀಟರ್ ದೂರದಲ್ಲಿದ್ದ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆಯ ಹಿಂದಿನ ದಿನವೇ ನಾನು ಮತ್ತು ನಮ್ಮವರು ಮಗನೊಡನೆ ಪಯಣ ಬೆಳೆಸಿದೆವು. ಬರೋಬ್ಬರಿ ಒಂದು ವರ್ಷದಿಂದ ಪರೀಕ್ಷಾ ಸಿದ್ಧತೆಯನ್ನು ನಡೆಸಿದ್ದ ಅವನಲ್ಲಿ ಒಂದಿಷ್ಟು ಮಾನಸಿಕ ಸ್ಥೈರ್ಯ ತುಂಬುವ ಆಶಯ ನಮ್ಮದಾಗಿತ್ತು.

ಪರೀಕ್ಷಾ ಕೇಂದ್ರವಿದ್ದ ಊರಿನಲ್ಲಿ ನಾವು ತಂಗಿದ್ದ ಹೋಟೆಲಿನಲ್ಲಿ ಅಡ್ಡಾಡುವಾಗ, ನಮ್ಮಂತೆಯೇ ತಮ್ಮ ಮಕ್ಕಳನ್ನು ಇದೇ ಪ್ರವೇಶ ಪರೀಕ್ಷೆಗೆ ಕರೆತಂದಿದ್ದ ಹಲವು ಪೋಷಕರು ಅಲ್ಲಿ ತಂಗಿದ್ದುದು ತಿಳಿದುಬಂತು. ಕೆಲವರು ತಮ್ಮ ಸಹೋದರ, ಸಹೋದರಿಯರೊಂದಿಗೆ ಬಂದಿದ್ದರು. ನವವಿವಾಹಿತ ತರುಣಿಯೂ ಪತಿಯೊಂದಿಗೆ ಪರೀಕ್ಷೆಗಾಗಿ ಬಂದಿದ್ದಳು. ರಾತ್ರಿ ಊಟಕ್ಕೆಂದು ರೆಸ್ಟೊರೆಂಟ್‌ಗೆ ಹೋದಾಗ, ಪರೀಕ್ಷೆ ಬರೆಯಲು ಬಂದಿದ್ದ ಅನೇಕ ವೈದ್ಯಕೀಯ ವಿದ್ಯಾರ್ಥಿಗಳೂ (ವೈದ್ಯರು) ಊಟಕ್ಕೆ ಬಂದಿದ್ದರು. ಎಲ್ಲರ ಮುಖದಲ್ಲೂ ಒಂದು ಬಗೆಯ ಆತಂಕ ಎದ್ದು ಕಾಣುತ್ತಿತ್ತು. ಮಕ್ಕಳಿಗೆ ಜೊತೆಯಾಗಿ ಬಂದಿದ್ದ ತಂದೆತಾಯಿಯೂ ಒತ್ತಡದಲ್ಲಿ ಇದ್ದಂತೆ ತೋರುತ್ತಿತ್ತು.

ಊಟ ಮುಗಿಸಿ ಕೋಣೆಗೆ ಬಂದ ನಾವು, ಬೆಳಿಗ್ಗೆ ಬೇಗ ಎದ್ದು ಪರೀಕ್ಷಾ ಕೇಂದ್ರಕ್ಕೆ ಹೊರಡುವ ಬಗ್ಗೆ ಮಾತನಾಡುತ್ತಾ ಕುಳಿತಿದ್ದೆವಷ್ಟೆ. ಸುಮಾರು ಹತ್ತು ಗಂಟೆಯ ಸಮಯವಿರಬಹುದು. ಗೆಳತಿಯೊಬ್ಬಳು ಕರೆ ಮಾಡಿ, ನನ್ನ ಮಗನಿಗೆ ಶುಭಾಶಯ ಕೋರುತ್ತಿದ್ದವಳು, ಆ ಕ್ಷಣ ತನ್ನ ಮೊಬೈಲ್‌ಗೆ ಬಂದ ಮುಖ್ಯ ಸುದ್ದಿಯನ್ನು ಓದುತ್ತಾ 'ಏನೇ ಇದು, ನೀಟ್ ಮುಂದೂಡಲಾಗಿದೆ ಅಂತ ಸುದ್ದಿ ಕಾಣಿಸುತ್ತಿದೆಯಲ್ಲ' ಎಂದಳು. ನಾನು ಖಡಾಖಂಡಿತವಾಗಿ 'ಅದು ಕೆಲ ದಿನಗಳ ಹಿಂದಷ್ಟೇ ವಿವಾದದಲ್ಲಿ ಸಿಲುಕಿದ್ದ ವೈದ್ಯಕೀಯ ಪದವಿಯ (ಯುಜಿ) ನೀಟ್ ವಿಚಾರವಿರಬಹುದು' ಎಂದು ವಾದಿಸಿದೆ. ಆಗ ಅವಳು, ಮರುದಿನ ನಡೆಯಲಿದ್ದ ವೈದ್ಯಕೀಯ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯ ಬಗ್ಗೆಯೇ ಇರುವ ಸುದ್ದಿ ಅದು ಎಂದು ಖಾತರಿಪಡಿಸಿದಳು. ಆಗ ನನ್ನ ಮನಸ್ಸಿಗೆ ಒಂದು ಬಗೆಯ ಶೂನ್ಯ ಆವರಿಸಿದಂತೆ ಭಾಸವಾಯಿತು. ಅರೆ, ಪರೀಕ್ಷೆಗೆ ಇನ್ನು ಹತ್ತು–ಹನ್ನೊಂದು ಗಂಟೆಗಳ ಗಡುವೂ ಇಲ್ಲದಿರುವಾಗ ಇಂತಹ ಸುದ್ದಿಯೇ? ಅಷ್ಟರಲ್ಲಾಗಲೇ ಎಲ್ಲ ಪರಿಚಿತರಿಂದ ಕರೆಗಳು ಬರಲು ಆರಂಭವಾದವು. ಅಲ್ಲಿಯವರೆಗೆ ಟಿ.ವಿ. ಚಾನೆಲ್‌ಗಳ ಸುದ್ದಿಗೆ ಹೋಗದ ನಾವು, ತಕ್ಷಣ ಟಿ.ವಿ.ಯನ್ನು ಹಚ್ಚಿದೆವು. ಅಲ್ಲಿಯೂ 'ನೀಟ್ ಮುಂದೂಡಲಾಗಿದೆ' ಎಂಬ ಸುದ್ದಿಯು ಪರದೆಯ ಅಡಿಬರಹದಲ್ಲಿ ಗೋಚರಿಸುತ್ತಿತ್ತು.

ಮಗ ಹತಾಶನಾಗಿದ್ದ. ಅವನನ್ನು ಯಾವ ರೀತಿಯಲ್ಲಿಯೂ ಸಮಾಧಾನ ಮಾಡಲು ತೋಚದ ನಾನು ಕೊಠಡಿಯಿಂದ ಹೊರಬಂದಿದ್ದೆ. ಅಲ್ಲಿದ್ದ ಸುಮಾರು ಹದಿನೈದಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಅವರ ಪೋಷಕರದ್ದೂ ಅದೇ ಬಗೆಯ ತಳಮಳ. ಸುದ್ದಿಯನ್ನು ನಂಬುವುದೇ ಬೇಡವೇ ಎಂಬ ದ್ವಂದ್ವ ಬೇರೆ. ಅಲ್ಲಿ ಮಾತಿಗೆ ಸಿಕ್ಕ ಪೋಷಕರದ್ದು ವಿಧವಿಧದ ಕತೆಗಳು! ಒಬ್ಬ ವಿದ್ಯಾರ್ಥಿನಿಯ ಮದುವೆಯ ದಿನವನ್ನು ನೀಟ್ ಮುಗಿದ ಬಳಿಕ ಮಾಡಲು ನಿರ್ಧರಿಸಿ, ಬರುವ ಶ್ರಾವಣ ಮಾಸದಲ್ಲಿ ಗೊತ್ತು ಮಾಡಿದ್ದರಂತೆ. ಇದೀಗ ಮುಂದೂಡಲ್ಪಟ್ಟ ಪರೀಕ್ಷೆಯ ದಿನಾಂಕ ಆ ದಿನಗಳಲ್ಲಿಯೇ ಬಂದರೆ ಏನು ಮಾಡುವುದು ಎಂಬುದು ಆಕೆಯ ತಾಯಿಯ ಆತಂಕ.

ಒಂದು ವರ್ಷದಿಂದ ತಪಸ್ಸಿಗೆ ಕುಳಿತಂತೆ ತಯಾರಿ ನಡೆಸಿದ್ದ ಗೆಳೆಯರ ಗುಂಪೊಂದು, ಬರುವ ತಿಂಗಳಲ್ಲಿ ಹೊರದೇಶಕ್ಕೆ ಪ್ರವಾಸ ಗೊತ್ತು ಮಾಡಿತ್ತಂತೆ. ಇದೀಗ ಮುಂಗಡ ಟಿಕೆಟ್‌ಗಾಗಿ ವಿನಿಯೋಗಿಸಿದ ಹಣವನ್ನೂ ಮರಳಿ ಪಡೆಯುವಂತಿಲ್ಲ, ಪರೀಕ್ಷೆ ಬಿಟ್ಟು ಪ್ರವಾಸವನ್ನೂ ಮಾಡುವಂತಿಲ್ಲ ಎಂಬುದು ಆ ವಿದ್ಯಾರ್ಥಿಗಳ ಗೋಳು. ನಲವತ್ತರ ಹರೆಯದ ವೈದ್ಯರೊಬ್ಬರು ವೈದ್ಯಾಧಿಕಾರಿಯಾಗಿ ತಾವು ಕೆಲಸ ನಿರ್ವಹಿಸುತ್ತಿದ್ದ ಆಸ್ಪತ್ರೆಯ ಕೆಲಸಕ್ಕೆ ಮೂರು ತಿಂಗಳು ವೇತನರಹಿತ ರಜೆ ಹಾಕಿ, ಈ ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರಂತೆ. ಮರುದಿನದಿಂದ ಕೆಲಸಕ್ಕೆ ಹಾಜರಾಗದಿದ್ದರೆ ಕೆಲಸದಿಂದ ತೆಗೆದರೂ ತೆಗೆಯಬಹುದು ಎಂಬುದು ಅವರ ಆತಂಕವಾಗಿತ್ತು.

ನವವಿವಾಹಿತ ವೈದ್ಯೆ, ನೀಟ್ ಮುಗಿಸಿ ಮಧುಚಂದ್ರಕ್ಕೆ ಹೋಗುವ ಯೋಜನೆಯಲ್ಲಿದ್ದಳಂತೆ. ಒಬ್ಬ ವಿದ್ಯಾರ್ಥಿನಿಯಂತೂ ಜೋರಾಗಿ ಅಳುತ್ತಾ, ತನ್ನ ಅಪ್ಪನನ್ನು ಕುರಿತು, ಯಾವ ಕಾರಣಕ್ಕೂ ತಮ್ಮನಿಗೆ ವೈದ್ಯಕೀಯ ಶಿಕ್ಷಣ ಬೇಡ, ತನಗೊಬ್ಬಳಿಗೇ ಈ ಯಾತನೆ ಸಾಕು ಎನ್ನುತ್ತಾ ಕಂಬನಿ ಗರೆಯುತ್ತಿದ್ದಳು. ತಮ್ಮ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಮಕ್ಕಳೊಂದಿಗೆ ಬಂದಿದ್ದ ಪೋಷಕರು ವೃಥಾ ತಮ್ಮ ಸಮಯ ಮತ್ತು ಹಣ ವ್ಯರ್ಥವಾದುದರ ಬಗ್ಗೆಯೂ ನೊಂದಿದ್ದರು. ಇವೆಲ್ಲವೂ ನಾನು ಕಣ್ಣಾರೆ ಕಂಡ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳ ನೋವು-ಹತಾಶೆಯ ಕತೆ. ಇನ್ನು ದೇಶದಾದ್ಯಂತ ಈ ಪರೀಕ್ಷೆಗೆ ಅರ್ಜಿ ಹಾಕಿದ ಸರಿಸುಮಾರು ಎರಡು ಲಕ್ಷ ವಿದ್ಯಾರ್ಥಿಗಳ ಕತೆಗಳೇನೋ.

ಎಂಬಿಬಿಎಸ್ ಪದವಿಯ ನಂತರ ಸ್ನಾತಕೋತ್ತರ ಪದವಿ ಪೂರೈಸಲೇಬೇಕಾದ ಅನಿವಾರ್ಯ ಇಂದಿನ ದಿನಗಳಲ್ಲಿದೆ. ಇಡೀ ದೇಶದಲ್ಲಿ ಲಭ್ಯವಿರುವ ಬರೀ ನಲವತ್ತು ಸಾವಿರ ಸೀಟುಗಳಿಗಾಗಿ ಸುಮಾರು ಎರಡು ಲಕ್ಷದಷ್ಟು ವೈದ್ಯರು ಈ ಪರೀಕ್ಷೆಯನ್ನು ಬರೆಯುತ್ತಾರೆ. ಒಮ್ಮೆ ಸ್ನಾತಕೋತ್ತರ ಪದವಿಗೆ ಪ್ರವೇಶ ದೊರೆಯದವರು ಮರುವರ್ಷದ ಪರೀಕ್ಷೆಗೆ ತಯಾರಿ ನಡೆಸುತ್ತಾರೆ.



ವೈದ್ಯಕೀಯ ವಿಜ್ಞಾನ ವಿಭಾಗದ ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಪ್ರತಿವರ್ಷವೂ ವೈದ್ಯಕೀಯ ಸ್ನಾತಕೋತ್ತರ ಪದವಿಗಾಗಿ ಪ್ರವೇಶ ಪರೀಕ್ಷೆ ನಡೆಸುತ್ತದೆ. ಆನ್‌ಲೈನ್‌ನಲ್ಲಿ ನಡೆಯುವ ಈ ಪರೀಕ್ಷೆಗೆ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ನೆರವನ್ನು ಟಾಟಾ ಕಂಪನಿಯ ಸಲಹಾ ಸೇವೆಗಳಿಂದ ಪಡೆದುಕೊಳ್ಳುತ್ತದೆ. ಸಾಮಾನ್ಯವಾಗಿ ಪರೀಕ್ಷೆ ಆರಂಭವಾಗುವ ಒಂದು ಗಂಟೆಗೆ ಮುನ್ನವಷ್ಟೇ ಪ್ರಶ್ನೆಪತ್ರಿಕೆಯನ್ನು ಹೊರಬಿಡಲಾಗುತ್ತದೆ. ಆದರೆ ಈ ಬಾರಿ ಎಂತಹ ಸೂಕ್ಷ್ಮವಾದ ಕಾರಣವನ್ನು ಗಮನಿಸಿಯೋ ಏನೋ ದಿಢೀರ್ ಎಂದು ಪರೀಕ್ಷೆಯನ್ನು ಮುಂದೂಡುವ ನಿರ್ಧಾರವನ್ನು ಕೇಂದ್ರ ಆರೋಗ್ಯ ಸಚಿವಾಲಯ ತೆಗೆದುಕೊಂಡಿದೆ.

ಈ ಬಾರಿಯ ವೈದ್ಯಕೀಯ ಪದವಿ ಪ್ರವೇಶ ಪರೀಕ್ಷೆ ಬಗೆಗಿನ ಅಕ್ರಮದ ಆರೋಪಗಳ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಕಾರಣ ಏನೇ ಇರಲಿ, ಪರೀಕ್ಷೆಯ ಆರಂಭಕ್ಕೆ ಕೆಲವೇ ಗಂಟೆಗಳಿರುವಾಗ ಪರೀಕ್ಷೆಯನ್ನು ಮಂದೂಡುವುದು ವಿದ್ಯಾರ್ಥಿಗಳ ಎದೆಗುಂದಿಸುತ್ತದೆ. ಬಹಳಷ್ಟು ಅನನುಕೂಲಗಳಿಗೆ ಕಾರಣವಾಗುತ್ತದೆ.

ಎಲ್ಲ ಕ್ಷೇತ್ರಗಳಲ್ಲಿ ದಾಪುಗಾಲು ಹಾಕುತ್ತಾ ಮುನ್ನಡೆಯುತ್ತಿರುವ ನಮ್ಮ ದೇಶ, ಸಮಾಜದ ಆರೋಗ್ಯವನ್ನು ಸಂರಕ್ಷಿಸುವ ವೈದ್ಯರಿಗಾಗಿ ನಡೆಸುವ ಪ್ರವೇಶ ಪರೀಕ್ಷೆಯನ್ನು ಶಿಸ್ತುಬದ್ಧವಾಗಿ ನಡೆಸಲು ಆಗದಿರುವುದು ವಿಷಾದಕರ. ಕೆಲವು ವರ್ಷಗಳ ಹಿಂದೆ ಆಯಾ ರಾಜ್ಯ ಮಟ್ಟದಲ್ಲಿಯೇ ಈ ಪರೀಕ್ಷೆ ನಡೆಯುತ್ತಿದ್ದಾಗ ಎಲ್ಲವೂ ಬಹುತೇಕ ಸುಲಲಿತವಾಗಿಯೇ ಇರುತ್ತಿತ್ತು. ಇದೀಗ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಪರೀಕ್ಷಾ ಮಂಡಳಿ ಎಂಬ ಸ್ವಾಯತ್ತ ಸಂಸ್ಥೆಗೆ ವೈದ್ಯಕೀಯ ಸ್ನಾತಕೋತ್ತರ ಪರೀಕ್ಷೆಯ ಜವಾಬ್ದಾರಿಯನ್ನು ಕೊಡಲಾಗಿದೆ. ಪ್ರಶ್ನೆಪತ್ರಿಕೆಯ ಗೋಪ್ಯತೆ ಕಾಪಾಡಿಕೊಳ್ಳುವಂತಹ ಕಟ್ಟುನಿಟ್ಟಿನ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸದ ಮಂಡಳಿಯ ಕ್ಷಮತೆಯ ಬಗ್ಗೆ ಪ್ರತಿಯೊಬ್ಬರೂ ಅನುಮಾನಿಸುವಂತಾಗಿದೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿ ನಡೆಸುವ ಈ ಪರೀಕ್ಷೆಗಳಲ್ಲಿ ಅಕ್ರಮಗಳು ನುಸುಳುವುದು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಈ ಮೊದಲು ಇತ್ತು. ಆದರೆ ಈಗಿನ ಪ್ರಮಾದವನ್ನು ಗಮನಿಸಿದರೆ, ತಂತ್ರಜ್ಞಾನವೇ ಮುಳುವಾಯಿತೆ ಎಂಬ ಗುಮಾನಿ ಹುಟ್ಟಿಕೊಳ್ಳುತ್ತದೆ. ಮತ್ತೊಂದೆಡೆ, ಮಂಡಳಿಯ ಅಧಿಕಾರಿಗಳಿಂದ ಲೋಪವಾಗಿರಬಹುದೇ ಎಂಬ ಸಂಶಯವೂ ಸುಳಿಯುತ್ತದೆ. ಇಂತಹ ಮಹತ್ವದ ಪರೀಕ್ಷೆಯನ್ನು ಸಮರ್ಪಕವಾಗಿ ನಡೆಸುವ ಸಾಮರ್ಥ್ಯ ಇಲ್ಲದ ಅಧಿಕಾರಿಗಳನ್ನು ಮಂಡಳಿಯ ಆಯಕಟ್ಟಿನ ಹುದ್ದೆಗಳಲ್ಲಿ ಕೂರಿಸಲಾಗಿದೆಯೇ ಎಂಬ ಪ್ರಶ್ನೆಯೂ ಕಾಡುತ್ತದೆ. ಈ ವಿಷಯ ಈಗ ಸಂಸತ್ತಿನ ಕಲಾಪದಲ್ಲೂ ಪ್ರತಿಧ್ವನಿಸಿದೆ. ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳ ಬಗ್ಗೆ ತನಿಖೆ ನಡೆಸುವ ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ. ಈಗ ಆಗಿರುವಂತಹ ಎಡವಟ್ಟು ಮರುಕಳಿಸದ ರೀತಿಯಲ್ಲಿ ಕಠಿಣ ಸಂದೇಶ ರವಾನೆಯಾಗಬೇಕಿದೆ.

ಚುರುಮುರಿ



ಡಿಸಿಎಂ ಡಿಶುಂ!

● ತುರುವೇಕೆರೆ ಪ್ರಸಾದ್

'ಮತ್ತೆ ಹೆಚ್ಚುವರಿ ಎರಡು– ಮೂರು ಡಿಸಿಎಂ ಸ್ಥಾನಕ್ಕೆ ಡಿಶುಂ ಡಿಶುಂ ಶುರುವಾಗ್ಯೆತಲ್ಲ' ಮಾತು ತೆಗೆದ ಗುದ್ಲಿಂಗ. 'ಅದಕ್ಯಾಕ್ ವರಿ? ಒಂದು ಎಂಟು ಹತ್ತು ಜನನ್ನ ಡಿಸಿಎಂ ಮಾಡುದ್ರಾಯ್ತದೆ ಅಂದವ್ರಲ್ಲ ಒಬ್ರು ಸಾಸಕರು' ಎಂದ ಮಾಲಿಂಗ.

'ಲೇಯ್, ಅವರು ಮಾತಲ್ಲೆ ಗುನ್ನ ಮಡಗವ್ರೆ, ಅಂಗೆಲ್ಲಾ ಮಾಡಕ್ಕಾಗಲ್ಲ ಕಣ್ಲಾ?'

'ಯಾಕಾಗಲ್ಲ ಅಂತಿವ್ನಿ? ಅಂಗ್ ಮಾಡ್ಬುಟ್ರೆ ಭಿನ್ನಮತ ತಣ್ಣಗಾಗ್ತೈತಲ್ಲ'.

'ನಿನ್ ತಲೆ, ಲೇಯ್ ಇಬ್ರು ಡಿಸಿಎಂ ಅವ್ರೆ ಅಂದ್ಕ. ಮೂರು ಚಕ್ರದ ಆಟೊ ಎಲ್ಲೆಲ್ಲಿ ಓಯ್ತದೆ?'

'ಎಲ್ ಬೇಕಾದ್ರೂ ಓಯ್ತದೆ. ಫ್ಲೈ ಓವರ್ರು, ಅಂಡರ್‌ಪಾಸು, ಮೈನ್‌ರೋಡು, ಕ್ರಾಸ್ ರೋಡು ಎಲ್ಲಂದ್ರಲ್ಲಿ ನುಕ್ಕಂಡ್ ಓಯ್ತದೆ'.

'ನಾಕು ಚಕ್ರದ ಕಾರು ಇಷ್ಟು ಸಲೀಸಾಗಿ ಓಗಕ್ಕಾಯ್ತದಾ? ಅಂಡರ್‌ಪಾಸ್ ಚರಂಡಿ ನೀರಲ್ಲಿ ದೋಣಿ ಆಗ್ಬುಡುತ್ತೆ. ಪಕ್ಕದಲ್ಲಿ ಉಜ್ಜದಂತೆ, ಟಾಪ್ ಸವರದಂತೆ, ಕೆಳಗಡೆ ಆಕ್ಸಿಲ್ ಹಂಪ್ಗೆ ಹೊಡೀದಂತೆ ಓಗ್ಬೇಕಲ್ವಾ? ಇಂಗಿರ್ಬೇಕಾದ್ರೆ 8-10 ಚಕ್ರ ಅಂದ್ರೆ ಟಿಪ್ಪರ್ ಇದ್ದಂಗೆ! ಚಕ್ರ ಎಚ್ಚಾದಷ್ಟೂ ವಜ್ಜೆನು ಎಚ್ಚಾಗ್ತದೆ. ಮೇಲೆ ತಕ್ಕನಾಗಿ ಲೋಡೂ ಇರ್ಬೇಕು'.

'ಈಗ ಅರ್ಥ ಆತು ನೀನು ಏನು ಯೋಳ್ತಿದೀಯ ಅಂತ. ಹಿಂದಿನ ಚಕ್ರ ಹೆಚ್ಚಾದಷ್ಟೂ ತರಲೆ ತಾಪತ್ರಯ ಜಾಸ್ತಿ. ಎಲ್ಲ ತರ ಟ್ಯಾಕ್ಸು, ಕೈ ಹಾಕೋರು, ಕೈ ಒಡ್ಡೋರು ಎಲ್ಲಾ ಜಾಸ್ತಿನೇ! ಎಂಗಂದ್ರಂಗೆ ನುಕ್ಕಂಡು ಓಗಕ್ಕೂ ಆಗಲ್ಲ'.

'ಅಷ್ಟೇ ಅಲ್ಲ, ಈ ಹಿಂದಿನ ಚಕ್ರಗಳಿಗೆ ರೂಟು, ಅದ್ರಲ್ಲಿರೋ ಲೂಪ್‌ಹೋಲು, ಮ್ಯಾನ್‌ಹೋಲು ಗೊತ್ತಾಗ್ಬಿಡುತ್ತೆ. ಒಂದು ಪಂಕ್ಚರ್ ಆದ್ರೆ ಮಿಕ್ಕೋವ ಕಾಲೂ ಎಳಿಯುತ್ತೆ...'

'ಅದ್ಕೇ ಬರೀ ಟೂ ವೀಲರ್ ಆದ್ರೆ ಎಲ್ಲಂದ್ರಲ್ಲಿ ಹಂಪು, ಟೋಲು ಎಲ್ಲಾ ಹಾರುಸ್ಕಂಡು, ಓಣಿ ಗಲ್ಲೀಲೆಲ್ಲಾ ನುಗ್ಗುಸ್ಕಂಡು, ವ್ಹೀಲಿಂಗ್ ಮಾಡ್ಕಂಡು ಓಗ್ಬಹುದಲ್ಲ! ಎಂಗೋ ಮೆತ್ತಗೆ ಮುಂದಿನದ್ ತೆಗೆದು ಹಿಂದಿನ ಚಕ್ರ ಮುಂದಕ್ಕೆ ಜರುಗಿಸ್‌ಬಿಟ್ರೆ ಆಯ್ತು. ಹಿಂದೆ ಮೂರು ನಾಕು ಇದ್ರೆ, ಮುಂದಕ್ಕೆ ಬರೋ ಲಕ್ಕು ಯಾವ್ದಕ್ ಬರುತ್ತೋ ಏನೋ?'

'ಅದೇನೋ ನಿಜವೆ! ಆದ್ರೂ ಹೈಕಮಾಂಡು ಏಕಾಏಕಿ ಮುಂದಕ್ಕೆ ಓಡದೇ ಇರೋ ಸ್ಟೆಪ್ನಿ ಹಾಕಿ ಎಲ್ರಿಗೂ ಕೈ ಎತ್ಬಿಡುತ್ತೆ' ಎಂದು ನಕ್ಕ ಪರ್ಮೇಶಿ. ಮಿಕ್ಕವರೂ ಗಹಗಹಿಸಿದರು.

ಸಂಗತ

ಕತ್ತಲು ತಂದೀತು ವಿದ್ಯುತ್!

ಮನುಕುಲಕ್ಕೆ ದೊರೆತ ಮಹತ್ವದ 'ಶಕ್ತಿ' ಎಂದು ಪರಿಗಣಿಸಲಾಗಿರುವ ವಿದ್ಯುತ್‌ನಿಂದ ಅವಘಡಗಳು ಸಂಭವಿಸದಂತೆ ಎಚ್ಚರ ವಹಿಸಬೇಕು

● ಮಲ್ಲಿಕಾರ್ಜುನ ಹೆಗ್ಗಳಗಿ

ವಿದ್ಯುತ್ ಸುರಕ್ಷಾ ಸಪ್ತಾಹ ಆರಂಭವಾಗುವ (ಜೂನ್ 26ರಿಂದ ಜುಲೈ 2) ಮುನ್ನಾ ದಿನವೇ ಬಾಗಲಕೋಟೆ ಜಿಲ್ಲೆಯ ತೇರದಾಳ ಪಟ್ಟಣದ ದಾಸರಮಡ್ಡಿಯ ಮನೆಯೊಂದರ ಮೇಲೆ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಂಡಾಗಿ ಬಿದ್ದು ಇಬ್ಬರು ಮೃತಪಟ್ಟು, ನಾಲ್ವರು ಗಾಯಗೊಂಡ ವರದಿ (ಪ್ರ.ವಾ., ಜೂನ್ 26) ಓದಿ ಬೇಸರವಾಯಿತು. ಆ ಮನೆಯಲ್ಲಿ ಮದುವೆಯ ಸಿದ್ಧತೆ ನಡೆದಿತ್ತು. ವರ ಮೃತಪಟ್ಟಿದ್ದಾನೆ. ಕನ್ಯೆ ಗಾಯಗೊಂಡಿದ್ದಾಳೆ. ಸಂಭ್ರಮದಿಂದ ತುಂಬಿದ್ದ ಮನೆಯಲ್ಲಿ ದುಃಖದ ಛಾಯೆ ಆವರಿಸಿದೆ.

ರಾಜ್ಯದಲ್ಲಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಆದರೆ ಸುರಕ್ಷತೆಗೆ ಗಮನ ಕೊಡುವಲ್ಲಿ ಬಳಕೆದಾರರು ಮತ್ತು ಸರ್ಕಾರ ಹಿಂದೆ ಬಿದ್ದಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ರಾಜ್ಯದಲ್ಲಿ ಒಂದು ವರ್ಷದ ಅವಧಿಯಲ್ಲಿ ವಿದ್ಯುತ್ ಅವಘಡದಲ್ಲಿ 473 ಜನ ಹಾಗೂ 476 ಪ್ರಾಣಿಗಳು ಮೃತಪಟ್ಟಿರುವುದು ಇದಕ್ಕೆ ನಿದರ್ಶನ.

ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಬಳಕೆದಾರರ ಮನೆ, ನಿವೇಶನ, ಕಚೇರಿ, ಕಾರ್ಖಾನೆ, ಪಂಪ್‌ಸೆಟ್‌ಗಳಿಗೆ ವಿದ್ಯುತ್ ಅಳವಡಿಸುವ ಎಲ್ಲ ಹಂತದಲ್ಲೂ ಸುರಕ್ಷತೆಗೆ ಆದ್ಯತೆ ನೀಡುವುದು ಬಹಳ ಅಗತ್ಯ. ವಿದ್ಯುತ್ ಅವಘಡದಿಂದ ಜನ, ಪ್ರಾಣಿ-ಪಕ್ಷಿ ಮಾತ್ರವಲ್ಲದೆ, ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅನಾಹುತ ಉಂಟಾಗಿ ಆಸ್ತಿ, ಬೆಳೆ, ಅರಣ್ಯ ನಷ್ಟವೂ ಸಂಭವಿಸುತ್ತದೆ. ಇದು ಭಾರಿ ಪ್ರಮಾಣದ ಹಾನಿಯಾಗಿದ್ದು, ಈ ಬಗ್ಗೆ ಲೆಕ್ಕ ನೀಡುವ ಕೆಲಸವನ್ನು ಇಂಧನ ಇಲಾಖೆ ಮಾಡುವುದಿಲ್ಲ. ಇದು ಜಾಣ ಮೌನ ಇರಬಹುದು.

ಬಳಕೆದಾರರು ವಿದ್ಯುತ್ ಸೇವೆಯ ಅಳವಡಿಕೆಗೆ ಪರಿಣತರನ್ನು ಅವಲಂಬಿಸಬೇಕು. ಗುಣಮಟ್ಟದ ಉಪಕರಣಗಳನ್ನು ಬಳಸಬೇಕು. ನಿರ್ಲಕ್ಷ್ಯ ವಹಿಸಿದರೆ ಶಾರ್ಟ್ ಸರ್ಕಿಟ್ ತಲೆದೋರುವ ಅಪಾಯವಿರುತ್ತದೆ. ಮನೆಗೆ ವಿದ್ಯುತ್ ಪೂರೈಸುವ ಕೊಂಡಿಯಾಗಿರುವ ಫ್ಯೂಸ್ ತಂತಿಯ ಪಾತ್ರ ಬಹಳ ಮುಖ್ಯವಾದದ್ದು. ಇದರೊಂದಿಗೆ ಮಿನಿಯೇಚರ್ ಸರ್ಕಿಟ್ ಬ್ರೇಕರ್ (ಎಂಸಿಬಿ) ಮತ್ತು ಅರ್ಥ್ ಲೀಕೇಜ್ ಸರ್ಕಿಟ್ ಬ್ರೇಕರ್ (ಇಎಲ್‌ಸಿಬಿ) ಅಳವಡಿಕೆ ಮಾಡಬೇಕು. ಪ್ರತಿ ಸಂಪರ್ಕದೊಂದಿಗೆ ಅರ್ಥಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಅರ್ಥಿಂಗ್‌ಗೆ ತಾಮ್ರದ ತಂತಿಯನ್ನೇ ಬಳಸಬೇಕು. ಅಲ್ಯೂಮಿನಿಯಂ ತಂತಿ ಬಳಕೆ ಸುರಕ್ಷಿತವಲ್ಲ. ಇಲಾಖೆ ವತಿಯಿಂದ ಪರಿಶೀಲನೆ ನಡೆಸಿ ವಿದ್ಯುತ್ ಬಳಕೆಗೆ ಒಪ್ಪಿಗೆ ನೀಡುವ ಕಡ್ಡಾಯ ವ್ಯವಸ್ಥೆ ಜಾರಿಯಾಗಬೇಕು.

ವಿದ್ಯುತ್ ಉತ್ಪಾದನಾ ಕೇಂದ್ರದಿಂದ ದೂರದ ಪ್ರದೇಶಗಳಿಗೆ 400 ಕೆ.ವಿ.ಗಿಂತ ಹೆಚ್ಚು ವಿದ್ಯುತ್ ಪ್ರವಹಿಸಲು ಭವ್ಯ ವಿದ್ಯುತ್ ಟವರ್‌ಗಳನ್ನು ನಿರ್ಮಿಸಲಾಗುತ್ತದೆ. ಇವುಗಳಲ್ಲಿ ಸತತ ಹೈವೋಲ್ಟೇಜ್ ವಿದ್ಯುತ್ ಪ್ರವಹಿಸುತ್ತಿರುತ್ತದೆ. ಈ ಟವರ್‌ಗಳ ಸಮೀಪ ಯಾರೂ ವಾಸಿಸಬಾರದು ಎಂಬ ನಿಯಮ ಇದ್ದರೂ ಕಡೆಗಣಿಸಿ, ಅಂತಲ್ಲಿ ಅನೇಕ ಜನವಸತಿಗಳು ಹುಟ್ಟಿಕೊಂಡಿವೆ.

ಭೂಮಿಯ ಒಳಗೆ ಕೇಬಲ್ ಹಾಕುವುದು ಹೆಚ್ಚು ಸುರಕ್ಷಿತ ವಿಧಾನವಾಗಿದೆ. ಆದ್ಯತೆಯ ಮೇಲೆ ಈ ಕೆಲಸ ಪೂರ್ಣಗೊಳಿಸಬೇಕು. ಅತಿ ಅಪಾಯದ ಸಂಗತಿ ಎಂದರೆ, ನೀರಾವರಿ ಪಂಪ್‌ಸೆಟ್‌ಗಳಿಗೆ ರೈತರು ತಾವೇ ಮುಂದಾಗಿ ಅಕ್ರಮ ವಿದ್ಯುತ್ ಸಂಪರ್ಕ ಕೊಟ್ಟುಕೊಳ್ಳುವುದು. ಇಂಥ ಸಂಪರ್ಕಗಳನ್ನು ಇಲಾಖೆ ಗುರುತಿಸಿ ಸಕ್ರಮ ಮಾಡಿಕೊಡುತ್ತದೆ. ಆರಂಭದಲ್ಲಿಯೇ ಸಕ್ರಮ ಸಂಪರ್ಕ ಪಡೆಯುವುದು ಸುರಕ್ಷಿತ ನಡೆ ಎಂಬುದನ್ನು ಮರೆಯಬಾರದು. ಸಾರ್ವಜನಿಕ ಸಮಾರಂಭ, ಜಾತ್ರೆ, ಉತ್ಸವ, ಧಾರ್ಮಿಕ ಕಾರ್ಯಗಳನ್ನು ನಡೆಸುವಾಗ ವಿದ್ಯುತ್ ತಂತಿಗೆ ನೇರವಾಗಿ ಹುಕ್ ಹಾಕಿ ವಿದ್ಯುತ್ ಪಡೆಯುವ ಅಕ್ರಮ ನಡೆಯುತ್ತದೆ. ಇದು ಅತ್ಯಂತ ಅಪಾಯಕಾರಿ ವಿಧಾನವಾಗಿದೆ. ತಾತ್ಕಾಲಿಕ ವಿದ್ಯುತ್ ಪೂರೈಕೆಗೆ ಅವಕಾಶವಿದೆ. ಇದನ್ನು ನಿಯಮಾನುಸಾರ ಬಳಸಿಕೊಳ್ಳಬೇಕು.

ವಿದ್ಯುತ್ ಅವಘಡದಿಂದ ಮರಣ ಸಂಭವಿಸಿದಾಗ ಅಧಿಕಾರಿಗಳು ಮೃತರ ಕುಟುಂಬಕ್ಕೆ ಒಂದಷ್ಟು ಪರಿಹಾರ ಕೊಟ್ಟು ನ್ಯಾಯಾಲಯಕ್ಕೆ ಹೋಗದಂತೆ ಮಾಡುವ ಕಾರ್ಯ ಕೆಲವು ಸಂದರ್ಭಗಳಲ್ಲಿ ನಡೆಯುತ್ತದೆ. ಇದು ಕಾನೂನುಬದ್ಧ ಕ್ರಮವಲ್ಲ. ಅವಘಡಕ್ಕೆ ಯಾರು ಕಾರಣ, ಏನು ಕಾರಣ ಎಂಬುದನ್ನು ನ್ಯಾಯಾಲಯ ತೀರ್ಮಾನಿಸಬೇಕು. ಇದರಿಂದ ತಪ್ಪುಗಳನ್ನು ಗುರುತಿಸುವುದಕ್ಕೆ ಮತ್ತು ತಪ್ಪು ಮಾಡಿದ ವ್ಯಕ್ತಿಗಳನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೆ ನೆರವಾಗುತ್ತದೆ.



ಎಸ್ಕಾಂ ಸಿಬ್ಬಂದಿಯ ನಿರ್ಲಕ್ಷ್ಯ ಕೂಡ ಅವಘಡಕ್ಕೆ ಕಾರಣವಾಗಿರುತ್ತದೆ. ವಿದ್ಯುತ್ ತಂತಿ ದುರಸ್ತಿಗೊಳಿಸುವಾಗ ಲೈನ್‌ಮನ್‌ಗಳೇ ಮೃತಪಟ್ಟ ಪ್ರಕರಣಗಳು ನಡೆದಿವೆ. 2023– 24ರಲ್ಲಿ ನಡೆದ ವಿದ್ಯುತ್ ಅವಘಡದಲ್ಲಿ ಇಲಾಖೆಯ 35 ಸಿಬ್ಬಂದಿ ಅಸುನೀಗಿದ್ದಾರೆ. ಇಲಾಖೆಯೂ ಜಾಗೃತಗೊಳ್ಳಬೇಕು, ಜನರನ್ನೂ ಜಾಗೃತಗೊಳಿಸಬೇಕು ಎಂಬ ಹಿರಿಯರೊಬ್ಬರ ಮಾತು ಅರ್ಥಪೂರ್ಣವಾಗಿದೆ.

ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ ವಿಜ್ಞಾನ, ತಂತ್ರಜ್ಞಾನ ಬಹಳಷ್ಟು ಬೆಳೆದಿದೆ. ನೈಸರ್ಗಿಕವಾಗಿ ದೊರಕುವ ಗಾಳಿ, ನೀರು, ಬಿಸಿಲು, ಸಮುದ್ರದ ತೆರೆಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ವಿದ್ಯುತ್ ಮನುಕುಲಕ್ಕೆ ದೊರೆತ 'ಮಾಯಾದೀಪ' ಎಂದು ಭಾವಿಸಲಾಗಿದೆ. ಎಲ್ಲ ರಂಗಗಳಲ್ಲಿಯೂ ವಿಶಾಲವಾಗಿ ಆವರಿಸಿರುವ ಡಿಜಿಟಲ್ ಲೋಕವು ವಿದ್ಯುತ್ ಕೊಡುಗೆ. ಇಂತಹ ವಿದ್ಯುತ್ತನ್ನು ಸುರಕ್ಷತೆ ಮತ್ತು ದಕ್ಷತೆಯಿಂದ ಬಳಸಬೇಕಾದುದು ನಮ್ಮೆಲ್ಲರ ಹೊಣೆ.

ವಾಚಕರ ವಾಣಿ

ಮೂಲ ಉದ್ದೇಶ ಮರೆಯುತ್ತಿರುವ ಜಯಂತಿ ಆಚರಣೆ

ನಾಡಪ್ರಭು ಕೆಂಪೇಗೌಡರ ಜನ್ಮದಿನಾಚರಣೆಯ ಪ್ರಯುಕ್ತ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಕೆಂಪೇಗೌಡರ ಜೀವನ ಮತ್ತು ಸಾಧನೆಯ ಅರಿವು ಮೂಡಿಸಿ, ಅವರಿಗೆ ಪ್ರಬಂಧ, ಚರ್ಚಾ ಸ್ಪರ್ಧೆ ಏರ್ಪಡಿಸಿರುವ ಸರ್ಕಾರದ ನಡೆ ಶ್ಲಾಘನೀಯ. ಮಹನೀಯರನ್ನು ಸ್ಮರಿಸಿ ಅವರ ಆದರ್ಶಗಳು ಸಮಾಜದಲ್ಲಿ ಚಲಾವಣೆಯಾಗುವಂತೆ ಮಾಡುವುದು ಜಯಂತಿಗಳ ಉದ್ದೇಶವಾಗಬೇಕಾಗಿದ್ದ ಈ ಹೊತ್ತಿನಲ್ಲಿ, ಇಂದಿನ ಆಚರಣೆಗಳು ಅವುಗಳ ಮೂಲ ಉದ್ದೇಶವನ್ನು ಮರೆಯುತ್ತಿವೆ. ಸರ್ಕಾರದ ಆದೇಶ ಪಾಲನೆಯ ಕಾಟಾಚಾರಕ್ಕೆ ಅವು ನಡೆಯುತ್ತಿವೆಯೇನೊ ಎಂದೆನಿಸುತ್ತಿದೆ.

ಭವಿಷ್ಯದ ಪೀಳಿಗೆ ನಿಸ್ವಾರ್ಥವಾಗಿ, ಸಾಮಾಜಿಕ ಕಳಕಳಿ ಹೊಂದಿರಬೇಕೆಂದರೆ, ಯಾವುದೇ ಮಹನೀಯರ ಜಯಂತಿಯು ರಜೆರಹಿತವಾಗಿರಬೇಕು. ಮಹನೀಯರ ತತ್ವಾದರ್ಶಗಳು ಎದೆಗಿಳಿಯಬೇಕು. ಆಗ ಇಂತಹ ಆಚರಣೆಗಳು ಸಾರ್ಥಕವಾಗುತ್ತವೆ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

ಪರಿತ್ಯಾಗಿಗಳಿಗೂ ರಾಜಕಾರಣದ ಹಂಬಲ!

'ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್ ಅವರಿಗೆ ಬಿಟ್ಟುಕೊಡಬೇಕು' ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 28). ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆ ಸಂದರ್ಭದಲ್ಲಿ ಉಪಸ್ಥಿತರಿದ್ದರು ಎಂಬುದು ಗಮನಾರ್ಹ. ಯಾವುದೇ ಸ್ವಾಮೀಜಿ ತಮ್ಮ ಮಠ ಮತ್ತು ಭಕ್ತರಿಗೆ ಸಚ್ಚಿಂತನೆ ಮತ್ತು ಆಧ್ಯಾತ್ಮಿಕ ಬೋಧನೆ ಮಾಡುತ್ತಾ ಜನರಿಗೆ ತಪ್ಪು ಮತ್ತು ಸರಿಗಳನ್ನು ತೋರುತ್ತಾ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಬೇಕು. ಅದನ್ನು ಬಿಟ್ಟು ರಾಜಕೀಯದೆಡೆಗೆ ಅವರಿಗೆ ಆಸಕ್ತಿ ಏಕೆ?

ಮುಖ್ಯಮಂತ್ರಿಯ ಗಾದಿಯಲ್ಲಿ ಯಾರೇ ಕುಳಿತರೂ ಸ್ವಾಮಿಗಳಿಗೆ ಆತ ಒಬ್ಬ ಭಕ್ತನಂತೆ ಕಾಣಬೇಕೇ ವಿನಾ ರಾಜನಂತಲ್ಲ. ಭಕ್ತರು ಮತ್ತು ಜನರನ್ನು ಲೋಭದಿಂದ ದೂರವಿಡಲು ಪ್ರಯತ್ನಿಸಬೇಕಾದ ಸ್ವಾಮಿಗಳೇ ಲೋಭಕ್ಕೆ ಒಳಗಾದರೆ ಮಠದ ಮೂಲ ಉದ್ದೇಶ ದಿಕ್ಕು ತಪ್ಪುತ್ತದೆ. ಸ್ವಾಮಿಗಳ ಮಾತುಗಳು ಮೌಲ್ಯಯುತ. ಈ ರೀತಿ ಮಾತನಾಡಿ ಆ ಮೌಲ್ಯವನ್ನು ಕನಿಷ್ಠಗೊಳಿಸುವುದು ತರವಲ್ಲ. ಹಾಗಾಗಿ, ಮಠಾಧೀಶರು ರಾಜಕಾರಣದ ಮೊಗಸಾಲೆಯಿಂದ ದೂರ ಇರುವುದೇ ಒಳಿತು. ರಾಜಕಾರಣದ ಕೆಸರಿನ ಕೊಳದೊಳಕ್ಕೆ ಕೈ ಹಾಕಿ ಕೊಳಕು ಮಾಡಿಕೊಳ್ಳಬಾರದು. ಸರ್ವಸಂಗ ಪರಿತ್ಯಾಗಿಗಳಾದ ಸ್ವಾಮಿಗಳೇ ಭೋಗಕ್ಕೆ ಪರಿತಪಿಸುವಂತಾದರೆ ಹೇಗೆ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಹೆಚ್ಚುವರಿ ಹಾಲು: ದೋಷರಹಿತ ಕ್ರಮ

ನಂದಿನಿ ಹಾಲಿನ ದರ ಮತ್ತು ಪ್ರಮಾಣವನ್ನು ಹೆಚ್ಚಿಸಿರುವ ಕೆಎಂಎಫ್ ಕ್ರಮವನ್ನು ಸಾಮಗ ದತ್ತಾತ್ರಿ ಪ್ರಶ್ನಿಸಿದ್ದಾರೆ (ವಾ.ವಾ., ಜೂನ್ 27). ಇಲ್ಲಿ ಅವರು ಗಮನಿಸಬೇಕಾದ ಇನ್ನೂ ಅನೇಕ ವಿಚಾರಗಳಿವೆ. ಸರ್ಕಾರಗಳು ಹಿಂದಿನ ಹತ್ತು ವರ್ಷಗಳಲ್ಲಿ ಹೆಚ್ಚಿಸಿರುವ ಪರೋಕ್ಷ ತೆರಿಗೆಗಳ ಪಟ್ಟಿಯನ್ನು ನೋಡಿದರೆ, ಜನಸಾಮಾನ್ಯರು ತಮಗೆ ಗೊತ್ತಿಲ್ಲದಂತೆಯೇ ಎಷ್ಟೆಲ್ಲಾ ವಸ್ತುಗಳಿಗೆ ಹೆಚ್ಚುವರಿ ಹಣ ತೆರುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ.

ಕೇಂದ್ರ ಸರ್ಕಾರ ಪಡೆಯುತ್ತಿರುವ ಸೆಸ್ ರೂಪದ ಪರೋಕ್ಷ ತೆರಿಗೆಯಲ್ಲಂತೂ ರಾಜ್ಯಗಳ ಪರಿಸ್ಥಿತಿ 'ಕೊಟ್ಟೋನ್ ಕೋಡಂಗಿ ಈಸ್ಕೊಂಡೋನ್ ಈರಭದ್ರ' ಎನ್ನುವಂತಾಗಿದೆ. ಇಂಥದ್ದರಲ್ಲಿ, ಹಾಲಿನ ಪೊಟ್ಟಣಕ್ಕೆ ಎರಡು ರೂಪಾಯಿ ಹೆಚ್ಚಿಸಿ 50 ಮಿ.ಲೀ ಹೆಚ್ಚುವರಿ ಹಾಲು ಕೊಡುತ್ತಿರುವ ಪಾರದರ್ಶಕ ಕ್ರಮವನ್ನು ಟೀಕಿಸುವ ಮುನ್ನ ಪರೋಕ್ಷ ತೆರಿಗೆಯೆಂಬ ಸುಲಿಗೆಯ ಬಗ್ಗೆಯೂ ಚರ್ಚೆ ಆಗಬೇಕಿದೆ. ಹಾಲಿನ ಉತ್ಪಾದನೆ ಹೆಚ್ಚಾಗಿದ್ದರೆ ಅದನ್ನು ಪೌಷ್ಟಿಕ ಆಹಾರವಾಗಿ ಉಚಿತವಾಗಿ ಹಂಚಲಿ ಎನ್ನುವ ಮಂದಿಯೇ ಸರ್ಕಾರದ ಉಚಿತ ಗ್ಯಾರಂಟಿಗಳನ್ನು ಭರಪೂರ ಜರಿದಿದ್ದಾರೆ ಎಂಬುದು ನಮ್ಮ ರಾಜಕಾರಣದ ತತ್ವಹೀನ ಪರಿಸ್ಥಿತಿಗೆ ಹಿಡಿದ ಕನ್ನಡಿ. ಗ್ಯಾರಂಟಿಗಳನ್ನು, ಅವುಗಳಿಂದ ಆಗಬಹುದಾದ ದೂರಗಾಮಿ ಪರಿಣಾಮಗಳನ್ನು ಸರಿಯಾದ ದಿಕ್ಕಿನಲ್ಲಿ ವಿಮರ್ಶೆಗೆ ಒಳಪಡಿಸುವ ಅಗತ್ಯವಿದೆ. ಆದರೆ, ಹಾಲಿನ ದರ ಏರಿಸಿ ಹೆಚ್ಚುವರಿ ಹಾಲು ಕೊಡುತ್ತಿರುವ ಕ್ರಮದಲ್ಲಿ ಮೇಲ್ನೋಟಕ್ಕೆ ದೋಷವಿಲ್ಲ.

ಶ್ರೀಕಂಠ, ಬೆಂಗಳೂರು

ಗಿರಿ...ಕನ್ಯೆ?!

ಕೊಪ್ಪಳದ ಕನಕಗಿರಿಯ
ಜನಸ್ಪಂದನದಲ್ಲಿ
'ಕನ್ಯೆ ಹುಡುಕಿಕೊಡಿ' ಎಂದು
ಜಿಲ್ಲಾಧಿಕಾರಿಗೆ ಮನವಿ
(ಪ್ರ.ವಾ., ಜೂನ್ 26),
10 ವರ್ಷಗಳಿಂದಲೂ
ಸಂಗಾತಿಗಾಗಿ ಹುಡುಕಾಡುತ್ತಿರುವ
ಕೃಷಿಕ ಸಂಗಪ್ಪನ ಈ (ಸಂ)ಗತಿ
ನಿಜಕ್ಕೂ ಅವರ್ಣನೀಯ!
ವರಿಸಲಿ ಬೇಗ ಆ ಗಿರಿ ಕನ್ಯೆ
ಕೂಡಿಬರಲಿ ಕುವರನಿಗೆ
ಕಂಕಣ ಭಾಗ್ಯ!

ಮ.ಗು.ಬಸವಣ್ಣ
ಮೈಸೂರು

ಶಕ್ತಿ ಯೋಜನೆ: ಸುಧಾರಣೆ ಅಗತ್ಯ

'ಶಕ್ತಿ' ಯೋಜನೆ ಕುರಿತ ಎಸ್.ಆರ್.ವಿಜಯಶಂಕರ ಅವರ ಲೇಖನ (ಸಂಗತ, ಜೂನ್ 28) ದಿನನಿತ್ಯ ಪ್ರಯಾಣಿಸುವ ಸಾಮಾನ್ಯರಿಗೆ ಆಗುವ ಹಿಂಸೆಯನ್ನು ಅಲಕ್ಷಿಸಿದೆ. ಉದಾಹರಣೆಗೆ, ಬಾಗಲಕೋಟೆಯಿಂದ ದಿನಾಲೂ ಹುಬ್ಬಳ್ಳಿ, ಬೆಳಗಾವಿ, ವಿಜಯಪುರ ನಗರಗಳಿಗೆ ಅನೇಕರು ಪ್ರಯಾಣಿಸುತ್ತಾರೆ. ಶಕ್ತಿ ಯೋಜನೆ ಬಂದ ನಂತರ ಬಸ್‌ಗಳು ಪ್ರಯಾಣಿಕರಿಗೆ ಉಸಿರಾಡುವುದಕ್ಕೇ ಕಷ್ಟವಾಗುವ ರೀತಿಯಲ್ಲಿ ತುಂಬಿರುತ್ತವೆ. ಅನೇಕ ಮಹಿಳೆಯರು 10 ಕಿ.ಮೀ. ದೂರದ ಗದ್ದನಕೇರಿಗೆ ಹೋಗುವವರು. ಅಲ್ಲಿ ಹೋದ ನಂತರ ಹೊಸಬರು ಹತ್ತುತ್ತಾರೆ. ಅವರು 15 ಕಿ.ಮೀ. ದೂರದ ಇನ್ನೊಂದು ಪಟ್ಟಣಕ್ಕೆ ಹೋಗುವವರು. ಇದರಿಂದ, ನೂರಾರು ಕಿ.ಮೀ. ದೂರ ಹೋಗುವವರಿಗೆ ಸೀಟು ಸಿಗುವ ಸಾಧ್ಯತೆಯೇ ಕಡಿಮೆ. ಆದರೂ ಮಹಿಳೆಯರನ್ನೂ ಒಳಗೊಂಡು ಅನೇಕರು ಅನಿವಾರ್ಯವಾಗಿ 2-3 ತಾಸು ನಿಂತುಕೊಂಡೇ ಹೋಗುತ್ತಾರೆ. ಹೀಗಾಗಿ ಶಕ್ತಿ ಯೋಜನೆಗೆ ತಕ್ಷಣವೇ ಸೂಕ್ತ ಮಾರ್ಪಾಡು ಮಾಡಬೇಕು. ದಿನಾಲು ದುಡಿಯಲು ಹೋಗುವವರಿಗೆ ಮಾತ್ರ ಪಾಸ್ ನೀಡುವುದು, 50 ಕಿ.ಮೀ.ಗಿಂತ ದೂರದ ಪ್ರಯಾಣಕ್ಕೆ ಅನ್ವಯಿಸದಿರುವುದು ಹೀಗೆ ಅನೇಕ ರೀತಿಯ ಪರಿಹಾರಗಳನ್ನು ಯೋಚಿಸಬಹುದು.

ಶಶಿಧರ ಪಾಟೀಲ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಪ್ರಶಸ್ತಿ ಪುರಸ್ಕೃತರು

ವರ್ಷದ ಅತ್ಯುತ್ತಮ ಚಿತ್ರ (2023)



ಡೇರ್‌ಡೆವಿಲ್ ಮುಸ್ತಾಫಾ

ಅತ್ಯುತ್ತಮ ನಟ



ಶಿಶಿರ ಬೈಕಾಡಿ
ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ

ಅತ್ಯುತ್ತಮ ನಟಿ



ರುಕ್ಮಿಣಿ ವಸಂತ್
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A

ಅತ್ಯುತ್ತಮ ಪೋಷಕ ನಟ



ರಂಗಾಯಣ ರಘು
ಚಿತ್ರ: ಟಗರುಪಲ್ಯ

ಅತ್ಯುತ್ತಮ ಪೋಷಕ ನಟಿ



ತಾರಾ ಅನುರಾಧ
ಚಿತ್ರ: ಟಗರುಪಲ್ಯ

ಅತ್ಯುತ್ತಮ ನಿರ್ದೇಶನ



ಹೇಮಂತ್ ಎಂ. ರಾವ್
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A

ಅತ್ಯುತ್ತಮ ಚೊಚ್ಚಲ ನಿರ್ದೇಶನ



ನಿತಿನ್ ಕೃಷ್ಣಮೂರ್ತಿ
ಚಿತ್ರ: ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ನಟಿಯರಾದ ಶ್ರುತಿ, ಶ್ರುತಿ ಹರಿಹರನ್, ಭಾವನ ಅವರಿಂದ ನೃತ್ಯ ಪ್ರದರ್ಶನ ನೀಡಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಅತ್ಯುತ್ತಮ ಸಂಗೀತ ನಿರ್ದೇಶನ



ವಿ.ಹರಿಕೃಷ್ಣ
ಚಿತ್ರ: ಕಾಟೇರ

ಅತ್ಯುತ್ತಮ ಛಾಯಾಚಿತ್ರಗ್ರಹಣ



ಅಭಿಮನ್ಯು ಸದಾನಂದನ್
ಚಿತ್ರ: ಆಚಾರ್ ಆಂಡ್ ಕೋ.

ಅತ್ಯುತ್ತಮ ಸಂಕಲನ



ದೀಪು ಎಸ್.ಕುಮಾರ್
ಚಿತ್ರ: ಘೋಸ್ಟ್

ಅತ್ಯುತ್ತಮ ಚಿತ್ರಕಥೆ





ಜಡೇಶ ಕೆ.ಹಂಪಿ, ತರುಣ್ ಕಿಶೋರ್ ಸುಧೀರ್
ಚಿತ್ರ: ಕಾಟೇರ

ಅತ್ಯುತ್ತಮ ಹಿನ್ನೆಲೆ ಗಾಯಕ



ಕಪಿಲ್ ಕಪಿಲನ್
ಹಾಡು: ಸಪ್ತ ಸಾಗರದಾಚೆ ಎಲ್ಲೊ
ಸಪ್ತ ಸಾಗರದಾಚೆ ಎಲ್ಲೋ–Side-A

ಕಲಾವಿದೆ ಸರೋಜಾ ದೇವಿಗೆ 'ಜೀವಮಾನ ಸಾಧನೆ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಸಮಾರಂಭದಲ್ಲಿ ಹಿರಿಯ ಕಲಾವಿದೆ ಬಿ. ಸರೋಜಾದೇವಿ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ, ಪುರಸ್ಕರಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ದಿ ಪ್ರಿಂಟರ್ಸ್ ಮೈಸೂರು ಪ್ರೈ.ಲಿ. ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸರೋಜಾ ದೇವಿ, ಕಲಾವಿದರಿಗೆ ಎಲ್ಲರನ್ನೂ ಪ್ರೀತಿಸುವ ಗುಣವಿದ್ದರೆ ಯಶಸ್ಸು ಒಲಿಯುತ್ತದೆ. ತಾಳ್ಮೆ, ಪರಿಶ್ರಮ ಕಲಾವಿದರ ಮೂಲ ಮಂತ್ರವಾಗಬೇಕು. ಆಗ ದೊಡ್ಡ ನಟ, ನಟಿಯರಾಗಲು ಸಾಧ್ಯ. ಅಂತಹ ಕಲಾವಿದರಿಗೆ ವೃತ್ತಿ ಬದುಕಿನಲ್ಲೂ ನೆಮ್ಮದಿ ದೊರಕುತ್ತದೆ ಎಂದರು.

'ನಾನೇನು ಹೆಸರು ಮಾಡಿದ್ದೇನೋ ಅದೆಲ್ಲವೂ ದೇವರ ಇಚ್ಛೆ, ಅನುಗ್ರಹ. ನನ್ನದು ಎನ್ನುವುದು ಏನೂ ಇಲ್ಲ, ಅದನ್ನೆಲ್ಲ ಆ ಭಗವಂತ ಮಾಡಿದ್ದಾನೆ. ನಾವೆಲ್ಲ ನೆಪಮಾತ್ರ ಅಷ್ಟೆ' ಎಂದು ಹೇಳಿದರು.

'ನಿಮ್ಮ ನೆಚ್ಚಿನ ನಾಯಕ ನಟರು ಯಾರು' ಎಂಬ ನಿರೂಪಕಿ ಅನುಶ್ರೀ ಅವರ ಪ್ರಶ್ನೆಗೆ,'ರಾಜ್‌ಕುಮಾರ್, ಶಿವಾಜಿ ಗಣೇಶನ್, ಎಂ.ಜಿ. ರಾಮಚಂದ್ರನ್' ಎಂದು ಉತ್ತರಿಸಿದರು. ಮತ್ತೆ ಚಿತ್ರರಂಗಕ್ಕೆ ಬನ್ನಿ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಕೋರಿಕೆಯನ್ನು ನಯವಾಗಿ ತಳ್ಳಿಹಾಕಿದ ಅವರು, 'ಮತ್ತೆ ಚಿತ್ರಗಳಿಗೆ ಬಣ್ಣ ಹಚ್ಚಲಾರೆ' ಎಂದು ಪ್ರತಿಕ್ರಿಯಿಸಿದರು.

ಚಿತ್ರರಂಗ ಸಂಕಷ್ಟದಲ್ಲಿದೆ ಡಿ.ಕೆ. ಶಿವಕುಮಾರ್

'ಸಿನಿಮಾ ಕ್ಷೇತ್ರ ಪ್ರಸ್ತುತ ಸನ್ನಿವೇಶದಲ್ಲಿ ಸಂಕಷ್ಟದಲ್ಲಿದೆ. ಎಷ್ಟೋ ಸಿನಿಮಾಗಳಿಗೆ ಚಿತ್ರಮಂದಿರಗಳಿಗೆ ಬಾಡಿಗೆ ಕಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಚಿತ್ರರಂಗದ ಎಲ್ಲರಿಗೂ ದೊಡ್ಡ ಶಕ್ತಿ ಸಿಗಬೇಕಿದೆ. ಉಳಿದು, ಇನ್ನಷ್ಟು ಬೆಳೆಯಬೇಕಿದೆ. 'ಪ್ರಜಾವಾಣಿ ಸಿನಿ ಸಮ್ಮಾನ' ಕಾರ್ಯಕ್ರಮ ಚಿತ್ರರಂಗದ ಜವಾಬ್ದಾರಿ ಹೆಚ್ಚಿಸಿದೆ' ಎಂದರು. 'ಯಾವುದೇ ಕ್ಷೇತ್ರವಿರಲಿ ನಂಬಿಕೆಗಿಂತ ದೊಡ್ಡದು ಯಾವುದು ಇಲ್ಲ. ಪತ್ರಿಕಾ ಕ್ಷೇತ್ರದಲ್ಲಿ ಅಂತಹ ನಂಬಿಕೆಗೆ ಮತ್ತೊಂದು ಹೆಸರು 'ಪ್ರಜಾವಾಣಿ'. ಸರ್ಕಾರಗಳನ್ನು ಸದಾ ಎಚ್ಚರಿಸುವ ಕೆಲಸ ಮಾಡುತ್ತಾ ಬಂದಿದೆ. ಜನರಿಗಾಗಿಯೇ ಜನ್ಮ ತಾಳಿದ ಪತ್ರಿಕೆ' ಎಂದು ಬಣ್ಣಿಸಿದರು.

ಅತ್ಯುತ್ತಮ ಹಿನ್ನೆಲೆ ಗಾಯಕಿ



ಶ್ರೀಲಕ್ಷ್ಮಿ ಬೆಳ್ಮಣ್ಣು
ಹಾಡು: ಕಡಲನು ಕಾಣ ಹೊರಟಿರೋ
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ–Side-A

ಅತ್ಯುತ್ತಮ ಗೀತ ಸಾಹಿತ್ಯ



ಧನಂಜಯ ರಂಜನ್
ಹಾಡು: ನದಿಯೇ ಓ ನದಿಯೇ
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side-A

ಅತ್ಯುತ್ತಮ ನೃತ್ಯ ನಿರ್ದೇಶನ



ಭೂಷಣ್
ಹಾಡು: ಪಸಂದಾಗವ್ನೆ
ಚಿತ್ರ: ಕಾಟೇರ

ಕನ್ನಡದ ಪ್ರತೀಕ, ನಾನು ಪತ್ರಿಕೆ ಓದದ ದಿನವೇ ಇಲ್ಲ. ಈಚೆಗೆ ನಮ್ಮ ಬಗ್ಗೆ ಏನು ಟೀಕೆ ಬಂದಿದೆ ಎನ್ನುವುದಕ್ಕಾದರೂ ಓದುತ್ತೇನೆ. ನಂತರ ಬೇರೆ ಪತ್ರಿಕೆಯತ್ತ ಗಮನ ಹರಿಸುವೆ. ಸಿನಿಮಾ ರಂಗಕ್ಕೂ 'ಪ್ರಜಾವಾಣಿ'ಗೂ ದಶಕಗಳ ನಂಟಿದೆ

ಬಸವರಾಜ ಬೊಮ್ಮಾಯಿ, ಸಂಸದ

ಪ್ರತಿ ಕಲಾವಿದರ ಸಾಧನೆ ಹಿಂದೆ ಅಪಾರ ಪರಿಶ್ರಮ, ತಪಸ್ಸು ಇರುತ್ತದೆ. ಆದರೆ, ಎಲ್ಲರಿಗೂ ಪದ್ಮಶ್ರೀ, ರಾಷ್ಟ್ರ ಪ್ರಶಸ್ತಿ ಸಿಗುವುದಿಲ್ಲ. ಅಂತಹ ಕೊರತೆ ನೀಗಿಸುವ ಪರ್ಯಾಯ ವೇದಿಕೆಯಾಗಿ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾಣಿಸುತ್ತಿದೆ

ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು

- ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ: **ಪಿಂಕಿ ಎಲ್ಲಿ?**
- ಅತ್ಯುತ್ತಮ ನಿರ್ಮಾಣ ವಿನ್ಯಾಸ: **19.20.21**
- ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್: **ಕಬ್ಜ**
- ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ: **ಸಪ್ತ ಸಾಗರದಾಚೆ ಎಲ್ಲೋ**

ಜನಮೆಚ್ಚಿದ ವಿಭಾಗದ ಪ್ರಶಸ್ತಿ

- ಜನಮೆಚ್ಚಿದ ಸಿನಿಮಾ: **ಕಾಟೇರ**
- ಜನಮೆಚ್ಚಿದ ನಟ: ರಕ್ಷಿತ್ ಶೆಟ್ಟಿ, ಚಿತ್ರ: **ಸಪ್ತ ಸಾಗರದಾಚೆ ಎಲ್ಲೋ**
- ಜನಮೆಚ್ಚಿದ ನಟಿ: ರುಕ್ಮಿಣಿ ವಸಂತ್, ಚಿತ್ರ: **ಸಪ್ತ ಸಾಗರದಾಚೆ ಎಲ್ಲೋ**
- ಜನಮೆಚ್ಚಿದ ಸಂಗೀತ: **ಸಪ್ತ ಸಾಗರದಾಚೆ ಎಲ್ಲೋ**

ಟಗರು ಹಾಡಿಗೆ ಶಿವಣ್ಣ ನೃತ್ಯ



'ಕನ್ನಡ ಸಿನಿ ಧ್ರುವತಾರೆ ಪ್ರಶಸ್ತಿ'ಗೆ ಭಾಜನರಾದ ನಟ ಶಿವರಾಜ್ ಕುಮಾರ್ ಅವರು ವೇದಿಕೆ ಏರುತ್ತಿದ್ದಂತೆ 'ಟಗರು ಬಂತು ಟಗರು' ಗೀತೆ ಮೊಳಗಿತು. ಪ್ರಶಸ್ತಿ ಸ್ವೀಕರಿಸುವ ಮುನ್ನವೇ ಅವರು ಸ್ವಯಂಪ್ರೇರಿತರಾಗಿ ನೃತ್ಯ ಮಾಡಿದರು. ಶಿವಣ್ಣ ಅವರ ಎನರ್ಜಿಗೆ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು.

'ನೃತ್ಯಕ್ಕೆ ವಯಸ್ಸು ಅಡ್ಡ ಬರುವುದಿಲ್ಲ. ನಾವು ಎಲ್ಲೇ ಇದ್ದರೂ ರಂಜಿಸಬೇಕು' ಎಂದರು.

ತಾರಾ ಸಮಾಗಮ, ನೃತ್ಯ ಸಂಭ್ರಮ

ಬೆಂಗಳೂರು: ಚಂದನವನದ ತಾರೆಯರು ಸಿನಿ ಸಾಧನೆಗೆ ಪ್ರಶಸ್ತಿಯ ಗರಿಯನ್ನು ಮುಡಿಗೇರಿಸಿಕೊಂಡು ಸಂಭ್ರಮಿಸಿದರೆ, ನಟ-ನಟಿಯರು ಅದ್ದೂರಿ ವೇದಿಕೆಯಲ್ಲಿ ನೃತ್ಯದ ಮೂಲಕ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

ಬಹು ನಿರೀಕ್ಷಿತ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭ ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆಯಿತು. ಜೀವಮಾನ ಸಾಧನೆ ಸೇರಿ 28 ವಿಭಾಗಗಳಲ್ಲಿ ಸಿನಿ ಸಾಧಕರಿಗೆ ಚಿತ್ರರಂಗದ ಜತೆಗೆ ಸಾಹಿತ್ಯ, ರಾಜಕೀಯ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಜೆ 4 ಗಂಟೆಗೆ ಕೆಂಪು ಹಾಸಿನ ಮೇಲೆ ಮಂದಹಾಸದೊಂದಿಗೆ ಕೈಬೀಸುತ್ತ ಹೆಜ್ಜೆ ಹಾಕಿದ ತಾರೆಯರು, ವೇದಿಕೆಗೇರಿ ಪ್ರಶಸ್ತಿ ತಮ್ಮದಾಗಿಸಿಕೊಳ್ಳಲು ಕಾತರರಾಗಿದ್ದರು. ನಟ ರಮೇಶ್ ಹಾಗೂ ಅನುಶ್ರೀ ಅವರ ಚಂದದ ನಿರೂಪಣೆ ಸಮಾರಂಭದ ಮೆರಗು ಹೆಚ್ಚಿಸಿದರೆ, ನಟಿ ಆಶಿಕಾ ರಂಗನಾಥ್ ಮತ್ತು ತಂಡದವರು 'ರಾಗ ತಾಳ ನಾಟ್ಯಂ' ಗೀತೆಗೆ ನೃತ್ಯದ ಮೂಲಕ ಚಾಲನೆ ನೀಡಿದರು. 'ಜೀವಮಾನ ಸಾಧನೆ ಪ್ರಶಸ್ತಿ'ಗೆ ಭಾಜನರಾದ ಬಿ. ಸರೋಜಾದೇವಿ ಅವರು ವೇದಿಕೆಗೆ ಏರುತ್ತಿದ್ದಂತೆಯೇ ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸಿದರು. ಪ್ರಶಸ್ತಿ ಪ್ರದಾನ ಆಗುತ್ತಿದ್ದಂತೆ ನೆರೆದಿದ್ದವರು ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಕೈ ಸೇರುತ್ತಿದ್ದಂತೆ ಕೆಲವರು ಭಾವುಕರಾದರೆ, ಇನ್ನೂ ಕೆಲವರಲ್ಲಿ ಸಾರ್ಥಕತೆಯ ಭಾವ ಮೂಡಿತ್ತು. ಈ ವೇಳೆ ತಮಗೆ ಅವಕಾಶ ನೀಡಿದ ನಿರ್ದೇಶಕ, ನಿರ್ಮಾಪಕರು ಸೇರಿ ಚಿತ್ರ ತಂಡದ ಸದಸ್ಯರನ್ನು, ಚಿತ್ರೀಕರಣದ ವೇಳೆ ನಡೆದ ಘಟನೆಗಳನ್ನು ಸ್ಮರಿಸಿಕೊಂಡರು. ಪ್ರಶಸ್ತಿ ಕೈ ತಪ್ಪಿದರೂ ಉಪಸ್ಥಿತರಿದ್ದ ನಾಮ ನಿರ್ದೇಶಿತ ಸದಸ್ಯರು ಸಹ ನಟ-ನಟಿಯರಿಗೆ ಶುಭ ಹಾರೈಸಿದರು.

ಚಿತ್ರರಂಗದ ಪ್ರಮುಖರಾದ ಶಿವರಾಜ್ ಕುಮಾರ್, ಪ್ರಕಾಶ್ ರಾಜ್, ಖುಷ್ಬೂ, ಡಾಲಿ ಧನಂಜಯ್, ರುಕ್ಮಿಣಿ ವಸಂತ್, ದೊಡ್ಡಣ್ಣ, ತರುಣ್ ಸುಧೀರ್, ವಿ. ಮನೋಹರ್, ಹರಿಕೃಷ್ಣ, ಶಮಿತಾ ಮಲ್ನಾಡ್, ದತ್ತಣ್ಣ, ಚೈತ್ರಾ ಆಚಾರ್, ಪೂಜಾ ಗಾಂಧಿ, ಮಂಡ್ಯ ರಮೇಶ್, ಟಿ.ಎನ್. ಸೀತಾರಾಮ್, ಪಿ. ಶೇಷಾದ್ರಿ, 'ಮುಖ್ಯಮಂತ್ರಿ' ಚಂದ್ರು, ನಾಗತಿಹಳ್ಳಿ ಚಂದ್ರಶೇಖರ್, ಎಸ್. ನಾರಾಯಣ್, ಭಾ.ಮ. ಹರೀಶ್, ಉಮೇಶ್ ಬಣಕಾರ್, ಆರ್. ಚಂದ್ರು, ವಿಜಯ ಪ್ರಕಾಶ್, ಗುರುಕಿರಣ್ ಸೇರಿ ಹಲವರು ಪಾಲ್ಗೊಂಡಿದ್ದರು.

ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರದವರೂ ಸಮಾರಂಭಕ್ಕೆ ಸಾಕ್ಷಿಯಾದರು. ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಚಿವರಾದ ರಾಮಲಿಂಗಾರೆಡ್ಡಿ, ಶಿವರಾಜ ಎಸ್. ತಂಗಡಗಿ, ಸಾಹಿತ್ಯ ಕ್ಷೇತ್ರದ ಪ್ರಮುಖರಾದ ಚಂದ್ರಶೇಖರ ಕಂಬಾರ, ದೊಡ್ಡರಂಗೇಗೌಡ, ಎಸ್.ಜಿ. ಸಿದ್ಧರಾಮಯ್ಯ ಮೊದಲಾದವರು ಉಪಸ್ಥಿತರಿದ್ದರು.

ಒಂಬತ್ತು ದಶಕದ ಮೆಲುಕು : ಕನ್ನಡ ಚಿತ್ರರಂಗವು 90 ವರ್ಷಗಳನ್ನು ಪೂರೈಸಿದ್ದು, ಕಾರ್ಯಕ್ರಮದಲ್ಲಿ ಒಂಬತ್ತು ದಶಕಗಳ ಸಿನಿಯಾನವನ್ನು ಸ್ಮರಿಸಲಾಯಿತು.

ನಟಿಯರಾದ ಶ್ರುತಿ, ಶ್ರುತಿ ಹರಿಹರನ್, ಭಾವನಾ ರಾವ್, ರೂಪಿಕಾ ಹಾಗೂ ಸಿಂಧು ಲೋಕನಾಥ್ ಅವರು ನೃತ್ಯದ ಮೂಲಕ ಅಂದಿನಿಂದ ಇಂದಿನವರೆಗಿನ ಆಯ್ದ ಜನಪ್ರಿಯ ಗೀತೆಗಳಿಗೆ ಹೆಜ್ಜೆ ಹಾಕಿದರು. ಈ ನೃತ್ಯವು ನೆರೆದಿದ್ದವರನ್ನು ಆಯಾ ಕಾಲಘಟ್ಟಕ್ಕೆ ಕರೆದೊಯ್ದಿತು. ಇದೇ ವೇಳೆ, ಕನ್ನಡ ಚಿತ್ರರಂಗ ಸಾಗಿ ಬಂದ ಹಾದಿಯನ್ನು ಡಿಜಿಟಲ್ ಪರದೆಯಲ್ಲಿ ಪ್ರದರ್ಶಿಸಲಾಯಿತು. ಚಿತ್ರರಂಗದ ತೆರೆಮರೆಯ ನಾಯಕರಿಗೆ ಪ್ರೇಕ್ಷಕರು ಎದ್ದು ನಿಂತು ಗೌರವಿಸಿದರು.

90 ವರ್ಷಗಳ ಸಿನಿ ಪಯಣದ ಬಗ್ಗೆ ನಟ ರಮೇಶ್ ಅರವಿಂದ್ ಹಾಗೂ ನಟಿ ಶ್ರುತಿ ಮನದಾಳದ ಮಾತುಗಳನ್ನು ಹಂಚಿಕೊಂಡರು.

ಆತ್ಮಾವಲೋಕನ ಅಗತ್ಯ: ಪ್ರಕಾಶ್ ರಾಜ್

ಈಚಿನ ವರ್ಷಗಳಲ್ಲಿ ಸಿನಿ ಸನ್ಮಾನದ ಸಂಭ್ರಮ ಕಡಿಮೆ ಆಗಿದೆ. ಆ ಕೊರತೆಯನ್ನು 'ಪ್ರಜಾವಾಣಿ' ನೀಗಿಸುತ್ತಿದೆ ಎಂದು ನಟ ಪ್ರಕಾಶ್ ರಾಜ್ ಹೇಳಿದರು.

ಸಿನಿಮಾ ರಂಗದಲ್ಲಿ ಹಿಂದೆ ವ್ಯಾಪಾರ ಇರಲಿಲ್ಲ. ಈಗಿನ ಬಹುತೇಕ ಚಿತ್ರಗಳ ಗುಣಮಟ್ಟ, ಅಭಿರುಚಿ ಕುರಿತು ಚಿತ್ರರಂಗ ಹಾಗೂ ಪ್ರೇಕ್ಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕಲಾವಿದ ಚಿತ್ರರಂಗದಲ್ಲಿ ಬೆಳೆಯಲು ಒಳಗಿನ ಶ್ರೀಮಂತಿಕೆ ಮುಖ್ಯ. ಭಾಷೆ, ಮಾತು, ಗ್ರಹಿಕೆ ಚಿತ್ರರಂಗವನ್ನು ಶ್ರೀಮಂತ ಮಾಡುತ್ತದೆ. ಪ್ರತಿಭೆಗಿಂತ ಜನರ ಪ್ರೀತಿ, ನಂಬಿಕೆ ಕಲಾವಿದನಿಗೆ ಹೆಚ್ಚಿನ ಮೌಲ್ಯ ತಂದುಕೊಡುತ್ತದೆ ಎಂದರು.

ಪದಬಂಧ 5726


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯಾವ ಉದ್ದೇಶವೂ ಇಲ್ಲದ್ದು (5)
3.ಹಿಂದೆ ಎಂದೂ ಕಾಣದೆ ಅಪರೂಪವಾದುದು (3)
5.ಜೊತೆಯಲ್ಲಿ ಆಲೋಚಿಸುವವನು (5)
7.ಅಗಸ ಇಲ್ಲಿದ್ದಾನೆ (3)
9.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
11.ಅರಳುವಿಕೆ ಅಥವಾ ಪ್ರಕಟವಾಗುವಿಕೆ (3)
13.ಯುದ್ಧದ ಕೇಸರಿ ಇಲ್ಲಿದೆ (5)
15.ಇದು ಒಳ್ಳೆಯ ದಿನ (3)
16.ಅತ್ಯಂತ ಚೆಲುವಾದುದು (5)

ಮೇಲಿಂದ ಕೆಳಕ್ಕೆ

1.ಜಗತ್ತಿನ ರೂಢಿಯಿದು (4)
2.ರಾಯರಿಂದ ಬಂದಿರುವ ನಿರೂಪ (3)
4.ಪೂಜಿಸುವವನು (3)
6.ಲೊಚ್ಚಕ್ಕನೇ ಮುತ್ತಿಟ್ಟಾಗ ಕಾಣಿಸಿದ ಕಣ್ಣು! (3)
8.ಜಡೆಗಟ್ಟಿದ ಕೂದಲು (2)
9.ಹೆಂಡತಿಯನ್ನು ಕಳೆದುಕೊಂಡವನು (3)
10.ಉತ್ತರದವರ ಚಿಕ್ಕಪ್ಪ (2)
12.ಒಳ್ಳೆಯ ನಡತೆಯಿದು (4)
13.ಸರ ಧರಿಸಿದವನು ಹಚ್ಚಿರುವ ಪಾಳಿ (3)
14.ರಾಮನ ಹತ್ತಿರ ನಿಂತಿದ್ದಾನಲ್ಲಾ ಈ ಕೃತಘ್ನ! (3)



5725ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸಮಾವೇಶ 3.ಅಭಿಮಾನಿ
5.ನವೀನ 6.ರಕ್ಷಕ
8.ನಿಧಾನ 10.ಹಣತೆ
11.ಪತಿತ 13.ಕುರೂಪ
15.ಪರಿಹಾರ 16.ತರಾತುರಿ

ಮೇಲಿಂದ ಕೆಳಕ್ಕೆ:

1.ಸದಗರ 2.ಶಯನ
3.ಅಶನ 4.ನಿಮೀಲನ
7.ಕ್ಷಪಣ 9.ಧಾವತಿ
10.ಹಸ್ತಕ್ಷೇಪ 12.ತಲೋದರಿ
13.ಕುಬೇರ 14.ಪರಾತ

ಸುಡೊಕು 6111

3		2	1		4		6	
	1						3	2
7			6		2	5		
2					3			5
				4		2	9	
			9					1
	4		2				8	
9				7	8		5	
	6			5		4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6110 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಅಷ್ಟಮಿ ಗಂ. 14-21 ನಕ್ಷತ್ರ: ಉತ್ತರಾಭಾದ್ರ ಗಂ. 08-49 ಯೋಗ: ಶೋಭನ ಗಂ. 18-54 ಕರಣ: ಕೌಲವ ಗಂ. 14-21, ಮಿಥುನ ಮಾಸದ 15 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-11 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 23 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 11, 6

ಮೇಷ: ಒಂದು ಸುಳ್ಳನ್ನು ಹೇಳಿ ಅದನ್ನು ಸಮರ್ಥಿಸಿಕೊಳ್ಳಲು ಸುಳ್ಳಿನ ಸರಮಾಲೆಗಳನ್ನೆ ಹೇಳಬೇಕಾಗುತ್ತದೆ. ಯಾವುದೇ ಕಾರ್ಯ ಆರಂಭಿಸುವ ಮುನ್ನ ಪರಂಪರೆಯಲ್ಲಿ ನಡೆದು ಬಂದ ವಿಧಿಯನ್ನು ಆಚರಿಸಿ.

ವೃಷಭ: ವ್ಯಾವಹಾರಿಕ ಪಾಲುದಾರರ ಜತೆ ಉತ್ತಮ ಬಾಂಧವ್ಯವನ್ನು ಹೊಂದುವಿರಿ. ಹರಿತವಾದ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಿ. ನಿವೇಶನ ಕೊಳ್ಳಲು ಸೂಕ್ತಸ್ಥಳದ ಹುಡುಕಾಟ ನಡೆಸುವಿರಿ.

ಮಿಥುನ: ಹಿಂದಿನ ದಿನದ ನಿದ್ರಾಹೀನತೆಯಿಂದಾಗಿ ಕೆಲಸ ಮಾಡುವಾಗ ತಪ್ಪುಗಳಾಗುವ ಸಾಧ್ಯತೆ ಇದೆ. ಇತರರನ್ನು ಸಂತೋಷ ಪಡಿಸುವ ಭರದಲ್ಲಿ ನಿಮ್ಮ ಜವಾಬ್ದಾರಿ ಮರೆಯದಿರಿ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರಲಿದೆ.

ಕರ್ಕಾಟಕ: ವಿದ್ಯಾರ್ಜನೆ ಹೆಸರಿನಲ್ಲಿ ಕುಟುಂಬಕ್ಕೆ ಹೊರೆಯಾಗುವ ರೀತಿ ನಡೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಅವಲೋಕಿಸಿ. ನಿಮ್ಮ ವಿದೇಶ ಪ್ರವಾಸದ ಕನಸಿಗೆ ಶುಭ ಮುಹೂರ್ತ ಕೂಡಿ ಬರುವುದು.

ಸಿಂಹ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಹಾಗೂ ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವೃತ್ತಿಯಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನಿಮ್ಮದಾಗಲಿದೆ.

ಕನ್ಯಾ: ಬಹುಜನರೊಂದಿಗೆ ವಿಶ್ವಾಸ ಕಳೆದುಕೊಂಡಿರುವ ನೀವು ಪುನಃ ಎಲ್ಲರ ವಿಶ್ವಾಸ ಗಳಿಸಬೇಕಾಗುವುದು. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗಲಿದೆ.

ತುಲಾ: ದಿನದ ಉತ್ತರಾರ್ಧದಲ್ಲಿ ಸುಖ ಜೀವನ ನಡೆಸಲು ಪೂರ್ವಾರ್ಧದಲ್ಲಿ ಶ್ರಮಿಸಬೇಕು. ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದರಿಂದ ಒತ್ತಡ ತರುವಂತಹ ಯಾವುದೇ ಕೆಲಸಗಳಿದ್ದರೂ ನಿರರ್ಗಳವಾಗಿ ಬಗೆಹರಿಯುವುದು.

ವೃಶ್ಚಿಕ: ಜ್ವರ ಶೀತದಂತಹ ಅನಾರೋಗ್ಯ ನಿಮ್ಮನ್ನು ಕಾಡಲಿದೆ. ಬಹಳ ದಿನಗಳಿಂದ ಬಾಕಿ ಇರುವ ಕಾರ್ಯವನ್ನು ಆರಂಭಿಸುವ ಬಗ್ಗೆ ಯೋಚಿಸಿ. ತಂತಿವಾದಕರ ನೂತನ ಪ್ರಯೋಗವು ಸಂಗೀತ ರಸಿಕರ ಮನಗೆಲ್ಲಲಿದೆ.

ಧನು: ದೇವತಾರಾಧನೆಯಿಂದ ವ್ಯವಹಾರದಲ್ಲಿನ ಕಠಿಣ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಹೊಂದುವಿರಿ. ದಕ್ಷಿಣಾಮೂರ್ತಿ ಪೂಜೆಯಿಂದ ವಿದ್ಯಾಭ್ಯಾಸದ ವಿಷಯಗಳಲ್ಲಿ ನೆಮ್ಮದಿ ದೊರೆಯುವುದು.

ಮಕರ: ವಿದ್ಯಾಭ್ಯಾಸದಲ್ಲಿ ಉತ್ತಮ ಫಲಿತಾಂಶ ಪಡೆದು ಹೆಚ್ಚಿನ ವ್ಯಾಸಾಂಗಕ್ಕೆ ವಿದೇಶಕ್ಕೆ ತೆರಳುವ ಅವಕಾಶವಿದೆ. ತಾಯಿಯ ಆರೋಗ್ಯದಲ್ಲಿ ಏರಿಳಿತಗಳಾಗಲಿದ್ದು, ವೈದ್ಯರನ್ನು ಭೇಟಿ ಮಾಡಬೇಕಾಗುವುದು.

ಕುಂಭ: ಸಹೋದರರಿಂದ ಹಿತವಚನ ಕೇಳಬೇಕಾದೀತು. ಭಿನ್ನಾಭಿಪ್ರಾಯ ಮೂಡಿದಲ್ಲಿ ಶಾಂತ ಸ್ವಭಾವದಿಂದ ವರ್ತಿಸುವುದು ಉತ್ತಮ. ಕೃಷಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚಿಂತಿಸಬೇಕಾದ ಅಗತ್ಯವಿಲ್ಲ.

ಮೀನ: ಭೂ ಖರೀದಿ ಅಥವಾ ಗೃಹ ನಿರ್ಮಾಣದಂತಹ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ಅನುಭವಕ್ಕೆ ಬರುವುದಿಲ್ಲ. ದೈವಬಲದಿಂದ ಒಳಿತಾಗುವುದು.

ಷೇರುಪೇಟೆ ವಹಿವಾಟು 210

ಇಂದಿನ ಅಂತ್ಯ 79,032 · ಹಿಂದಿನ ಅಂತ್ಯ 79,243

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,044
ಇಂದಿನ ಅಂತ್ಯ	24,010
▼	33
ದಿನದ ಕನಿಷ್ಠ	23,985

ವಿನಿಮಯ ದರ

$ ಡಾಲರ್	83.34
£ ಪೌಂಡ್	105.46
€ ಯುರೊ	89.29
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1525)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹960 (965)
ಪಾಮೋಲಿನ್	₹910 (905)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹300-471
ದ್ವಿತಳಿ (ಕೆ.ಜಿ)	₹320-619

ಮುಂಬೈ ಧಾರಣೆ

ಶೇಂಗಾ

28-6-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1535)
ಒಂದು ವಾರದ ಡೆಲಿವರಿ	1535 (1530)
ಸೋಯಾ ಕಚ್ಚಾ	915 (915)
ಪಾಮ್ ವಾರದ ಡೆಲಿವರಿ	908 (903)
ಸೂರ್ಯಕಾಂತಿ ಎಣ್ಣೆ ಕಚ್ಚಾ	905 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹71,500 (71,000)

ಬೆಳ್ಳಿ ಕೆ.ಜಿ ₹88,102 (87,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9050
ಕೆ.ಆರ್.ಪೇಟೆ	₹8000-9000
ತಿಪಟೂರು	₹8900-9100
ತುರುವೇಕೆರೆ	₹8900-8900

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹194
ಗುಡ್ ಲಾಟ್ ₹181	(ಪ್ರತಿ ಕೆ.ಜಿಗೆ)

ಅಮೆರಿಕ ಅಧ್ಯಕ್ಷೀಯ ಚುನಾವಣೆ ಅಭ್ಯರ್ಥಿಗಳ ಮುಖಾಮುಖಿ ಚರ್ಚೆ

ಟ್ರಂಪ್– ಬೈಡನ್ ವಾಕ್ಸಮರ

ಅಟ್ಲಾಂಟಾ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ರಿಪಬ್ಲಿಕನ್ ಪಕ್ಷದ ಪ್ರತಿಸ್ಪರ್ಧಿ ಡೊನಾಲ್ಡ್ ಟ್ರಂಪ್ ನಡುವಣ ಮೊದಲ ಮುಖಾಮುಖಿ ಚರ್ಚೆ ನಡೆದಿದ್ದು, ಇಬ್ಬರೂ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿದ್ದಾರೆ.

ಬಹಿರಂಗ ಚರ್ಚೆಯು ದೇಶದ ಆರ್ಥಿಕ ಸ್ಥಿತಿಗತಿ, ಗಡಿ ವಿವಾದ, ವಿದೇಶಾಂಗ ನೀತಿ, ಗರ್ಭಪಾತ ಕುರಿತ ಕಾನೂನುಗಳು ಮತ್ತು ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ಇಬ್ಬರ ನಡುವೆ ತುರುಸಿನ ವಾದ–ವಿವಾದಕ್ಕೆ ವೇದಿಕೆಯೊದಗಿಸಿತು. ಇಬ್ಬರೂ ಪರಸ್ಪರರನ್ನು 'ಸುಳ್ಳುಗಾರ' ಮತ್ತು 'ಅಮೆರಿಕ ತನ್ನ ಇತಿಹಾಸದಲ್ಲೇ ಕಂಡಿರದ ಅತ್ಯಂತ ಕೆಟ್ಟ ಅಧ್ಯಕ್ಷ' ಎಂದು ದೂರಿದರು.

90 ನಿಮಿಷ ನಡೆದ ಚರ್ಚೆಯಲ್ಲಿ ಬೈಡನ್ ಅವರು ಟ್ರಂಪ್ ಅವರಿಗೆ ಸಂಬಂಧಿಸಿದ ವೈಯಕ್ತಿಕ ವಿಚಾರಗಳನ್ನು ಪ್ರಸ್ತಾಪಿಸಿ ಟೀಕೆ ಮಾಡಿದರೆ, ಟ್ರಂಪ್ ಅವರು ಹಾಲಿ ಅಧ್ಯಕ್ಷರ ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳಿಗೆ ಒತ್ತು ಕೊಟ್ಟು ಮಾತನಾಡಿದರು.



ಡೊನಾಲ್ಡ್ ಟ್ರಂಪ್ (ಎಡ) ಹಾಗೂ ಜೋ ಬೈಡನ್ ಅವರು ಚರ್ಚೆಯಲ್ಲಿ ಪಾಲ್ಗೊಂಡರು —ಎಎಫ್‌ಪಿ ಚಿತ್ರ

ಮಹಿಳೆಯೊಬ್ಬರಿಗೆ ಸಾರ್ವಜನಿಕವಾಗಿ ಕಿರುಕುಳ ನೀಡಿದ ಪ್ರಕರಣದಲ್ಲಿ ದೊಡ್ಡ ಮೊತ್ತವನ್ನು ಟ್ರಂಪ್ ಅವರು ದಂಡವಾಗಿ ತೆತ್ತ ವಿಚಾರವನ್ನು ಬೈಡನ್ ಪ್ರಸ್ತಾಪಿಸಿದರು. 'ನಿಮ್ಮ ಪತ್ನಿ ಗರ್ಭಿಣಿಯಾಗಿದ್ದ ಅವಧಿಯಲ್ಲಿ ನೀವು ನೀಲಿ ಚಿತ್ರ ತಾರೆಯೊಂದಿಗೆ ಇಡೀ ರಾತ್ರಿ ಕಳೆದಿದ್ದೀರಿ' ಎಂದು ಟೀಕಿಸಿದರು. 'ಬೀಡಾಡಿ ಬೆಕ್ಕಿನ ಚಾರಿತ್ರ್ಯ ನಿಮ್ಮದು' ಎಂದು ಹರಿಹಾಯ್ದರು.

ಅಮೆರಿಕದ ವಿವಿಧ ನ್ಯಾಯಾಲಯಗಳು ಟ್ರಂಪ್ ವಿರುದ್ಧ ನೀಡಿರುವ ತೀರ್ಪುಗಳು ಮತ್ತು ಟ್ರಂಪ್ ಬೆಂಬಲಿಗರು ಅಮೆರಿಕದ ಸಂಸತ್ ಮೇಲೆ ದಾಳಿ ಮಾಡಿದ ವಿಚಾರಗಳನ್ನೂ ಬೈಡನ್ ಪ್ರಸ್ತಾಪ ಮಾಡಿದರು.

ಟ್ರಂಪ್ ಅವರು ಹಾಲಿ ಸರ್ಕಾರದ ವಲಸೆ ನೀತಿಯನ್ನು ಉಲ್ಲೇಖಿಸಿ ಬೈಡನ್ ವಿರುದ್ಧ ಹರಿಹಾಯ್ದರು. 'ನಮ್ಮದು ಈಗ ಅನಾಗರಿಕ ದೇಶ ಎನಿಸಿದೆ. ಅಮೆರಿಕದ ಗಡಿಗಳನ್ನು ಅವರು (ಬೈಡನ್) ಎಲ್ಲರಿಗೂ ಮುಕ್ತವಾಗಿ ತೆರೆದರು. ಅಕ್ರಮವಾಗಿ ನಮ್ಮ ದೇಶ ಪ್ರವೇಶಿಸಿದವರನ್ನು ಹೊರಹಾಕಬೇಕು. ಅವರನ್ನು ಸಾಧ್ಯವಾದಷ್ಟು ಬೇಗ ಹೊರಹಾಕದಿದ್ದರೆ, ನಮ್ಮ ದೇಶವನ್ನು ನಾಶಪಡಿಸಲಿದ್ದಾರೆ' ಎಂದು ದೂರಿದರು.


'ಅವರು (ಅಕ್ರಮ ವಲಸಿಗರು) ನ್ಯೂಯಾರ್ಕ್ ನಗರ ಮತ್ತು ಇತರ ಸ್ಥಳಗಳಲ್ಲಿ ಐಷಾರಾಮಿ ಹೋಟೆಲ್‌ಗಳಲ್ಲಿ ವಾಸಿಸುತ್ತಿದ್ದಾರೆ. ನಮ್ಮ ಮಾಜಿ ಯೋಧರು ಬೀದಿಗೆ ಬಿದ್ದಿದ್ದಾರೆ. ಸರ್ಕಾರವು ಅವರ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ. ಬೈಡನ್ ನಮ್ಮ ಸೈನಿಕರನ್ನು ಇಷ್ಟಪಡುವುದಿಲ್ಲ' ಎಂದು ಪ್ರತಿಪಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬೈಡನ್, 'ಟ್ರಂಪ್ ಆಡಿದ ಪ್ರತಿಯೊಂದು ಮಾತು ಕೂಡಾ ಸುಳ್ಳು' ಎಂದರು.

ಸುದ್ದಿ 2 ನಿಮಿಷ

ಷೇರು ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಸತತ ನಾಲ್ಕು ವಹಿವಾಟು ದಿನಗಳಿಂದ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು, ಬ್ಯಾಂಕಿಂಗ್, ಹಣಕಾಸು ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಶುಕ್ರವಾರ ಇಳಿಕೆ ಕಂಡಿವೆ.

ಲಾಭದ ಗಳಿಕೆಗೆ ಹೂಡಿಕೆದಾರರು ಮುಂದಾಗಿದ್ದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು.



ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 210 ಅಂಶ ಇಳಿಕೆ ಕಂಡು 79,032ಕ್ಕೆ ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 428 ಅಂಶ ಏರಿಕೆಯಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) 33 ಅಂಶ ಕಡಿಮೆಯಾಗಿ 24,010ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 129 ಅಂಶ ಹೆಚ್ಚಳವಾಗಿತ್ತು.

ಇಂಡಸ್‌ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಭಾರ್ತಿ ಏರ್‌ಟೆಲ್, ಕೋಟಕ್ ಮಹೀಂದ್ರಾ ಬ್ಯಾಂಕ್, ಮಾರುತಿ, ಜೆಎಸ್‌ಡಬ್ಲ್ಯು ಸ್ಟೀಲ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯ ಇಳಿದಿವೆ.

ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಮೋಟರ್ಸ್, ಏಷ್ಯನ್ ಪೇಂಟ್ಸ್, ನೆಸ್ಲೆ ಮತ್ತು ಟೈಟನ್ ಷೇರು ಮೌಲ್ಯ ಏರಿಕೆಯಾಗಿದೆ.

ಸಣ್ಣ ಉಳಿತಾಯದ ಬಡ್ಡಿದರ ಮತ್ತೆ ಯಥಾಸ್ಥಿತಿ

ನವದೆಹಲಿ (ಪಿಟಿಐ): ಜುಲೈ 1ರಿಂದ ಆರಂಭವಾಗುವ ತ್ರೈಮಾಸಿಕದಲ್ಲಿ ಸುಕನ್ಯಾ ಸಮೃದ್ಧಿ ಸೇರಿದಂತೆ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡದೆ ಕೇಂದ್ರ ಸರ್ಕಾರವು, ಯಥಾಸ್ಥಿತಿ ಕಾಯ್ದುಕೊಂಡಿದೆ.

2024–25ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ನಿಗದಿಪಡಿಸಿರುವ ಬಡ್ಡಿದರವು ಜುಲೈ 1ರಿಂದ ಸೆಪ್ಟೆಂಬರ್ 30ರ ವರೆಗೆ ಮುಂದುವರಿಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಪ್ರಸ್ತುತ ಸುಕನ್ಯಾ ಸಮೃದ್ಧಿ ಶೇ 8.2, ಪಿಪಿಎಫ್ ಶೇ 7.1, ಅಂಚೆ ಕಚೇರಿಯ ಉಳಿತಾಯ ಠೇವಣಿ ಶೇ 4, ಕಿಸಾನ್ ವಿಕಾಸ್ ಪತ್ರ ಶೇ 7.5, ಎನ್‌ಎಸ್‌ಸಿ ಶೇ 7.7 ಹಾಗೂ ಮಾಸಿಕ ಉಳಿತಾಯ ಯೋಜನೆಗೆ ಶೇ7.4 ಬಡ್ಡಿದರ ನಿಗದಿಪಡಿಸಲಾಗಿದೆ.

ಏರ್‌ಟೆಲ್: ಶುಲ್ಕ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಿಪೇಯ್ಡ್ ಮತ್ತು ಪೋಸ್ಟ್‌ಪೇಯ್ಡ್ ಮೊಬೈಲ್ ಸೇವೆಗಳ ಶುಲ್ಕವನ್ನು ಶೇ 10ರಿಂದ ಶೇ 21ರವರೆಗೆ ಹೆಚ್ಚಿಸಲಾಗುವುದು ಎಂದು ದೇಶದ ಪ್ರಮುಖ ದೂರಸಂಪರ್ಕ ಸೇವಾ ಸಂಸ್ಥೆಯಾದ ಭಾರ್ತಿ ಏರ್‌ಟೆಲ್ ಶುಕ್ರವಾರ ತಿಳಿಸಿದೆ.

ಈ ಪರಿಷ್ಕೃತ ದರ ಹೆಚ್ಚಳವು ಜುಲೈ 3ರಿಂದ ಜಾರಿಗೆ ಬರಲಿದೆ. ರಿಲಯನ್ಸ್ ಜಿಯೊ ಬೆಲೆ ಏರಿಕೆ ಮಾಡುವುದಾಗಿ ಘೋಷಿಸಿದ ಮರುದಿನವೇ ಏರ್‌ಟೆಲ್ ಕೂಡ ದರ ಹೆಚ್ಚಿಸಿದೆ. ಎರಡೂವರೆ ವರ್ಷಗಳ ಬಳಿಕ ಶುಲ್ಕ ಹೆಚ್ಚಳಕ್ಕೆ ಟೆಲಿಕಾಂ ಕಂಪನಿಗಳು ಮುಂದಾಗಿವೆ.

₹179 ಮೊತ್ತದ ಅನಿಯಮಿತ ಕರೆ ಯೋಜನೆಯ ದರವನ್ನು ₹199ಕ್ಕೆ ಹೆಚ್ಚಿಸಿದೆ. ₹455 ಯೋಜನೆ ₹509ಕ್ಕೆ, ₹1,799 ಯೋಜನೆಯನ್ನು ₹1,999ಕ್ಕೆ ಏರಿಕೆ ಮಾಡಿದೆ. 28 ದಿನದ ನಿತ್ಯ 1 ಜಿ.ಬಿ ಡೇಟಾದ ಯೋಜನೆಯ ದರವನ್ನು ₹265ರಿಂದ ₹299ಕ್ಕೆ ಮತ್ತು ಒಂದೂವರೆ ಜಿ.ಬಿಯ ₹299 ಪ್ಲಾನ್ ದರವನ್ನು ₹349ಕ್ಕೆ ಹೆಚ್ಚಿಸಲಾಗಿದೆ.

ಗ್ರಾಹಕರ ಮೇಲಿನ ಹೊರೆಯನ್ನು ತಗ್ಗಿಸಲು ಯೋಚಿಸಿ ಬೆಲೆ ಏರಿಕೆ ಮಾಡಿದ್ದೇವೆ. ಭಾರತದಲ್ಲಿ ದೂರಸಂಪರ್ಕ ಕಂಪನಿಗಳು ಆರ್ಥಿಕವಾಗಿ ಆರೋಗ್ಯಕರ ವ್ಯವಹಾರ ಮಾಡಬೇಕು ಎಂದಿದ್ದರೆ ಕಂಪನಿಗಳು ಪ್ರತಿ ಬಳಕೆದಾರನಿಂದ ಪಡೆಯುವ ಸರಾಸರಿ ಆದಾಯವು (ಎಆರ್‌ಪಿಯು) ₹300ಕ್ಕಿಂತ ಹೆಚ್ಚಾಗಿರಬೇಕು ಎಂದು ಭಾರ್ತಿ ಏರ್‌ಟೆಲ್ ಹೇಳಿದೆ.

ವೊಡಾಫೋನ್ ಐಡಿಯಾ ಕೂಡ ಜುಲೈ 4ರಿಂದ ಜಾರಿಗೆ ಬರುವಂತೆ ಶೇ 11–24ರವರೆಗೆ ದರ ಹೆಚ್ಚಳ ಮಾಡಿದೆ.

ಜಿಯೊ ಕಂಪನಿಯು, ಮೊಬೈಲ್ ಸೇವೆಯ ದರವನ್ನು ಶೇ 12ರಿಂದ 27ರವರೆಗೆ ಹೆಚ್ಚಿಸುವುದಾಗಿ ಗುರುವಾರ ತಿಳಿಸಿತ್ತು.

ಮೂಲ ಸೌಕರ್ಯ ವಲಯದ ಬೆಳವಣಿಗೆ ಶೇ 6.3ರಷ್ಟು ದಾಖಲು

ನವದೆಹಲಿ (ಪಿಟಿಐ): ಕಲ್ಲಿದ್ದಲು, ನೈಸರ್ಗಿಕ ಅನಿಲ ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಆರೋಗ್ಯಕರ ಬೆಳವಣಿಗೆಯಿಂದ ಪ್ರಮುಖ ಎಂಟು ಮೂಲ ಸೌಕರ್ಯ ವಲಯಗಳ ಬೆಳವಣಿಗೆ ಮೇ ತಿಂಗಳಲ್ಲಿ ಶೇ 6.3ರಷ್ಟು ದಾಖಲಾಗಿದೆ.

ಏಪ್ರಿಲ್‌ನಲ್ಲಿ ಈ ವಲಯಗಳ ಬೆಳವಣಿಗೆ ಶೇ 6.7ರಷ್ಟಿತ್ತು. 2023ರ ಮೇ ತಿಂಗಳಲ್ಲಿ ಇದು ಶೇ 5.2ರಷ್ಟು ಬೆಳವಣಿಗೆ ಆಗಿತ್ತು ಎಂದು ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಎಂಟು ವಲಯಗಳಾಗಿವೆ.

ಈ ವಲಯಗಳು ದೇಶದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ (ಐಐಪಿ) ಶೇ 40.27ರಷ್ಟು ಪಾಲು ಹೊಂದಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಹೊಸಚಾಲಿ	32009-35019	ಶಿರಸಿ	
ಕೋಕ	18000-28500	ಶಿವಮೊಗ್ಗ		ಬೆಟ್ಟೆ	30001-42899
ಹೊಸತು	28500-37500	ಬೆಟ್ಟೆ	42619-53909	ಬಿಳಿಗೋಟು	23069-29861
ಹಳತು	37500-45500	ಗೊರಬಲು	20009-33269	ಚಾಲಿ	31508-36109
ಚಿತ್ರದುರ್ಗ		ರಾಶಿ	30009-50869	ಕೆಂಪುಗೋಟು	23000-27269
ಅಪಿ	48600-49000	ಸರಕು	53300-82007	ರಾಶಿ	44899-47699
ಬೆಟ್ಟೆ	34600-35000	ಸಿದ್ದಾಪುರ		ಯಲ್ಲಾಪುರ	
ಕೆಂಪುಗೋಟು	28600-29000	ಬಿಳಿಗೋಟು	25611-28409	ಬಿಳಿಗೋಟು	21899-30600
ರಾಶಿ	48100-48500	ಚಾಲಿ	32599-35099	ಚಾಲಿ	30899-35699
ಕುಮಟ		ಕೋಕ	25509-28789	ಕೋಕ	6869-27292
ಚಿಪ್ಪು	25499-28899	ಕೆಂಪುಗೋಟು	26469-27419	ಕೆಂಪುಗೋಟು	24218-31399
ಕೋಕ	14019-24009	ರಾಶಿ	42899-46509	ರಾಶಿ	45030-54809
ಫ್ಯಾಕ್ಟರಿ	10159-20490	ತಟ್ಟಿಬೆಟ್ಟೆ	32619-44099	ತಟ್ಟಿಬೆಟ್ಟೆ	34689-44318
ಹಳೆಚಾಲಿ	36099-37599				

ಎನ್‌ಪಿಎಸ್: ವಹಿವಾಟಿನ ದಿನವೇ ಪಾವತಿಗೆ ಪಿಎಫ್‌ಆರ್‌ಡಿಎ ಅನುಮತಿ


ನವದೆಹಲಿ (ಪಿಟಿಐ): ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ (ಎನ್‌ಪಿಎಸ್) ಚಂದಾದಾರರಿಗೆ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಜುಲೈ 1ರಿಂದ ಅನ್ವಯವಾಗುವಂತೆ ಟಿ + 0 ಪಾವತಿ ಮಾಡಲು ಅನುಮತಿ ನೀಡಿದೆ.

ಬೆಳಿಗ್ಗೆ 11ರ ವರೆಗೆ ಟ್ರಸ್ಟಿ ಬ್ಯಾಂಕ್ ಸ್ವೀಕರಿಸಿದ ಎನ್‌ಪಿಎಸ್ ಕೊಡುಗೆಗಳನ್ನು ಅದೇ ದಿನದಲ್ಲಿ ಹೂಡಿಕೆ ಮಾಡಲಾಗುತ್ತದೆ ಮತ್ತು ಚಂದಾದಾರರು ಅದೇ ದಿನದ ನಿವ್ವಳ ಲಾಭವನ್ನು ಪಡೆಯುತ್ತಾರೆ. ಇದನ್ನೇ ಟಿ + 0 ಎಂದು ಕರೆಯಲಾಗುತ್ತದೆ.

ಇಲ್ಲಿಯವರೆಗೆ, ಟ್ರಸ್ಟಿ ಬ್ಯಾಂಕ್ ಸ್ವೀಕರಿಸಿದ ಕೊಡುಗೆಗಳನ್ನು ಮುಂದಿನ ದಿನದಂದು (ಟಿ + 1) ಹೂಡಿಕೆ ಮಾಡಲಾಗುತ್ತಿತ್ತು. ಅಂದರೆ ಹಿಂದಿನ ದಿನದವರೆಗೆ ಸ್ವೀಕರಿಸಿದ ಕೊಡುಗೆಗಳನ್ನು ಮರುದಿನ ಹೂಡಿಕೆ ಮಾಡಲಾಗುತ್ತಿತ್ತು ಎಂದು ಹೇಳಿದೆ.

'ಶ್ರೀಮಂತ ದೇಶಗಳು ಹವಾಮಾನ ಧನಸಹಾಯ ಒದಗಿಸಲಿ'

ನವದೆಹಲಿ (ಪಿಟಿಐ): ಇಂಗಾಲದ ಗರಿಷ್ಠ ಹೊರಸೂಸುವಿಕೆಗೆ ಚಾರಿತ್ರಿಕವಾಗಿ ಜವಾಬ್ದಾರಿಯಾದಂಥ ಮುಂದುವರಿದ ದೇಶಗಳು, ಹವಾಮಾನ ಬಿಕ್ಕಟ್ಟನ್ನು ಎದುರಿಸಲು ಅಭಿವೃದ್ಧಿಶೀಲ ದೇಶಗಳಿಗೆ ಹಣಕಾಸು ನೆರವು ನೀಡುವ ಜವಾಬ್ದಾರಿ ಹೊರಲು ಮುಂದೆ ಬರಬೇಕು ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಶುಕ್ರವಾರ ಹೇಳಿದರು.



ಭೂಪೇಂದ್ರ ಯಾದವ್

ಅಜರ್‌ಬೈಜಾನ್‌ನ ಬಾಕು ನಗರದಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಹವಾಮಾನ ಸಮ್ಮೇಳನದಲ್ಲಿ ಹವಾಮಾನ ಧನಸಹಾಯ ಎನ್ನುವುದು ಪ್ರಮುಖ ವಿಷಯವಾಗಿದೆ.


ಸಮ್ಮೇಳನದಲ್ಲಿ 'ನ್ಯೂ ಕಲೆಕ್ಟಿವ್ ಕ್ವಾಂಟಿಫೈಡ್ ಗೋಲ್' (ಎನ್‌ಸಿಕ್ಯುಜಿ) ಬಗ್ಗೆ ಒಪ್ಪಿಗೆ ಸೂಚಿಸಬೇಕಿದ್ದು, ಅದರಂತೆ 2025ರಿಂದ ಆರಂಭಿಸಿ ಪ್ರತಿ ವರ್ಷ ಮುಂದುವರಿದ ದೇಶಗಳು ಅಭಿವೃದ್ಧಿಶೀಲ ದೇಶಗಳಿಗಾಗಿ ಹಣ ಸಂಗ್ರಹ ಮಾಡಬೇಕಿದೆ.

'ಟೈಮ್ಸ್ ನೆಟ್‌ವರ್ಕ್' ಆಯೋಜಿಸಿದ್ದ ಹವಾಮಾನ ಶೃಂಗಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಯಾದವ್, 'ತಾಪಮಾನ ಏರಿಕೆ ಎನ್ನುವುದು ಜಾಗತಿಕ ವಿದ್ಯಮಾನ. ಇಂಗಾಲದ ಹೊರಸೂಸುವಿಕೆಯ ಹೆಚ್ಚಳದಿಂದ ಜಾಗತಿಕವಾಗಿ ತಾಪಮಾನ ಏರಿಕೆ ಆಗುತ್ತಿದೆ ಎಂದು ಐಪಿಸಿಸಿ ವರದಿಗಳು ಹೇಳುತ್ತಿವೆ. ಹವಾಮಾನ ಬದಲಾವಣೆ ಕಡಿಮೆ ಮಾಡುವ ದಿಸೆಯಲ್ಲಿ ಈಗಾಗಲೇ ಹಲವು ದೇಶಗಳು ಸಿದ್ಧತೆ ಆರಂಭಿಸಿವೆ. ನವೀಕರಿಸಬಹುದಾದ ಇಂಧನ ವಲಯದಲ್ಲಾಗಲಿ ಅಥವಾ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದರಲ್ಲಾಗಲಿ ಭಾರತವು ತನ್ನ ಹವಾಮಾನ ಗುರಿ ಸಾಧಿಸಿದೆ' ಎಂದರು.

'ಸಮಾನ ಬೆಳವಣಿಗೆ ಸಾಧಿಸಲು, ಮುಂದುವರಿದ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆ ಹಣಕಾಸಿನ, ತಾಂತ್ರಿಕ ನೆರವನ್ನು ಒದಗಿಸಬೇಕು' ಎಂದರು.

₹ 170 ಲಕ್ಷ ಕೋಟಿ ಮೀರಿದ ಕೇಂದ್ರದ ಸಾಲ

ಕೇಂದ್ರ ಸರ್ಕಾರದ ಒಟ್ಟು ಸಾಲವು 2024ರ ಮಾರ್ಚ್ ಅಂತ್ಯದ ವೇಳೆಗೆ ₹171.78 ಲಕ್ಷ ಕೋಟಿಗೆ ಏರಿಕೆಯಾಗಿದೆ. 2023ರ ಡಿಸೆಂಬರ್ ಅಂತ್ಯದಿಂದ ಆರಂಭಗೊಂಡು 2024ರ ಮಾರ್ಚ್ ಅಂತ್ಯದ ವೇಳೆಗೆ ಶೇ 3.4ರಷ್ಟು ಏರಿಕೆಯಾಗಿದೆ ಎಂದು ಹಣಕಾಸು ಸಚಿವಾಲಯದ ಸಾರ್ವಜನಿಕ ಸಾಲದ ನಿರ್ವಹಣಾ ತ್ರೈಮಾಸಿಕ ವರದಿಯಲ್ಲಿ (ಜನವರಿ–ಮಾರ್ಚ್, 2024) ಹೇಳಲಾಗಿದೆ.



ವಿತ್ತೀಯ ಕೊರತೆ ಶೇ 3ರಷ್ಟು

ಈ ಆರ್ಥಿಕ ವರ್ಷದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿನ ಕೇಂದ್ರ ಬಜೆಟ್‌ನ ವಿತ್ತೀಯ ಕೊರತೆಯು ಶೇ 3ರಷ್ಟಾಗಿದೆ. ಲೋಕಸಭೆ ಚುನಾವಣೆಯ ಕಾರಣ ನೀತಿ ಸಂಹಿತೆ ಜಾರಿಯಲ್ಲಿತ್ತು. ಈ ಕಾರಣದಿಂದಾಗಿ ಸರ್ಕಾರವು ಕಡಿಮೆ ವೆಚ್ಚ ಮಾಡಿದೆ ಎಂದು ಲೆಕ್ಕಪತ್ರ ಮಹಾನಿಯಂತ್ರಕರ ವರದಿಯಲ್ಲಿ ಹೇಳಲಾಗಿದೆ. 2023–24ನೇ ಸಾಲಿನ ಆರ್ಥಿಕ ವರ್ಷದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬಜೆಟ್‌ನ ವಿತ್ತೀಯ ಕೊರತೆಯು ಶೇ 11.8ರಷ್ಟಿತ್ತು. 2023–24ನೇ ಸಾಲಿನಲ್ಲಿ ಬಜೆಟ್‌ನ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. ಇದು ಶೇ 5.08ರಷ್ಟಾಗಲಿದೆ ಎಂದು ಅಂದಾಜು ಮಾಡಲಾಗಿತ್ತು.

ವಿತ್ತೀಯ ಕೊರತೆ ಪ್ರಮಾಣ

11.8% 2023–24ನೇ ಸಾಲಿನ ಏಪ್ರಿಲ್–ಮೇ ತಿಂಗಳು	3% 2024–25ನೇ ಸಾಲಿನ ಏಪ್ರಿಲ್–ಮೇ ತಿಂಗಳು

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರವು ₹370 ಏರಿಕೆಯಾಗಿ, ₹72,550ಕ್ಕೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹600 ಹೆಚ್ಚಳವಾಗಿ, ₹91,200ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,322 ಡಾಲರ್ (ಅಂದಾಜು ₹1.93 ಲಕ್ಷ) ಮತ್ತು 29.20 ಡಾಲರ್‌ನಂತೆ (ಅಂದಾಜು ₹2,434) ಮಾರಾಟವಾಗಿದೆ.

ಧಾರ್ಮಿಕ ಸ್ವಾತಂತ್ರ್ಯ: ತನಗೆ ಬೇಕಾದ ಘಟನೆಗಳ ಉಲ್ಲೇಖ- ಜೈಸ್ವಾಲ್

ಅಮೆರಿಕ ವರದಿ ತಿರಸ್ಕರಿಸಿದ ಭಾರತ

ಪ್ರಜಾವಾಣಿ ವಾರ್ತೆ

ನವದೆಹಲಿ(ಪಿಟಿಐ): ಭಾರತದಲ್ಲಿನ ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಅಮೆರಿಕದ ವಿದೇಶಾಂಗ ಇಲಾಖೆಯ ವರದಿಯಲ್ಲಿ ಮಾಡಿರುವ ಟೀಕೆಗಳನ್ನು ವಿದೇಶಾಂಗ ಸಚಿವಾಲಯ ಶುಕ್ರವಾರ ಸಾರಾಸಗಟಾಗಿ ತಿರಸ್ಕರಿಸಿದೆ.

'ಈ ವರದಿಯು ಗಾಢವಾದ ಪಕ್ಷಪಾತದಿಂದ ಕೂಡಿದ್ದು, ಮತ ಬ್ಯಾಂಕ್ ಮೇಲೆ ಕಣ್ಣಿಟ್ಟು ಸಿದ್ಧಪಡಿಸಿದಂತಿದೆ ಎಂಬುದು ಕಂಡುಬರುತ್ತಿದೆ' ಎಂದು ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

'ಭಾರತದ ವಿರುದ್ಧ ತಾನು ಈ ಮೊದಲೇ ಕಲ್ಪಿಸಿಕೊಂಡಿರುವ

> ಅಮೆರಿಕ ಸಿದ್ಧಪಡಿಸಿರುವ ಈ ವರದಿಯು ಭಾರತೀಯ ನ್ಯಾಯಾಲಯಗಳು ನೀಡಿರುವ ನಿರ್ದಿಷ್ಟ ತೀರ್ಪುಗಳ ಋಜುತ್ವವನ್ನು ಪ್ರಶ್ನಿಸುವಂತಿದೆ
>
> **ರಣಧೀರ ಜೈಸ್ವಾಲ್,** ವಿದೇಶಾಂಗ ಸಚಿವಾಲಯ ವಕ್ತಾರ

ಸಂಕಥನವನ್ನು ಪ್ರಚುರಪಡಿಸುವುದಕ್ಕಾಗಿ ಆಯ್ದ ಕೆಲ ಘಟನೆಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಜೈಸ್ವಾಲ್ ತಿರುಗೇಟು ನೀಡಿದ್ದಾರೆ.

ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ವರದಿಯನ್ನು ಇತ್ತೀಚೆಗೆ ಅಮೆರಿಕ ಬಿಡುಗಡೆ ಮಾಡಿತ್ತು.

ಈ ವರದಿ ಬಿಡುಗಡೆ ಮಾಡಿ



ಮಾತನಾಡಿದ್ದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್, 'ಭಾರತದಲ್ಲಿನ ಮತಾಂತರ ವಿರೋಧಿ ಕಾನೂನುಗಳು, ದ್ವೇಷಭಾಷಣ ಹಾಗೂ ಅಲ್ಪಸಂಖ್ಯಾತ ಸಮುದಾಯದವರ ಮನೆಗಳು ಹಾಗೂ ಪ್ರಾರ್ಥನಾ ಸ್ಥಳಗಳನ್ನು ನೆಲಸಮಗೊಳಿಸುತ್ತಿರುವುದು ಕಳವಳಕಾರಿ' ಎಂದು ಹೇಳಿದ್ದರು. ಇದಕ್ಕೆ ಭಾರತ ಈ ಪ್ರತಿಕ್ರಿಯೆ ನೀಡಿದೆ.

'ಈ ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದ್ದ ವರದಿಗಳು ಸಹ ಪಕ್ಷಪಾತದಿಂದ ಕೂಡಿದ್ದವು. ಭಾರತದ ಸಾಮಾಜಿಕ ಸಂರಚನೆ ಕುರಿತು ಅರಿವಿನ ಕೊರತೆ ಇರುವುದು ಈ ವರದಿಗಳನ್ನು ಗಮನಿಸಿದಾಗ ಕಂಡುಬರುತ್ತದೆ' ಎಂದು ಜೈಸ್ವಾಲ್ ಹೇಳಿದ್ದಾರೆ.

'ಈ ವರದಿಯನ್ನು ಭಾರತ ತಿರಸ್ಕರಿಸುತ್ತದೆ. ಈ ವರದಿಯು ಸುಳ್ಳು ಆರೋಪಗಳು ಹಾಗೂ ತಪ್ಪು ವಿವರಣೆಗಳಿಂದ ಕೂಡಿದೆ. ತನಗೆ ಬೇಕಾದ ಸಂಗತಿಗಳನ್ನು ವರದಿಯಲ್ಲಿ ಬಳಸಿಕೊಳ್ಳಲಾಗಿದೆ. ಏಕಪಕ್ಷೀಯ ಮತ್ತು ಪಕ್ಷಪಾತ ಧೋರಣೆಯ ಮೂಲಗಳನ್ನು ಆಧರಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಟಿ20 ವಿಶ್ವಕಪ್ ಫೈನಲ್ ಇಂದು • ಚೊಚ್ಚಲ ಪ್ರಶಸ್ತಿ ಜಯದ ಕನಸಲ್ಲಿ ದಕ್ಷಿಣ ಆಫ್ರಿಕಾ

ದಶಕದ ಕೊರಗು ನೀಗಿಸುವತ್ತ ಭಾರತ ಚಿತ್ತ

• ರೋಶನ್ ತ್ಯಾಗರಾಜನ್

ಬ್ರಿಜ್‌ಟೌನ್: ಇದೋ ನೋಡಿ. ಭಾರತ ತಂಡವು ಮತ್ತೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಿಶ್ವಕಪ್ ಟೂರ್ನಿಯ ಫೈನಲ್ ಹಂತ ಪ್ರವೇಶಿಸಿದೆ.

ಕಳೆದ ಒಂದು ದಶಕದಿಂದ ತಂಡವು ಯಾವುದೇ ಐಸಿಸಿ ಟ್ರೋಫಿಯನ್ನು ಜಯಿಸಿಲ್ಲ ಎನ್ನುವುದು ಬೇರೆ ವಿಷಯ. ಆದರೆ ತಂಡವು ಜಯಿಸುತ್ತದೆ ಎಂಬ ವಿಶ್ವಾಸ ಪ್ರತಿಯೊಬ್ಬರಿಗೂ ಇದೆ. ಬಹುಶಃ ದಕ್ಷಿಣ ಆಫ್ರಿಕಾ ತಂಡಕ್ಕೂ ಇದೇ ರೀತಿ ಅನಿಸುತ್ತಿರಬೇಕು. ಏಕೆಂದರೆ ರೋಹಿತ್ ಶರ್ಮಾ ಅವರ ಬಳಗವು ಇದುವರೆಗೆ ಆಡಿರುವ ಕ್ರಿಕೆಟ್ ಉತ್ಕೃಷ್ಟ ಮಟ್ಟದ್ದಾಗಿದೆ. ಈ ರೀತಿಯಾಗಿ ಸಂಘಟಿತ ಶಕ್ತಿಯೊಂದಿಗೆ ಆಡಿದ ತಂಡ ಇಂದಿನ ಕಾಲಘಟ್ಟದಲ್ಲಿ ಮತ್ತೊಂದಿರಲಿಕ್ಕಿಲ್ಲ.

ಇದೊಂದು ಅಪರೂಪದ ತಂಡ ಸಂಯೋಜನೆಯಾಗಿದೆ. 70 ಮತ್ತು 80ರ ದಶಕದಲ್ಲಿದ್ದ ವೆಸ್ಟ್ ಇಂಡೀಸ್, 90 ಮತ್ತು 2000ರ ದಶಕದ ಆಸ್ಟ್ರೇಲಿಯಾದ ತಂಡಗಳಿಗೆ ಇಂದಿನ ರೋಹಿತ್ ಬಳಗಕ್ಕೂ ಅಪಾರ ಸಾಮ್ಯತೆ ಇದೆ. ಆದರೆ ತಮ್ಮ ಸಾಮರ್ಥ್ಯ ಮತ್ತು ಪ್ರತಿಭೆಗೆ ಟ್ರೋಫಿ ಜಯದ ಮುದ್ರೆಯನ್ನು ಒತ್ತುವ ಕಾರ್ಯ ಬಾಕಿಯಿದೆ.

ಏಕೆಂದರೆ; ಪ್ರಶಸ್ತಿಗಳು ಶ್ರೇಷ್ಠತೆಯನ್ನು ಸಾರುತ್ತವೆ. ಹತ್ತು ವರ್ಷಗಳಿಂದ ಈ ಕೊರಗು ಭಾರತ ತಂಡವನ್ನು ಕಾಡುತ್ತಿದೆ. ಇದೀಗ ದಕ್ಷಿಣ ಆಫ್ರಿಕಾ ತಂಡವನ್ನು ಫೈನಲ್‌ನಲ್ಲಿ ಮಣಿಸಿ ಅದನ್ನು ನೀಗಿಸಿಕೊಳ್ಳುವ ಕಾಲ ಬಂದಿದೆ.

ಭಾರತದ ಕ್ರಿಕೆಟ್ ರಂಗದ ಕೆಲವು ಶ್ರೇಷ್ಠ ಸಾಧಕರು ಕಣದಲ್ಲಿ ಕಾಣಿಸಿಕೊಳ್ಳಲಿರುವ ಕೊನೆಯ ಟಿ20 ವಿಶ್ವಕಪ್ ಟೂರ್ನಿ ಇದಾಗಿದೆ. ಆದ್ದರಿಂದ ತಮ್ಮ ವಿದಾಯವನ್ನು ಅವಿಸ್ಮರಣೀಯವಾಗಿಸಿಕೊಳ್ಳುವ ಕನಸು ಅವರ ಕಂಗಳಲ್ಲಿದೆ. ಜೊತೆಗೆ ಈ ಹಿಂದೆ ಅನುಭವಿಸಿದ ಹತಾಶೆಗಳ ನೋವನ್ನು ಶಮನಗೊಳಿಸಿಕೊಳ್ಳಲೂ ಈ ಜಯ ಅಗತ್ಯವಾಗಿದೆ.

ಏಳು ತಿಂಗಳುಗಳ ಹಿಂದೆ ಅಹಮದಾಬಾದಿನಲ್ಲಿ ಆಸ್ಟ್ರೇಲಿಯಾ ಎದುರು (ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್) ಅನುಭವಿಸಿದ್ದ ಸೋಲಿನ ನೋವು ಇನ್ನೂ ಕಾಡುತ್ತಿದೆ. ಆ ಟೂರ್ನಿಯುದ್ದಕ್ಕೂ ಶ್ರೇಷ್ಠ ಆಟದೊಂದಿಗೆ ಅಜೇಯವಾಗಿ ಉಳಿದಿದ್ದ ತಂಡವು ಒಂದೇ ರಾತ್ರಿಯಲ್ಲಿ ನಿರಾಶೆಯ ಮಡುವಿಗೆ ಉರುಳಲು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಕಾರಣರಾಗಿದ್ದರು.

ಅಂದಿನ ಲೋಪಗಳನ್ನು ಸುಧಾರಿಸಿಕೊಂಡು ಈಗ ಮುನ್ನುಗ್ಗಲು ಭಾರತ ತಂಡ ಸನ್ನದ್ಧವಾಗಿದೆ. ವಿರಾಟ್ ಕೊಹ್ಲಿ ಮತ್ತು ಶಿವಂ ದುಬೆ ಅವರಿಬ್ಬರನ್ನು ಬಿಟ್ಟರೆ ಉಳಿದೆಲ್ಲರೂ ತಂಡಕ್ಕೆ ಅಗತ್ಯವಿದ್ದ ಸಂದರ್ಭಗಳಲ್ಲಿ ಉಪಯುಕ್ತ ಕಾಣಿಕೆ ನೀಡಿದ್ದಾರೆ. ಈ ಹಿಂದೆ ಹೊರಹೊಮ್ಮಿದ್ದ ಚಾಂಪಿಯನ್ ಆಟಗಾರರಂತೆ ಈ ತಂಡದವರೂ ಹೊಸ ಭಾಷ್ಯ ಬರೆಯುವ ವಿಶ್ವಾಸ ಮೂಡಿಸಿದ್ದಾರೆ.

ಭಾರತ ತಂಡವು 2007ರಲ್ಲಿ ನಡೆದಿದ್ದ ಮೊಟ್ಟಮೊದಲ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. 2014ರ ಏಪ್ರಿಲ್ 6ರಂದು ನಡೆದಿದ್ದ ಟೂರ್ನಿ ಫೈನಲ್‌ನಲ್ಲಿ ಶ್ರೀಲಂಕಾ ತಂಡವು ಭಾರತ ತಂಡದ ಕನಸನ್ನು ಭಗ್ನಗೊಳಿಸಿತ್ತು. ಅಲ್ಲಿಂದ ಇಲ್ಲಿಯವರೆಗೂ ತಂಡವು ಫೈನಲ್ ಕೂಡ ತಲುಪಿರಲಿಲ್ಲ.

ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ ಅವರು ಜೊತೆಗೂಡಿ ತಂಡವು ಪ್ರಮುಖ ಘಟ್ಟಗಳಲ್ಲಿ ಸೋಲುತ್ತಿರುವ ಕಾರಣಗಳನ್ನು ಪತ್ತೆ ಹಚ್ಚಿದರು. ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡರು. ಭರವಸೆ ಬಿತ್ತಿದರು. ಹೊಸ ಅಲೆಗಳು ಏಳಲು ಕಾರಣರಾದರು.

ಪ್ರತಿಭಾ ಸಂಪನ್ಮೂಲ ಅಪಾರವಾಗಿದ್ದಾಗ ಭಾರತ ತಂಡವು ಶ್ರೇಷ್ಠವಾಗಲು ಸಾಧ್ಯವಾಗಿದೆ. ಅದೇ ಸಾಮರ್ಥ್ಯದಿಂದ ಈ ಹಂತದವರೆಗೂ ಬಂದು ನಿಂತಿದೆ. ತಂಡದ ಈ ಹೊಂದಾಣಿಕೆ ಸಾಮರ್ಥ್ಯವು ಶನಿವಾರ ರಾತ್ರಿ ಸಾಬೀತಾಗಲಿದೆ.


ಅಕ್ಷರ್ ಪಟೇಲ್, ವಿರಾಟ್ ಕೊಹ್ಲಿ ಮತ್ತು ಕುಲದೀಪ್ ಯಾದವ್ –ಪಿಟಿಐ ಚಿತ್ರ

ಮುಖ್ಯಾಂಶಗಳು

- ಸೆಮಿಫೈನಲ್‌ನಲ್ಲಿ ಮಿಂಚಿದ್ದ ಸ್ಪಿನ್ನರ್‌ಗಳಾದ ಅಕ್ಷರ್ ಪಟೇಲ್, ಕುಲದೀಪ್ ಯಾದವ್
- ಅಮೋಘ ಲಯದಲ್ಲಿರುವ ವೇಗಿ ಜಸ್‌ಪ್ರೀತ್ ಬೂಮ್ರಾ
- ಪ್ರಸಕ್ತ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದ ಭಾರತ–ದಕ್ಷಿಣ ಆಫ್ರಿಕಾ

ಬಲಾಬಲ (ಟಿ20)

ಪಂದ್ಯ	26
ಭಾರತ ಜಯ	14
ದ.ಆಫ್ರಿಕಾ ಜಯ	11
ಫಲಿತಾಂಶವಿಲ್ಲ	1

ತಂಡಗಳು (ಸಂಭವನೀಯ)

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ರಿಷಬ್ ಪಂತ್ (ವಿಕೆಟ್ ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್.
ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರೀಜಾ ಹೆನ್ರಿಕ್ಸ್, ಟ್ರಿಸ್ಟನ್ ಸ್ಟಬ್ಸ್, ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್, ಮಾರ್ಕೊ ಯಾನ್ಸೆನ್, ಕೇಶವ್ ಮಹಾರಾಜ್, ಕಗಿಸೊ ರಬಾಡ, ಎನ್ರಿಚ್ ನಾಕಿಯಾ, ತಬ್ರೇಜ್ ಶಮ್ಸಿ.
ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್


ದಕ್ಷಿಣ ಆಫ್ರಿಕಾದ ಎನ್ರಿಚ್ ನಾಕಿಯಾ ಮತ್ತು ಕಗಿಸೊ ರಬಾಡ –ಎಪಿ/ಪಿಟಿಐ ಚಿತ್ರ


ಜಸ್‌ಪ್ರೀತ್ ಬೂಮ್ರಾ


ರೋಹಿತ್ ಶರ್ಮಾ ಮತ್ತು ರಾಹುಲ್ ದ್ರಾವಿಡ್

‘ದ್ರಾವಿಡ್‌ಗಾಗಿ ಕಪ್ ಜಯಿಸಿ’

ನವದೆಹಲಿ (ಪಿಟಿಐ): ಬೆಂಗಳೂರಿನ ಪುಸ್ತಕ ಮಳಿಗೆಯೊಂದರಲ್ಲಿ ವಾಚನ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಆ ಕಾರ್ಯಕ್ರಮಕ್ಕೆ ಕ್ರಿಕೆಟ್ ದಂತಕತೆ ರಾಹುಲ್ ದ್ರಾವಿಡ್ ಬಂದಿದ್ದರು. ಆದರೆ ಅವರು ವೇದಿಕೆಯ ಮೇಲೆ ಇರಲಿಲ್ಲ. ಜನರು ಕುಳಿತಿದ್ದ ಹಿಂದಿನ ಸಾಲಿನಲ್ಲಿ ನಿರುಮ್ಮಳವಾಗಿ ಆಸೀನರಾಗಿದ್ದರು.

ಇದನ್ನು ಗಮನಿಸಿದ ಆಯೋಜಕರು ಅವರನ್ನು ವೇದಿಕೆಯ ಮುಂಭಾಗದ ಸಾಲಿಗೆ ಆಹ್ವಾನಿಸಿದರು. ಆದರೆ ದ್ರಾವಿಡ್ ಅವರು ಸೌಜನ್ಯಯುತವಾಗಿ ನಿರಾಕರಿಸಿ ಹಿಂದಿನ ಆಸನದಲ್ಲಿಯೇ ಉಳಿದರು. ದ್ರಾವಿಡ್ ಅವರು ಯಾವತ್ತೂ ಆಡಂಬರದ ತಳಕು ಬಳುಕಿನಲ್ಲಿ ಗುರುತಿಸಿಕೊಂಡವರು ಅಲ್ಲ. ಅದು ಅವರ ಜಾಯಮಾನವೂ ಅಲ್ಲ.

ಶನಿವಾರ ನಡೆಯಲಿರುವ ಟಿ20 ವಿಶ್ವಕಪ್ ಫೈನಲ್ ಪಂದ್ಯದ ಫಲಿತಾಂಶ ಏನೇ ಆಗಲಿ, ಭಾರತ ತಂಡದ ಮುಖ್ಯ ಕೋಚ್ ಆಗಿರುವ ದ್ರಾವಿಡ್ ಅವರ ಕ್ರಿಕೆಟ್ ಜೀವನದ ಒಂದು ಸುತ್ತು ಪೂರ್ಣವಾಗಲಿದೆ. ಈ ಪಂದ್ಯದ ನಂತರ ಅವರು ಈ ಹುದ್ದೆಯಿಂದ ನಿರ್ಗಮಿಸುವರು.

ಅದಕ್ಕಾಗಿಯೇ ಅವರಿಗೆ ವಿಜಯದ ವಿದಾಯ ನೀಡಬೇಕು ಎಂಬುದು ಅಭಿಮಾನಿಗಳ ಮನದಿಂಗಿತ. ಅದಕ್ಕಾಗಿ ಸಾಮಾಜಿಕ ಜಾಲತಾಣದಲ್ಲಿ #ಡೂಇಟ್‌ಫಾರ್‌ದ್ರಾವಿಡ್ ಎಂಬ ಹ್ಯಾಷ್‌ಟ್ಯಾಗ್ ರಚಿಸಲಾಗಿದ್ದು ಅಪಾರ ಸ್ಪಂದನೆ ವ್ಯಕ್ತವಾಗಿದೆ.

ಆದರೆ ದ್ರಾವಿಡ್ ಇದನ್ನು ಒಪ್ಪುವುದಿಲ್ಲ. ತಂಡಕ್ಕಾಗಿ ಕಪ್ ಜಯಿಸಬೇಕು ಎಂಬುದು ಅವರ ದೃಢನಂಬಿಕೆ.

ಈ ಬಗ್ಗೆ ಸ್ಟಾರ್ ಸ್ಪೋರ್ಟ್ಸ್ ವಾಹಿನಿಗೆ ಪ್ರತಿಕ್ರಿಯಿಸಿರುವ ದ್ರಾವಿಡ್, ‘ಅತ್ಯುತ್ತಮ ದರ್ಜೆಯ ಕ್ರಿಕೆಟ್ ಆಡುವುದು ನಮ್ಮ ಗುರಿ. ನನ್ನ ವೈಯಕ್ತಿಕ ಸ್ವಭಾವ ಮತ್ತು ವ್ಯಕ್ತಿತ್ವಕ್ಕೆ ವಿರುದ್ಧವಾದುದನ್ನು ಬಯಸುವುದಿಲ್ಲ. ಈ ಕುರಿತು ನಾನು ಮಾತನಾಡುವುದು ಇಲ್ಲ’ ಎಂದರು.

‘ಯಾರೋ ಒಬ್ಬರಿಗಾಗಿ ಸಾಧಿಸುವುದು ಎಂಬ ಭಾವನೆಯ ಬಗ್ಗೆ ನನಗೆ ನಂಬಿಕೆಯಿಲ್ಲ. ನೀವು ಪರ್ವತಾರೋಹಿಗೆ ಹೋಗಿ ಮೌಂಟ್ ಎವರೆಸ್ಟ್ ಏಕೆ ಏರುತ್ತೀರಿ ಎಂದು ಕೇಳಬಹುದು. ಅದಕ್ಕೆ ಆ ವ್ಯಕ್ತಿಯು ಮೌಂಟ್ ಎವರೆಸ್ಟ್ ಅಲ್ಲಿರುವುದರಿಂದ ಏರಲು ಬಯಸುತ್ತೇನೆ ಎಂದೇ ಹೇಳುತ್ತಾರೆ. ವಿಶ್ವಕಪ್ ಇರುವುದರಿಂದ ಅದನ್ನು ಗೆಲ್ಲಲು ಬಯಸುವೆ. ಅದನ್ನು ಯಾರಿಗೋಸ್ಕರವೂ ಅಲ್ಲ’ ಎಂದು ದ್ರಾವಿಡ್ ಮಾರ್ಮಿಕವಾಗಿ ಹೇಳಿದರು.

ಫೈನಲ್‌ಗೆ ಗಫಾನಿ, ರಿಚರ್ಡ್ ಅಂಪೈರ್

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ನ್ಯೂಜಿಲೆಂಡ್‌ನ ಕ್ರಿಸ್ ಗಫಾನಿ ಮತ್ತು ಇಂಗ್ಲೆಂಡ್‌ನ ರಿಚರ್ಡ್ ಇಲಿಂಗ್‌ವರ್ಥ್ ಅವರು ಶನಿವಾರ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಫೈನಲ್‌ನಲ್ಲಿ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುವರು.

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ರಿಚರ್ಡ್ ಕೆಟಲ್‌ಬರೊ ಅವರು ಟಿ.ವಿ. ಅಂಪೈರ್ ಆಗಿರುವರು. ರಾಡ್ ಟಕರ್ ನಾಲ್ಕನೇ ಅಂಪೈರ್ ಆಗಿದ್ದಾರೆ ಎಂದು ಐಸಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿಟಿಯು ವ್ಯಾಪ್ತಿಯ ಕಾಲೇಜುಗಳ ಅಥ್ಲೆಟಿಕ್ಸ್

ರಿಲೇ: ತುಮಕೂರು, ಮೈಸೂರಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಮೈಸೂರು: ತುಮಕೂರಿನ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪುರುಷ ಹಾಗೂ ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಮಹಿಳಾ ರಿಲೇ ತಂಡಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ ರಾಜ್ಯ ಮಟ್ಟದ 25ನೇ ಅಥ್ಲೆಟಿಕ್ಸ್ ಕೂಟದಲ್ಲಿ ಗುರುವಾರ ಚಿನ್ನ ಗೆದ್ದವು.

ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಮೂರನೇ ದಿನ 4x100 ರಿಲೇ ಫೈನಲ್‌ನಲ್ಲಿ ತೇಜಸ್, ಕೃಷಿಕ್, ಚಿರಂತ್ ಹಾಗೂ ಹರ್ಷ ಅವರನ್ನು ಒಳಗೊಂಡ ಸಿದ್ಧಗಂಗಾ ಕಾಲೇಜು ತಂಡವು 45.13 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು ಹಾಗೂ ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದವು. ಮಹಿಳೆಯರ 4x100 ರಿಲೇ ಫೈನಲ್‌ನಲ್ಲಿ ಪ್ರೇರಣಾ, ಸೋನಿಕಾ, ಅನ್ನಪೂರ್ಣ ಹಾಗೂ ಆರ್ಯಾ ರಾಜ್ ಅವರನ್ನು ಒಳಗೊಂಡ ಮೈಸೂರಿನ ವಿದ್ಯಾವರ್ಧಕ ಎಂಜಿನಿ ಯರಿಂಗ್ ಕಾಲೇಜಿನ ತಂಡವು 58.32 ಸೆಕೆಂಡುಗಳಲ್ಲಿ ಚಿನ್ನ ಗೆದ್ದರೆ, ಮಂಗಳೂರಿನ ಸಹ್ಯಾದ್ರಿ ಎಂಜಿನಿ ಯರಿಂಗ್ ಕಾಲೇಜು ಹಾಗೂ ಬೆಂಗಳೂರಿನ ಎಂವಿಜೆ ಕಾಲೇಜು ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚಿಗೆ ಕೊರಳೊಡ್ಡಿದವು.


ಮೈಸೂರಿನಲ್ಲಿ ನಡೆಯುತ್ತಿರುವ ವಿಟಿಯು ವ್ಯಾಪ್ತಿಯ ಕಾಲೇಜುಗಳ ರಾಜ್ಯ ಮಟ್ಟದ 25ನೇ ಅಥ್ಲೆಟಿಕ್ ಕೂಟದಲ್ಲಿ ಶುಕ್ರವಾರ ನಡೆದ 110 ಮೀ. ಹರ್ಡಲ್ಸ್‌ನಲ್ಲಿ ಸ್ಪರ್ಧಿಗಳ ಮಿಂಚಿನ ಓಟ – ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಫಲಿತಾಂಶ: ಪುರುಷರು: ಟ್ರಿಪಲ್ ಜಂಪ್: ಎಸ್.ಅಜಯ್ (ರಾಮಯ್ಯ ಎಂಜಿನಿಯರಿಂಗ್ ಕಾಲೇಜು)–1, ಮೊಹಮ್ಮದ್ ತಾವಾಯಿಫ್ (ಸಹ್ಯಾದ್ರಿ ಕಾಲೇಜು, ಮಂಗಳೂರು. ದೂರ: 12.87 ಮೀ.)–2, ಆನಂದ್ ಮಾರುತಿ ವೆರ್ಣೇಕರ್ (ಅಮೃತ ಎಂಜಿನಿಯರಿಂಗ್ ಕಾಲೇಜು)–3. 110 ಮೀ. ಹರ್ಡಲ್ಸ್: ಹರ್ಷ (ಸಿದ್ಧಗಂಗಾ ಎಂಜಿನಿಯರಿಂಗ್ ಕಾಲೇಜು, ತುಮಕೂರು. ಕಾಲ: 17.29 ಸೆಕೆಂಡ್)–1, ಕಾರ್ತಿಕ್–2, ಸನ್ಮಿತ್ (ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು, ಪುತ್ತೂರು)–3; 5,000 ಮೀಟರ್ಸ್ ಓಟ: ಎ.ಎಂ.ತಿಶನ್ (ಕೆವಿಜಿ ಕಾಲೇಜು, ಸುಳ್ಯ. ಕಾಲ: 17 ನಿ 54.67 ಸೆ)–1, ಆರ್.ಶರತ್ (ಬಿಎಂಎಸ್ ಕಾಲೇಜು–2), ಅಕ್ಷಯ್ (ಶ್ರೀನಿವಾಸ ತಾಂತ್ರಿಕ ವಿದ್ಯಾಲಯ)–3.

ಮಹಿಳೆಯರು: ಟ್ರಿಪಲ್ ಜಂಪ್: ಅರ್ಪಿತಾ ಬಾಲಚಂದ್ರ ನಾಯಜ್ (ವಿವೇಕಾನಂದ ಕಾಲೇಜು, ಪುತ್ತೂರು, ದೂರ: 9.20 ಮೀ.)–1, ಲಾವಣ್ಯ (ನವಕೀಸ್ ಕಾಲೇಜು, ಹಾಸನ)–2, ಬಿ.ಸ್ಫೂರ್ತಿ (ಗ್ಲೋಬಲ್ ಅಕಾಡೆಮಿ ಕಾಲೇಜು, ಬೆಂಗಳೂರು)–3; 5,000 ಮೀಟರ್ಸ್ ಓಟ: ಕೆ.ಟಿ.ಚೊಂಡಮ್ಮ (ಕೂರ್ಗ್ ಎಂಜಿನಿಯರಿಂಗ್ ಕಾಲೇಜು, ಪೊನ್ನಂಪೇಟೆ. ಕಾಲ: 21 ನಿ 52.70 ಸೆಕೆಂಡ್)–1, ಶ್ರೇಯಾ (ಶ್ರೀದೇವಿ ಎಂಜಿನಿಯರಿಂಗ್ ಕಾಲೇಜು, ಮಂಗಳೂರು)–2, ವಿಭಾ ವಾಸುದೇವನ್ (ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು–3).

ಸೂಪರ್‌ಬೆಟ್ ಚೆಸ್ ಕ್ಲಾಸಿಕ್ ಟೂರ್ನಿ

ಡ್ರಾ ಪಂದ್ಯದಲ್ಲಿ ಗುಕೇಶ್


ಗುಕೇಶ್

ಬುಕಾರೆಸ್ಟ್ (ರುಮೇನಿಯಾ), (ಪಿಟಿಐ): ವಿಶ್ವ ಚಾಂಪಿಯನ್ ಚಾಲೆಂಜರ್ ಡಿ.ಗುಕೇಶ್, ಸೂಪರ್‌ಬೆಟ್ ಚೆಸ್ ಕ್ಲಾಸಿಕ್ ಟೂರ್ನಿಯ ಎರಡನೇ ಸುತ್ತಿನಲ್ಲಿ ರಷ್ಯಾದ ಇಯಾನ್ ನಿಪೊಮ್‌ನಿಷಿ ಜೊತೆ ಹೋರಾಡಿ ‘ಡ್ರಾ’ ಮಾಡಿಕೊಂಡರು. ಭಾರತದ ಇನ್ನೊಬ್ಬ ಆಟಗಾರ ಆರ್. ಪ್ರಜ್ಞಾನಂದ, ಫ್ರಾನ್ಸ್‌ನ ಮ್ಯಾಕ್ಸಿಮ್ ವೇಷಿಯರ್ ಲಗ್ರಾವ್ ಅವರ ಜೊತೆ ಪಾಯಿಂಟ್ ಹಂಚಿಕೊಂಡರು.

10 ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯು ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಎರಡನೇ ದಿನವಾದ ಗುರುವಾರ, ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ (ಅಮೆರಿಕ) ಅವರು ಅಪರೂಪಕ್ಕೆ ಲೋಪ ಎಸಗಿ, ಸ್ವದೇಶದ ವೆಸ್ಲಿ ಸೊ ಎದುರು ‘ಡ್ರಾ’ ಮಾಡಿಕೊಳ್ಳಬೇಕಾಯಿತು.

ಫ್ರಾನ್ಸ್‌ನ ಇನ್ನೊಬ್ಬ ಆಟಗಾರ ಅಲಿರೇಝಾ ಫಿರೋಜಾ ಇನ್ನೊಂದು ಪಂದ್ಯದಲ್ಲಿ ಉಜ್ಬೇಕಿಸ್ತಾನದ ಆಟಗಾರ ನಾಡಿರ್ಬೆಕ್ ಅಬ್ದುಸತ್ತಾರೋವ್ ಅವರ ಮೇಲೆ ಜಯಗಳಿಸಿದರು.

ಸುಮಾರು ಮೂರು ಕೋಟಿ ಬಹುಮಾನ ಮೊತ್ತ ಹೊಂದಿರುವ ಈ ಟೂರ್ನಿಯ ಇನ್ನೊಂದು ಪಂದ್ಯ ಡ್ರಾ ಆಯಿತು. ಹಾಲೆಂಡ್‌ನ ಅನಿಶ್ ಗಿರಿ, ಟೂರ್ನಿಯಲ್ಲಿ ಅತಿ ಕಡಿಮೆ ರ್‍ಯಾಂಕಿಂಗ್ ಹೊಂದಿರುವ ಡೇಕ್ ಬೊಗ್ದಾನ್ ಡೇನಿಯಲ್ (ರುಮೇನಿಯಾ) ಜೊತೆ ಪಾಯಿಂಟ್‌ಗ ಹಂಚಿಕೊಂಡರು.

ರೌಂಡ್‌ರಾಬಿನ್ ಟೂರ್ನಿಯಲ್ಲಿ ಈಗ ಏಳು ಸುತ್ತುಗಳ ಆಟ ಉಳಿದಿದ್ದು, ಗುಕೇ ಶ್, ಕರುವಾನ ತಲಾ ಒಂದೂವರೆ ಪಾಯಿಂಟ್ಸ್ ಗಳಿಸಿ ಮುನ್ನಡೆಯಲ್ಲಿದ್ದಾರೆ. ಅಲಿರೇಜಾ, ಪ್ರಜ್ಞಾನಂದ, ಅನಿಶ್ ಗಿರಿ, ವೆಸ್ಲಿ ಸೊ, ವೇಷಿಯಲ್ ಲಗ್ರಾವ್ ಮತ್ತು ನಿಪೊಮ್‌ನಿಷಿ ತಲಾ ಒಂದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅಬ್ದುಸತ್ತಾರೋವ್ ಮತ್ತು ಡೇಕ್ ಬೊಗ್ದಾನ್ ಅರ್ಧ ಪಾಯಿಂಟ್ಸ್ ಗಳಿಸಿದ್ದಾರೆ.

ಡೋಪಿಂಗ್: ಮನು ಅಮಾನತು


ಮನು. ಎಪಿ/ ಪಿಟಿಐ ಸಂಗ್ರಹ ಚಿತ್ರ

ಪಂಚಕುಲಾ (ಹರಿಯಾಣ), (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಭರವಸೆ ಹೊಂದಿದ್ದ ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ, ಕನ್ನಡಿಗ ಡಿ.ಪಿ.ಮನು ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕ (ನಾಡಾ) ತಾತ್ಕಾಲಿಕವಾಗಿ ಅಮಾನತು ಮಾಡಿದೆ.

ಡೋಪಿಂಗ್ ಪರೀಕ್ಷೆಯಲ್ಲಿ ಅನಾಬಾಲಿಕ್ ಸ್ಟಿರಾಯಿಡ್ ಸೇವನೆ ಮಾಡಿದ್ದು ಪತ್ತೆಯಾಗಿದೆ. ಈ ವರ್ಷದ ಏಪ್ರಿಲ್‌ನಲ್ಲಿ ಇಂಡಿಯನ್ ಗ್ರ್ಯಾನ್‌ಪ್ರಿ ಸಂದರ್ಭದಲ್ಲಿ ಪರೀಕ್ಷೆ ನಡೆದಿತ್ತು ಎಂದು ಬೆಳವಣಿಗೆಯನ್ನು ಬಲ್ಲ ಮೂಲವೊಂದು ಪಿಟಿಐಗೆ ತಿಳಿಸಿದೆ. ಇದಕ್ಕೆ ಮೊದಲು ಅವರಿಗೆ ಯಾವುದೇ ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ತಡೆಯಲು ಭಾರತ ಅಥ್ಲೆಟಿಕ್ ಫೆಡರೇಷನ್‌ಗೆ ನಾಡಾ ಸೂಚಿಸಿತ್ತು.

ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ 24 ವರ್ಷ ವಯಸ್ಸಿನ ಮನು ಅವರು ವಿಶ್ವ ರ್‍ಯಾಂಕಿಂಗ್ ಆಧಾರದಲ್ಲಿ ಒಲಿಂಪಿಕ್ಸ್‌ಗೆ ಆಯ್ಕೆಯಾಗುವುದು ಬಹುತೇಕ ಖಚಿತವಾಗಿತ್ತು. ಆದರೆ ಈಗ ಅವರಿಗೆ ‘ಪ್ಯಾರಿಸ್ ಟಿಕೆಟ್’ ಕೈತಪ್ಪುವುದು ಬಹುತೇಕ ಖಚಿತವಾಗಿದೆ.

ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ–ರಾಜ್ಯ ಚಾಂಪಿಯನ್‌ಷಿಪ್ಸ್‌ನ ಪ್ರಾಥಮಿಕ ಪಟ್ಟಿಯಲ್ಲಿ ಅವರ ಹೆಸರು ಇತ್ತು. ಆದರೆ ಪರಿಷ್ಕೃತ ಪಟ್ಟಿಯಿಂದ ಹೆಸರನ್ನು ಕೈಬಿಡಲಾಗಿದೆ.

ಸ್ಪರ್ಧಾ ಕೂಟಗಳಲ್ಲಿ ಭಾಗವಹಿಸದಂತೆ ಮನು ಅವರನ್ನು ತಡೆಯುವಂತೆ ‘ನಾಡಾ’, ಫೆಡರೇಷನ್‌ಗೆ ಸೂಚನೆ ನೀಡಿದೆ ಎಂದು ಎಎಫ್‌ಐ ಅಧ್ಯಕ್ಷ ಅದಿಲ್ ಸುಮರಿವಾಲಾ ಪಿಟಿಐಗೆ ತಿಳಿಸಿದರು. ಆದರೆ ಅವರು ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ದೋಷಿಯಾಗಿದ್ದಾರೆಯೇ ಎಂಬುದನ್ನು ಅವರು ಖಚಿತಪಡಿಸಲಿಸಿಲ್ಲ.

‘ಆ ರೀತಿಯದ್ದೇನಾದರೂ (ಡೋಪಿಂಗ್ ಪ್ರಕರಣ) ಇರಬಹುದು. ಆದರೆ ವಾಸ್ತವ ಏನೆಂದು ನಮಗೆ ತಿಳಿದಿಲ್ಲ. ಮನು ಅವರಿಗೆ ಸ್ಪರ್ಧೆಗಳಲ್ಲಿ ಅವಕಾಶ ನೀಡಬಾರದು ಎಂದು ಎಎಫ್‌ಐ ಕಚೇರಿಗೆ ಗುರುವಾರ ‘ನಾಡಾ’ದಿಂದ ಕರೆ ಬಂದಿತ್ತು’ ಎಂದು ಸುಮರಿವಾಲಾ ವಿವರಿಸಿದರು.

ಕಳೆದ ತಿಂಗಳ 15 ರಿಂದ 19ರವರೆಗೆ ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್ ಕೂಟದಲ್ಲಿ ಮನು ಎರಡನೇ ಸ್ಥಾನ (ಮೊದಲ ಸ್ಥಾನ ನೀರಜ್ ಚೋಪ್ರಾ) ಪಡೆದಿದ್ದರು.

ಈ ತಿಂಗಳ ಆರಂಭದಲ್ಲಿ ತೈಪಿಯಲ್ಲಿ ನಡೆದ ತೈವಾನ್ ಅಥ್ಲೆಟಿಕ್ಸ್ ಓಪನ್ ಕೂಟದಲ್ಲಿ ಅವರು ಜಾವೆಲಿನ್‌ಅನ್ನು 81.58 ಮೀ. ದೂರ ಎಸೆದು ಸ್ವರ್ಣ ಪದಕ ವಿಜೇತರಾಗಿದ್ದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಅವರು ಹಾಲಿ 15ನೇ ಸ್ಥಾನದಲ್ಲಿದ್ದಾರೆ. ಪ್ಯಾರಿಸ್ ಕೂಟಕ್ಕೆ ಆಯ್ಕೆಯಾಗುವ 32 ಅಥ್ಲೀಟುಗಳಲ್ಲಿ ಅವರೂ ಆಯ್ಕೆಯಾಗುವ ಹಾದಿಯಲ್ಲಿದ್ದರು.

ಇಟಲಿಗೆ ಇಂದು ಸ್ವಿಸ್ ಸವಾಲು

ಯುರೋ ಕಪ್ 2024 ಜರ್ಮನಿ

ಬರ್ಲಿನ್ (ಎಪಿ): ಹಾಲಿ ಚಾಂಪಿಯನ್ ಇಟಲಿ ತಂಡವು, ಯುರೊ 2024 ಫುಟ್‌ಬಾಲ್ ಟೂರ್ನಿಯ ಮೊದಲ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶನಿವಾರ ಸ್ವಿಜರ್ಲೆಂಡ್ ತಂಡವನ್ನು ಎದುರಿಸಲಿದ್ದು, ಆ ತಂಡದ ವಿರುದ್ಧ ಪ್ರಾಬಲ್ಯ ಮುಂದುವರಿಸುವ ಗುರಿ ಹೊಂದಿದೆ. 31 ವರ್ಷಗಳಿಂದ ಸ್ವಿಜರ್ಲೆಂಡ್ ಒಮ್ಮೆಯೂ ಇಟಲಿ ತಂಡವನ್ನು ಸೋಲಿಸಿಲ್ಲ.

ಒಟ್ಟಾರೆ ಈ ಎರಡು ತಂಡಗಳು ಇದುವರೆಗೆ 61 ಬಾರಿ ಮುಖಾಮುಖಿ ಆಗಿದ್ದು ಸ್ವಿಸ್ ತಂಡ ಗೆದ್ದಿದ್ದು ಬರೇ ಎಂಟು ಸಲ. ಆದರೆ ಈ ವರ್ಷ ಸ್ವಿಜರ್ಲೆಂಡ್ ತಂಡ ಅಜೇಯ ಸಾಧನೆ ಪ್ರದರ್ಶಿಸಿದೆ.

ಈ ಕ್ರೀಡಾಂಗಣ ಇಟಲಿ ಪಾಲಿಗೆ ಸವಿನೆನಪಿನ ಬುತ್ತಿ. 2006ರ ವಿಶ್ವಕಪ್‌ನಲ್ಲಿ ಇಲ್ಲಿನ ಒಲಿಂಪಿಯಾ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಇಟಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡವನ್ನು ಸೋಲಿಸಿತ್ತು.

ಆದರೆ ಈ ಬಾರಿಯ ಆವೃತ್ತಿಯಲ್ಲಿ ಇಟಲಿಯ ಆಟ ಉತ್ಕೃಷ್ಟ ಮಟ್ಟದಲ್ಲಿಲ್ಲ. ‘ಬಿ’ ಗುಂಪಿನಲ್ಲಿ ಅಲ್ಬೇನಿಯಾ ವಿರುದ್ಧ 2–1ರಲ್ಲಿ ಗೆದ್ದಿತ್ತು, ನಂತರ ಸ್ಪೇನ್‌ಗೆ ಮಣಿದಿತ್ತು. ಕ್ರೊವೇಷ್ಯಾ ವಿರುದ್ಧ 1–1 ಡ್ರಾ ಮಾಡಲು ಬೆವರುಹರಿಸಬೇಕಾಯಿತು. ಸ್ವಿಜರ್ಲೆಂಡ್ ‘ಎ’ ಗುಂಪಿನಲ್ಲಿ 3–1 ರಿಂದ ಹಂಗರಿ ವಿರುದ್ಧ ಜಯಗಳಿಸಿದ ನಂತರ, ಸ್ಕಾಟ್ಲೆಂಡ್ ಮತ್ತು ಆತಿಥೇಯ ಜರ್ಮನಿ ವಿರುದ್ಧ ಪಂದ್ಯಗಳನ್ನು 1–1 ರಲ್ಲಿ ಡ್ರಾ ಮಾಡಿಕೊಂಡಿತ್ತು.

ಜರ್ಮನಿ–ಡೆನ್ಮಾರ್ಕ್ ಹಣಾಹಣಿ: ಆತಿಥೇಯ ಜರ್ಮನಿ ತಂಡ ಡೋರ್ಟ್‌ಮುಂಡ್‌ನಲ್ಲಿ ಭಾನುವಾರ ನಡೆಯಲಿರುವ ಇನ್ನೊಂದು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡೆನ್ಮಾರ್ಕ್ ತಂಡವನ್ನು ಎದುರಿಲಿದೆ.

ವಿಶೇಷವೆಂದರೆ ಈ ಬಾರಿಯ ಟೂರ್ನಿಯಲ್ಲಿ ಜರ್ಮನಿ ಮತ್ತು ಡೆನ್ಮಾರ್ಕ್ ಮಾತ್ರ ಅಜೇಯವಾಗುಳಿದಿವೆ. ಜರ್ಮನಿ ‘ಎ’ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು. ಅದು ಸ್ಕಾಟ್ಲೆಂಡ್, ಹಂಗರಿ ತಂಡಗಳನ್ನು ಸೋಲಿಸಿ, ಸ್ವಿಜರ್ಲೆಂಡ್ ವಿರುದ್ಧ ಡ್ರಾ ಮಾಡಿಕೊಂಡಿತ್ತು. ಇನ್ನೊಂದೆಡೆ ಡೆನ್ಮಾರ್ಕ್ ‘ಡಿ’ ಗುಂಪಿನಿಂದ ನಾಕೌಟ್‌ಗೇರಿತ್ತು. ಅದು ಸ್ಲೊವೇನಿಯಾ, ಇಂಗ್ಲೆಂಡ್ ಮತ್ತು ಸರ್ಬಿಯಾ ವಿರುದ್ಧ ಮೂರೂ ಪಂದ್ಯಗಳನ್ನು ‘ಡ್ರಾ’ ಮಾಡಿಕೊಂಡಿತ್ತು.

100 ಮೀ. ಓಟ: ಸ್ನೇಹಾ ಪ್ರಥಮ


ಎಸ್.ಎಸ್. ಸ್ನೇಹಾ

ಪಂಚಕುಲಾ, (ಪಿಟಿಐ): ಕರ್ನಾಟಕದ ಎಸ್.ಎಸ್. ಸ್ನೇಹಾ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪನ್ ಮಹಿಳೆಯರ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು.

ಸ್ನೇಹಾ 11.62 ಸೆಕೆಂಡುಗಳಲ್ಲಿ ಓಟ ಪೂರೈಸಿ ಪ್ರಥಮ ಸ್ಥಾನ ಪಡೆದರೆ, ತಮಿಳುನಾಡಿನ ಗಿರಿಧರಣಿ ರವಿಕುಮಾರ್ (11.77 ಸೆಕೆಂಡುಗಳು) ಮತ್ತು ತೆಲಂಗಾಣದ ನಿತ್ಯ ಗಂಧೇ (11.79 ಸೆಕೆಂಡ್‌ಗಳು) ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ.

ಪುರುಷರ ವಿಭಾಗದಲ್ಲಿ ಪಂಜಾಬ್‌ನ ಗುರಿಂದರ್‌ವೀರ್ ಸಿಂಗ್ (10.32 ಸೆ.) ವೇಗದ ಓಟಗಾರ ಎನಿಸಿದರು.

ಮಹಿಳಾ ಟೆಸ್ಟ್: ದಕ್ಷಿಣ ಆಫ್ರಿಕಾ ವಿರುದ್ಧ ರನ್‌ಹೊಳೆ ಹರಿಸಿದ ಭಾರತ

ಶಫಾಲಿ ವೇಗದ ದ್ವಿಶತಕ, ಮಂದಾನ ಶತಕ


ದ್ವಿಶತಕ ಬಾರಿಸಿದ ಶಫಾಲಿ ವರ್ಮಾ ಮತ್ತು ಉಪನಾಯಕಿ ಸ್ಮೃತಿ ಮಂದಾನಾ ಅವರು ಏಕೈಕ ಮಹಿಳಾ ಟೆಸ್ಟ್ ಪಂದ್ಯದಲ್ಲಿ ದಾಖಲೆ ಜೊತೆಯಾಟದ ವೇಳೆ ಖುಷಿ ಹಂಚಿಕೊಂಡಿದ್ದು ಹೀಗೆ.... ಪಿಟಿಐ ಚಿತ್ರ

- ಶಫಾಲಿ ವರ್ಮಾ ಟೆಸ್ಟ್‌ನಲ್ಲಿ ದ್ವಿಶತಕ ಹೊಡೆದ ಭಾರತದ ಎರಡನೇ ಆಟಗಾರ್ತಿ. ಮಿತಾಲಿ ರಾಜ್ ಮೊದಲನೆಯವರು. ಇಂಗ್ಲೆಂಡ್ ವಿರುದ್ಧ ಅವರು 214 ರನ್ (407 ಎಸೆತ) ಗಳಿಸಿದ್ದರು.
- ಶಫಾಲಿ ಅತಿ ವೇಗದ ದ್ವಿಶತಕದ ದಾಖಲೆ ಬರೆದರು. ಈ ಹಿಂದಿನ ದಾಖಲೆ ಅನ್ನಾಬೆಲ್ ಸದರ್ಲೆಂಡ್ (ಆಸ್ಟ್ರೇಲಿಯಾ) ಹೆಸರಿನಲ್ಲಿತ್ತು. ಅವರು ಕಳೆದ ಫೆಬ್ರುವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 248 ಎಸೆತಗಳಲ್ಲಿ ದ್ವಿಶತಕ ಗಳಿಸಿದ್ದರು

ಚೆನ್ನೈ (ಪಿಟಿಐ): ಯುವ ಆಟಗಾರ್ತಿ ಶಫಾಲಿ ವರ್ಮಾ ದಾಖಲೆ ವೇಗದ ದ್ವಿಶತಕ ಬಾರಿಸಿ ಮಿಂಚಿದರು. ಪ್ರವಾಸಿ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಶುಕ್ರವಾರ ಚೆಪಾಕ್ ಕ್ರೀಡಾಂಗಣದಲ್ಲಿ ಆರಂಭವಾದ ಏಕೈಕ ಮಹಿಳಾ ಟೆಸ್ಟ್ ಪಂದ್ಯದಲ್ಲಿ ಭಾರತ ರನ್ ಮಳೆಯನ್ನೇ ಸುರಿಸಿತು. ದಿನದಾಟದ ಅಂತ್ಯಕ್ಕೆ ಆತಿಥೇಯರು 4 ವಿಕೆಟ್‌ಗೆ 525 ರನ್‌ಗಳ ಬೃಹತ್ ಮೊತ್ತ ಪೇರಿಸಿದರು.

ಈ ರನ್ ಸುಗ್ಗಿಯಲ್ಲಿ ಹಲವು ದಾಖಲೆಗಳನ್ನು ಸ್ಥಾಪನೆಯಾದವು. ಇದು ಟೆಸ್ಟ್ ಪಂದ್ಯವೊಂದರಲ್ಲಿ ಒಂದೇ ದಿನ ದಾಖಲಾದ ಅತಿ ಹೆಚ್ಚಿನ ಮೊತ್ತ. ಶಫಾಲಿ ವರ್ಮಾ ಕೇವಲ 194 ಎಸೆತಗಳಲ್ಲಿ 204 ರನ್ ಹೊಡೆದರು.

ಶಫಾಲಿ, ಸ್ಮೃತಿ ಮಂದಾನ (149, 161ಎ) ಜೊತೆ ಮೊದಲ ವಿಕೆಟ್‌ಗೆ 292 ರನ್ ಸೇರಿಸಿ ಭಾರಿ ಮೊತ್ತಕ್ಕೆ ಸುಭದ್ರ ಅಡಿಪಾಯ ಹಾಕಿಕೊಟ್ಟರು. ಪ್ರವಾಸಿ ತಂಡದ ಆಟಗಾರ್ತಿಯರು ಚೆಂಡಿನ ಹಿಂದೆ ಓಡಿ ಓಡಿ ಸುಸ್ತಾದರು.

ಟೆಸ್ಟ್‌ನಲ್ಲಿ ಒಂದೇ ದಿನ ಅತಿ ಹೆಚ್ಚು ರನ್ ಗಳಿಸಿದ್ದ 89 ವರ್ಷಗಳ ಹಳೆಯ ದಾಖಲೆಯೂ ಈ ರನ್ ಮಳೆಯಲ್ಲಿ ಕೊಚ್ಚಿಹೋಯಿತು. ಇಂಗ್ಲೆಂಡ್ ವನಿತೆಯರು 1935ರಲ್ಲಿ ನ್ಯೂಜಿಲೆಂಡ್ ಎದುರು ಕ್ರೈಸ್ಟ್‌ಚರ್ಚ್‌ನ ಲ್ಯಾಂಕೆಸ್ಟರ್ ಪಾರ್ಕ್‌ನಲ್ಲಿ 4 ವಿಕೆಟ್‌ಗೆ 431 ರನ್ ಪೇರಿಸಿದ್ದು (ಅದೇ ದಿನ ಬೆಳಿಗ್ಗೆ ನ್ಯೂಜಿಲೆಂಡ್ 44ಕ್ಕೆ ಆಲೌಟ್ ಆಗಿದ್ದು ಸೇರಿದರೆ ಒಂದೇ ದಿನ 475 ರನ್) ಹಿಂದಿನ ದಾಖಲೆಯಾಗಿತ್ತು.

20 ವರ್ಷದ ಶಫಾಲಿ ಚಾರಿತ್ರಿಕ ದ್ವಿಶತಕ ಪೂರೈಸಿದ ಕೆಲವೇ ನಿಮಿಷಗಳ ನಂತರ ರನೌಟ್ ಆದರು. ಕೇವಲ ಐದನೇ ಟೆಸ್ಟ್ ಆಡುತ್ತಿರುವ ಅವರು 197 ಎಸೆತಗಳನ್ನೆದುರಿಸಿ 23 ಬೌಂಡರಿಗಳ ಜೊತೆಗೆ ಎಂಟು ಸಿಕ್ಸರ್‌ಗಳನ್ನು ಹೊಡೆದಟ್ಟಿದರು. ಟೆಸ್ಟ್‌ನಲ್ಲಿ ಅವರ ಹಿಂದಿನ ಗರಿಷ್ಠ ಗಳಿಕೆ 96.

ದಿನದಾಟ ನಿಸ್ಸಂದೇಹವಾಗಿ ಶಫಾಲಿ ಮತ್ತು ಸ್ಮೃತಿ ಅವರಿಗೆ ಸೇರಿತ್ತು. ಭಾರತ ಬ್ಯಾಟಿಂಗ್ ಆಯ್ದುಕೊಂಡ ನಂತರ ಶಫಾಲಿ ಮತ್ತು ಸ್ಮೃತಿ ಲಂಚ್ ವೇಳೆಗೆ ವಿಕೆಟ್ ನಷ್ಟವಿಲ್ಲದೆ 130 ರನ್ ಸೇರಿಸಿದ್ದರು. ಇವರಿಬ್ಬರ ಅಬ್ಬರದಲ್ಲಿ ಬೌಲರ್‌ಗಳಿಗೆ ಏನೂ ತೋಚದಾಯಿತು. ಹೆಚ್ಚುಕಮ್ಮಿ ಒಂದೇ ಓವರ್ ಅಂತರದಲ್ಲಿ ಇಬ್ಬರೂ ಶತಕ ಪೂರೈಸಿದರು.

292 ರನ್ ಸೇರಿಸಿದ ಬಳಿಕ ಉಪನಾಯಕಿ ಮಂದಾನ (4x27, 6x1), ಡೆಲ್ಮಿ ಟಕ್ಕರ್ ಎಸೆತದಲ್ಲಿ ಔಟ್ ಆದರು. ಇದು ಭಾರತದ ಪರ ಯಾವುದೇ ವಿಕೆಟ್‌ಗೆ ಅತಿ ಹೆಚ್ಚಿನ ಜೊತೆಯಾಟ. ಸ್ಮೃತಿ ಅವರ ಈ ಹಿಂದಿನ ಗರಿಷ್ಠ ವೈಯಕ್ತಿಕ ಗಳಿಕೆ 127 ಆಗಿತ್ತು.

ಮಹಿಳಾ ಕ್ರಿಕೆಟ್ ಇತಿಹಾಸದಲ್ಲಿ ಯಾವುದೇ ವಿಕೆಟ್‌ಗೆ ಇದು ಎರಡನೇ ಅತಿ ದೊಡ್ಡ ಜೊತೆಯಾಟ ಎನಿಸಿತು. ಆಸ್ಟ್ರೇಲಿಯಾದ ಎಲ್.ಎ.ರೀಲರ್ ಮತ್ತು ಡಿ.ಎ.ಆ್ಯನೆಟ್ಸ್ ಅವರು 1987ರಲ್ಲಿ ಇಂಗ್ಲೆಂಡ್ ವಿರುದ್ಧ ವೆದರ್ಬಿಯಲ್ಲಿ ಮೂರನೇ ವಿಕೆಟ್‌ಗೆ 309 ರನ್ ಸೇರಿಸಿದ್ದು ವಿಶ್ವದಾಖಲೆ ಆಗಿದೆ. ಮೊದಲ ವಿಕೆಟ್‌ಗೆ ಈ ಹಿಂದೆ ಅತಿ ಹೆಚ್ಚಿನ ಜೊತೆಯಾಟ ದಾಖಲಾಗಿದ್ದು ಪಾಕಿಸ್ತಾನ ಸಜ್ಜಿದಾ ಶಾ ಮತ್ತು ಕಿರಣ್ ಬಲೂಚ್ ನಡುವೆ. ವೆಸ್ಟ್ ಇಂಡೀಸ್ ವಿರುದ್ಧ 2004ರ ಟೆಸ್ಟ್‌ನಲ್ಲಿ 241 ರನ್ ಸೇರಿಸಿದ್ದರು.

ಶುಭಾ ಸತೀಶ್ (15) ಹೆಚ್ಚು ಹೊತ್ತು ನಿಲ್ಲಲಿಲ್ಲ. ಆದರೆ ಶಫಾಲಿ, ಜೆಮಿಮಾ ರಾಡ್ರಿಗಸ್ (55) ಜೊತೆ ಮೂರನೇ ವಿಕೆಟ್‌ಗೆ 86 ರನ್ ಸೇರಿಸಿದರು.

ಚಹ ವಿರಾಮದ ನಂತರ ಅವರು ಟಕರ್ ಬೌಲಿಂಗ್‌ನಲ್ಲಿ ಬೆನ್ನುಬೆನ್ನಿಗೆ ಎರಡು ಸಿಕ್ಸರ್ ಮತ್ತು ಒಂದು ರನ್ ಗಳಿಸಿ ದ್ವಿಶತಕ ಪೂರೈಸಿದರು.

ಜೆಮಿಮಾ ಟೆಸ್ಟ್‌ನಲ್ಲಿ ಮೂರನೇ ಅರ್ಧ ಶತಕ ಗಳಿಸಿ ಟಕರ್‌ಗೆ ವಿಕೆಟ್ ನೀಡಿದರು. ಆದರೆ ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 42) ಮತ್ತು ರಿಚಾ ಘೋಷ್ (ಔಟಾಗದೇ 43) ಅವರ ದಕ್ಷಿಣ ಆಫ್ರಿಕಾ ಬೌಲರ್‌ಗಳ ಗೋಳು ಹೊಯ್ದುಕೊಂಡರು.

ಸ್ಕೋರುಗಳು: ಭಾರತ ಮಹಿಳಾ ತಂಡ: 98 ಓವರುಗಳಲ್ಲಿ 4 ವಿಕೆಟ್‌ಗೆ 525 (ಶಫಾಲಿ ವರ್ಮಾ 205, ಸ್ಮೃತಿ ಮಂದಾನ 149, ಶುಭಾ ಸತೀಶ್. 15, ಜೆಮಿಮಾ ರಾಡ್ರಿಗಸ್ 55, ಹರ್ಮನ್‌ಪ್ರೀತ್ ಕೌರ್ ಔಟಾಗದೇ 42, ರಿಚಾ ಘೋಷ್ ಔಟಾಗದೇ 43; ನೇಡಿನ್ ಡಿ ಕ್ಲಾರ್ಕ್ 62ಕ್ಕೆ1, ಡೆಲ್ಮಿ ಟಕರ್ 141ಕ್ಕೆ2).



Reliance
Growth is Life
ಪ್ರತಿ ದಿನ, ಪ್ರತಿ ವಸ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಬೇಕಾ?
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
SMART BAZAAR
ಕನಿಷ್ಠ 5% ಕಡಿಮೆ ಎಂಆರ್‌ಪಿ ಪ್ರತಿದಿನ
ಸಕ್ಕರೆ 1 kg ₹9 ಪ್ರತಿದಿನ
*₹1999 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್‌ನಲ್ಲಿ
ಈಗ ತೆರೆದಿದೆ ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು, ಬಂಗಾರಪೇಟೆ.
SMART BAZAAR
SMART SUPERSTORE
DAAWAT The FINEST Presents
ಪ್ರತಿ ಮನೆಯಲ್ಲೂ ಅನ್ನಪೂರ್ಣ
Co-Powered by AASHIRVAAD
₹107/kg ಭಾರತ್ ಮೂಂಗ್ ದಾಲ್ 1 kg ಎಮ್‌ಆರ್‌ಪಿ ₹107
₹29/kg ಭಾರತ್ ರೈಸ್ 10 kg ಎಮ್‌ಆರ್‌ಪಿ ₹290
nafed
ಈಗ ಲಭ್ಯವಿದೆ
ನಟ್ ರಾಜ್ ಆಸ್ಟ್ರೇಲಿಯನ್ / ಗುಡ್ ಲೈಫ್ ಬಾದಾಮ್ 500 g
ಸ್ಮಾರ್ಟ್ ಬೆಲೆ ₹299/ ₹339
ಎಮ್‌ಆರ್‌ಪಿ ₹699 / ₹549 ಉಳಿಸಿರಿ ₹400 / ₹210
ಸೂರ್ಯಕಾಂತಿ ರಿಫೈನ್ಡ್ ಸೂರ್ಯಕಾಂತಿ / ಸಫೋಲಾ ಆಕ್ಟಿವ್ ಆಯಿಲ್ 1 L
ಸ್ಮಾರ್ಟ್ ಬೆಲೆ ₹112/ ₹115
ಎಮ್‌ಆರ್‌ಪಿ ₹145 / ₹160 ಉಳಿಸಿರಿ ₹33 / ₹45
ಫಾರ್ಚೂನ್ ರಿಫೈನ್ಡ್ ರೈಸ್ ಬ್ರಾನ್ ಹೆಲ್ದಿ ಆಯಿಲ್ 3 L + ಕೊಹಿನೂರ್ ಚಾರ್ಮಿನಾರ್ ಸೆಲೆಕ್ಟ್ ಬಾಸ್ಮತಿ ರೈಸ್ 5 kg
ಸ್ಮಾರ್ಟ್ ಬೆಲೆ ₹699
ಎಮ್‌ಆರ್‌ಪಿ ₹1124 ಉಳಿಸಿರಿ ₹425
ಲೂಸ್ ಸಕ್ಕರೆ S 1 kg
ಸ್ಮಾರ್ಟ್ ಬೆಲೆ ₹41
ಮಾರುಕಟ್ಟೆ ಬೆಲೆ ₹50
ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ಸ್ಮಾರ್ಟ್ ಬೆಲೆ ₹495
ಎಮ್‌ಆರ್‌ಪಿ ₹603 ಉಳಿಸಿರಿ ₹108
ಈಸ್ಟರ್ನ್ ಮಸಾಲೆಗಳು ಶ್ರೇಣಿ ಅಂಡ್ ಆಶೀರ್ವಾದ ಅಂಡ್ ಟಾಟಾ ಸಂಪನ್ ಬ್ಲೆಂಡೆಡ್ ಸ್ಪೈಸಸ್ ಶ್ರೇಣಿ
BUY ANY 1 GET ANY 1 FREE*
*ಎಮ್‌ಆರ್‌ಪಿ ಮೇಲೆ
ನಂದಿನಿ ಶುದ್ಧ ತುಪ್ಪ 1 L
ಸ್ಮಾರ್ಟ್ ಬೆಲೆ ₹589
ಎಮ್‌ಆರ್‌ಪಿ ₹630 ಉಳಿಸಿರಿ ₹41
ಫ್ರೋಜನ್ ತಿಂಡಿಗಳು 250 g ರಿಂದ (ಆಯ್ದ ಪ್ರಕಾರಗಳು)
50% ವರೆಗೆ ಕಡಿತ
ಎಮ್‌ಆರ್‌ಪಿ ₹100 ರಿಂದ
ಚೀಸ್ 200 g ರಿಂದ (ಆಯ್ದ ಪ್ರಕಾರಗಳು)
50% ವರೆಗೆ ಕಡಿತ
ಎಮ್‌ಆರ್‌ಪಿ ₹115 ರಿಂದ
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು)
BUY 2 GET 1 FREE
ಎಮ್‌ಆರ್‌ಪಿ ₹120 ರಿಂದ / ಯೂನಿಟ್
ರೆಡ್ ಲೇಬಲ್ ನ್ಯಾಚುರಲ್ ಕೇರ್ ಚಹಾ 1 kg
ಉಳಿಸಿರಿ ₹150
ಎಮ್‌ಆರ್‌ಪಿ ₹600 ರಿಂದ ಸ್ಮಾರ್ಟ್ ಬೆಲೆ ₹450 ರಿಂದ
ಟಾಪ್ ರಾಮೆನ್ ಮಸಾಲಾ / ನಿಸ್ಸಿನ್ ಜೀಕಿ ನೂಡಲ್ಸ್ 360 g ರಿಂದ (ಆಯ್ದ ಪ್ರಕಾರಗಳು)
BUY 2 GET 1 FREE
ಎಮ್‌ಆರ್‌ಪಿ ₹84 ರಿಂದ / ಯೂನಿಟ್
ಬೂಸ್ಟ್ / ಹಾರ್ಲಿಕ್ಸ್ ಕ್ಲಾಸಿಕ್ ಮಾಲ್ಟ್ ಹೆಲ್ತ್ ಡ್ರಿಂಕ್ 1 kg
ಉಳಿಸಿರಿ ₹150
ಎಮ್‌ಆರ್‌ಪಿ ₹595 ರಿಂದ ಸ್ಮಾರ್ಟ್ ಬೆಲೆ ₹445 ರಿಂದ
ಕೋಲ್ಗೇಟ್ ಡೆಂಟಲ್ ಕ್ರೀಮ್ 500 g / ಕ್ಲೋಸಪ್ ಪೇಸ್ಟ್ 300 g (ಆಯ್ದ ಪ್ರಕಾರಗಳು)
ಉಳಿಸಿರಿ ₹80
ಎಮ್‌ಆರ್‌ಪಿ ₹240 ರಿಂದ ಸ್ಮಾರ್ಟ್ ಬೆಲೆ ₹160 ರಿಂದ
ಡವ್ / ಪಿಯರ್ಸ್ / ಫಿಯಾಮಾ ಸೋಪ್ 125 g x 4 + 1 (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹372 ರಿಂದ ಸ್ಮಾರ್ಟ್ ಬೆಲೆ ₹249 ರಿಂದ
ಡವ್ / ಹೆಡ್ ಅಂಡ್ ಶೋಲ್ಡರ್ಸ್ / ಇಂದುಲೇಖಾ / ಕ್ಲಿನಿಕ್ ಪ್ಲಸ್ / ಪ್ಯಾಂಟೀನ್ ಶ್ಯಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹765 ರಿಂದ ಸ್ಮಾರ್ಟ್ ಬೆಲೆ ₹383 ರಿಂದ
ಸರ್ಫ್ ಎಕ್ಸೆಲ್ ಮ್ಯಾಟಿಕ್ ಲಿಕ್ವಿಡ್ 4 L (ಟಾಪ್ / ಫ್ರಂಟ್ ಲೋಡ್) (ಆಯ್ದ ಪ್ರಕಾರಗಳು)
ಫ್ಲ್ಯಾಟ್ 35% ಕಡಿತ
ಎಮ್‌ಆರ್‌ಪಿ ₹775 ರಿಂದ ಸ್ಮಾರ್ಟ್ ಬೆಲೆ ₹504 ರಿಂದ
Prestige
2 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್ + ಸ್ಟೇನ್ಲೆಸ್ ಸ್ಟೀಲ್ ಪ್ರೆಶರ್ ಕುಕ್ಕರ್ 3 L + 2 ಪೀಸ್ ನಾನ್ ಸ್ಟಿಕ್ ಸೆಟ್ (ಕಡಾಯಿ + ಫ್ರೈ ಪಾನ್)
ಸ್ಮಾರ್ಟ್ ಬೆಲೆ ₹4999
ಒಟ್ಟು ಎಮ್‌ಆರ್‌ಪಿ ₹8855
ಪಾಪ್ಯುಲರ್ ಸ್ಟೇನ್‌ಲೆಸ್ ಸ್ಟೀಲ್ ಪ್ರೆಶರ್ ಕುಕ್ಕರ್ 3 L (ಹೊರ ಮುಚ್ಚಳ)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹2390 ಸ್ಮಾರ್ಟ್ ಬೆಲೆ ₹1673
BERGNER
3 Pc ಸ್ಟೇನ್‌ಲೆಸ್ ಸ್ಟೀಲ್ ಟ್ರಿಪ್ಲಿ ಸ್ಟಿಕ್ ಕುಕ್‌ವೇರ್ ಸೆಟ್
ಸ್ಮಾರ್ಟ್ ಬೆಲೆ ₹1599
ಎಮ್‌ಆರ್‌ಪಿ ₹5100
ಕಿಚನ್ ಕ್ಲೀನಿಂಗ್ ರೇಂಜ್
ಸ್ಮಾರ್ಟ್ ಬೆಲೆ ₹59 ರಿಂದ
ಎಮ್‌ಆರ್‌ಪಿ ₹119 ರಿಂದ
LIVESMART
SMART ಸ್ಟೈಲ್ ಸೇಲ್
ಫ್ಯಾಷನ್ ₹499 ಕ್ಕಿಂತ ಕಡಿಮೆ
2000+ ಸ್ಟೈಲ್ಸ್
Style SALE
ಟಿ - ಶರ್ಟ್ ಸಂಡರ ₹499 ಈಗ ₹299
ಜೀನ್ಸ್ ಸಂಡರ ₹599 ಈಗ ₹499
ಟಿ - ಶರ್ಟ್ ಸಂಡರ ₹249 ಈಗ ₹199
ಜೀನ್ಸ್ ಸಂಡರ ₹699 ಈಗ ₹399
Prestige
3 ಪೀಸ್‌ಗಳು ಇಂಡಕ್ಷನ್ ಬೇಸ್ ನಾನ್ ಸ್ಟಿಕ್ ಕುಕ್‌ವೇರ್ ಸೆಟ್
ಫ್ಲ್ಯಾಟ್ 55% ಕಡಿತ
ಎಮ್‌ಆರ್‌ಪಿ ₹3740 ಸ್ಮಾರ್ಟ್ ಬೆಲೆ ₹1683
cello
ಓಪಲ್‌ವೇರ್ / ಲೂಸ್ ಸ್ಟೀಲ್ ಡಿನ್ನರ್‌ವೇರ್ (ರೇಂಜ್ ಆಯ್ಕೆಮಾಡಿ)
BUY 1 GET 1 FREE
ಎಮ್‌ಆರ್‌ಪಿ ₹49 ರಿಂದ
POLYSET LARAH
ಸ್ಟೋರೇಜ್ ಕಂಟೈನರ್ (ಪ್ಲಾಸ್ಟಿಕ್ / ಗಾಜಿನ)
ಸ್ಮಾರ್ಟ್ ಬೆಲೆ ₹99 ರಿಂದ
ಎಮ್‌ಆರ್‌ಪಿ ₹198 ರಿಂದ
Prestige
ಮೊನ್ಜಾ ಮಿಕ್ಸರ್ ಗ್ರೈಂಡರ್ 3 ಜಾರ್ಸ್ 750 W
ಸ್ಮಾರ್ಟ್ ಬೆಲೆ ₹2999
ಎಮ್‌ಆರ್‌ಪಿ ₹5995
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
SMART SUPERSTORE
JioMart
Reliance RETAIL
RuPay CREDIT
SBI card
10% INSTANT DISCOUNT*
WITH RELIANCE SBI CREDIT CARDS
Valid Once Per Card Per Month, Till 10 July '24. *T&C Apply
Scan to apply
sodexo Accepted here
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ